ಶನಿವಾರ, ಜನವರಿ 15, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಬ್ಬದ ಸಂಭ್ರಮ

ಆಂಧ್ರಪ್ರದೇಶದ ವಿಜಯವಾಡದಲ್ಲಿ ಶುಕ್ರವಾರ ಭೋಗಿ ಹಬ್ಬದ ನಿಮಿತ್ತ ನಡೆದ ಧಾರ್ಮಿಕ ವಿಧಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸಂಭ್ರಮದಿಂದ ಪಾಲ್ಗೊಂಡಿದ್ದರು



ಬಂಡವಾಳ ಸಂಪಾದನೆಯೂ ಕಷ್ಟ • ಅಂಗಡಿ ಮುಚ್ಚಿ ಊರಿನತ್ತ ಹೆಜ್ಜೆ

‘ಬೀಡಾ’ ವ್ಯಾಪಾರಿಗಳ ‘ಕೈ’ ಸುಡುತ್ತಿರುವ ‘ಕೋವಿಡ್’

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಆಹಾರ ಸೇವಿಸಿದ ಬಳಿಕ ಬೀಡಾ ತಿನ್ನುವುದು ಹಲವರ ಹವ್ಯಾಸ. ಅದರ ರುಚಿಗೆ ಮಾರುಹೋದವರೇ ಹೆಚ್ಚು. ಇಂಥ ‘ಬೀಡಾ’ ಮಾರಾಟದಿಂದಲೇ ಜೀವನ ಕಟ್ಟಿಕೊಂಡಿದ್ದ ನೂರಾರು ವ್ಯಾಪಾರಿಗಳ ಬದುಕಿಗೆ ಕೋವಿಡ್ ದೊಡ್ಡ ಹೊಡೆತ ನೀಡಿದೆ.

ವೀಳ್ಯದೆಲೆ, ಅಡಿಕೆ ಹಾಗೂ ಇತರೆ ಪದಾರ್ಥಗಳನ್ನು ಖರೀದಿಸಿಟ್ಟುಕೊಳ್ಳುವ ವ್ಯಾಪಾರಿಗಳು, ತಮ್ಮ ಕೈ ಚಳಕದಿಂದ ‘ಬೀಡಾ’ ತಯಾರಿಸುವುದನ್ನು ವೃತ್ತಿ ಮಾಡಿಕೊಂಡಿದ್ದಾರೆ. ನಗರದ ಕೆಲ ವ್ಯಾಪಾರಿಗಳ ‘ಬೀಡಾ’ ರುಚಿಗೆ ಹೊರ ರಾಜ್ಯ ಹಾಗೂ ಹೊರ ದೇಶಗಳ ಪ್ರಜೆಗಳು ಮನಸೋತಿದ್ದರು. ಅಂಗಡಿಗಳ ಮುಂದೆ ಗಂಟೆಗಟ್ಟಲೇ ಕಾದು ನಿಂತು, ಬೀಡಾ ತಿಂದು ಹೋಗುವವರ ಸಂಖ್ಯೆಯೂ ಅಧಿಕವಿತ್ತು.

ಆದರೆ, ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದಂತೆ ‘ಬೀಡಾ’ ಬೇಡಿಕೆ ಕಡಿಮೆ ಆಗಿದೆ. ಕೈ ಸ್ಪರ್ಶ, ಬಾಯಿ ಹಾಗೂ ಮೂಗಿನ ಮೂಲಕ ಕೊರೊನಾ ವೈರಾಣು ದೇಹ ಸೇರುವ ಎಚ್ಚರಿಕೆಯನ್ನು ತಜ್ಞರು ನೀಡಿದ್ದಾರೆ. ಇದೇ ಕಾರಣಕ್ಕೆ, ಕೈಯಿಂದ ತಯಾರಿಸುವ ‘ಬೀಡಾ’ ತಿನ್ನುವವರ ಸಂಖ್ಯೆ ಕ್ಷೀಣಿಸಿದೆ.



ನಗರದ ಅಂಗಡಿಯೊಂದರಲ್ಲಿ ಬೀಡಾ ಸಿದ್ಧಪಡಿಸುತ್ತಿರುವ ವ್ಯಾಪಾರಿ – ಪ್ರಜಾವಾಣಿ ಚಿತ್ರ

ಕೋರಮಂಗಲ, ಶಿವಾಜಿನಗರ, ಇಂದಿರಾನಗರ, ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಅಶೋಕನಗರ, ಯಶವಂತಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ‘ಬೀಡಾ’ ಅಂಗಡಿಗಳು ಹೆಚ್ಚಿವೆ. ಅಲ್ಲೆಲ್ಲ ಚಾಕೊಲೇಟ್, ಮಫ್ಯ, ಒಣ ಹಣ್ಣು (ಡ್ರೈ ಫ್ರೂಟ್) ಮಿಶ್ರಿತ ಸೇರಿದಂತೆ ತರಹೇವಾರಿ ಬೀಡಾಗಳಿಗೆ ಬೇಡಿಕೆ ಇತ್ತು. ಇದೀಗ ಗ್ರಾಹಕರಿಲ್ಲದೇ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ವೀಳ್ಯದೆಲೆ, ಅಡಿಕೆ, ಮುಖ್ವಾಸ್, ಜೇನು ಹಾಗೂ ಇತರೆ ಕಚ್ಚಾ ಪದಾರ್ಥಗಳ ದರವೂ ಏರಿಕೆ ಆಗಿದೆ. ಇದನ್ನೆಲ್ಲ ಖರೀದಿಸಿ ಬೀಡಾ ತಯಾರಿಸುತ್ತಿರುವ ವ್ಯಾಪಾರಿಗಳಿಗೆ, ತಾವು ಹೂಡುತ್ತಿರುವ ಬಂಡವಾಳ ಸಹ ವಾಪಸು ಬರುತ್ತಿಲ್ಲ. ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿರುವ ಕೆಲ ವ್ಯಾಪಾರಿಗಳು, ಅಂಗಡಿಗಳನ್ನು ಮುಚ್ಚಿ ತಮ್ಮೂರಿನತ್ತ ಹೆಜ್ಜೆ ಹಾಕುತ್ತಿದ್ದಾರೆ. ಉದ್ಯೋಗ ಅರಸಿ ನಗರಕ್ಕೆ ಬರುವ ಬಿಹಾರ, ಉತ್ತರ ಪ್ರದೇಶ ಹಾಗೂ ಇತರೆ ರಾಜ್ಯದವರೂ ಬೀಡಾ ವ್ಯಾಪಾರಕ್ಕೆ ಇಳಿಯುತ್ತಿದ್ದಾರೆ. ಅವರು ಸಹ ನಷ್ಟ ಅನುಭವಿಸಿ, ಪರ್ಯಾಯ ಕೆಲಸ ನೋಡಿಕೊಳ್ಳುತ್ತಿದ್ದಾರೆ.

‘ಏಳು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು, ಪಾದಚಾರಿ ಮಾರ್ಗದಲ್ಲಿ ಬೀಡಾ ಮಾರುತ್ತಿದ್ದೆ. ಗ್ರಾಹಕರ ಸಂಖ್ಯೆ ಹೆಚ್ಚುತ್ತಿದ್ದಂತೆ, ಸ್ವಂತ ಅಂಗಡಿ ತೆರೆದೆ. ಉತ್ತಮ ವ್ಯಾಪಾರವೂ ಇತ್ತು. ಕೋವಿಡ್ ಕಾಣಿಸಿಕೊಂಡಾಗಿನಿಂದ ಬದುಕೇ ಮೂರಾಬಟ್ಟೆಯಾಯಿತು. ನಮ್ಮಿಂದಲೇ ಕೋವಿಡ್ ಬರುತ್ತದೆಂದು ಅಂದುಕೊಂಡಿರುವ ಹಲವರು, ಅಂಗಡಿಯತ್ತ ಸುಳಿಯುತ್ತಿಲ್ಲ’ ಎಂದು ರಾಜಾಜಿನಗರ ಭಾಷ್ಯಂ ವೃತ್ತದಲ್ಲಿರುವ ಬೀಡಾ ಅಂಗಡಿ ಮಾಲೀಕ ರಾಮಚಂದ್ರ ಹೇಳಿದರು.

‘ಕೋವಿಡ್‌ಗೂ ಮುನ್ನ ಅಂಗಡಿಯಲ್ಲಿ ನಿಲ್ಲಲು ಜಾಗವಿರುತ್ತಿರಲಿಲ್ಲ. ಒಂದು ಸಮಯಕ್ಕೆ ಕನಿಷ್ಠ 10 ಬೀಡಾ ತಯಾರಿಸುತ್ತಿದ್ದೆ. ಆದರೆ, ಈಗ ಒಂದು ಅಥವಾ ಎರಡು ಬೀಡಾಗೆ ಬಂದಿದ್ದೇನೆ. ವ್ಯಾಪಾರಕ್ಕೆ ಬಂಡವಾಳ ಸಂಪಾದನೆಯೇ ಕಷ್ಟವಾಗಿದೆ. ಬದುಕು ಕಟ್ಟಿಕೊಳ್ಳಲು ಹಲವರ ಬಳಿ ಸಾಲ ಮಾಡಿದ್ದೇನೆ. ಅಲ್ಪವಾದರೂ ವ್ಯಾಪಾರವಾಗಲಿ ಎಂದು ಅಂಗಡಿ ತೆರೆದಿದ್ದೇನೆ’ ಎಂದೂ ಅಳಲು ತೋಡಿಕೊಂಡರು.

ಬಸವೇಶ್ವರನಗರ 1ನೇ ಮುಖ್ಯರಸ್ತೆಯಲ್ಲಿರುವ ‘ಗಣೇಶ್ ಬೀಡಾ’ ಅಂಗಡಿ ಮಾಲೀಕ ಶಂಕರ್, ‘ಮದ್ಯದಂಗಡಿ ಹಾಗೂ ರೆಸ್ಟೋರೆಂಟ್ ಪಕ್ಕ ನಾಲ್ಕು ವರ್ಷಗಳಿಂದ ಅಂಗಡಿ ಇಟ್ಟುಕೊಂಡಿದ್ದೇನೆ. ಕೋವಿಡ್‌ಗೂ ಮುನ್ನ ದಿನಕ್ಕೆ ₹ 3 ಸಾವಿರದಿಂದ ₹ 10 ಸಾವಿರದವರೆಗೆ ದುಡಿಯುತ್ತಿದ್ದೆ. ಕೋವಿಡ್ ಬಂದಾಗಿನಿಂದ ವ್ಯಾಪಾರ ಕಡಿಮೆಯಾಗಿದ್ದು, ಕೆಲ ತಿಂಗಳು ಅಂಗಡಿ ಸಹ ಬಂದ್ ಮಾಡಿದ್ದೆ. ಉತ್ತಮ ವ್ಯಾಪಾರದ ನಿರೀಕ್ಷೆಯಲ್ಲಿ ಇತ್ತೀಚೆಗಷ್ಟೇ ಪುನಃ ಅಂಗಡಿ ತೆರೆದಿದ್ದೇನೆ. ಆದರೆ, ಬೀಡಾ ಮಾತ್ರ ಹೆಚ್ಚು ಖರ್ಚಾಗುತ್ತಿಲ್ಲ’ ಎಂದರು.

‘ಕೈಗವಸು, ಮಾಸ್ಕ್ ಧರಿಸಿ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡರೂ, ಅಂಗಡಿಗೆ ಬರುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಬೀಡಾ ವ್ಯಾಪಾರಿಗಳ ಆರ್ಥಿಕ ಸ್ಥಿತಿ ದಿನ ಕಳೆದಂತೆ ಕುಗ್ಗುತ್ತಿದೆ. ನಮಗೂ ಸರ್ಕಾರದಿಂದ ಆರ್ಥಿಕ ನೆರವು ಬೇಕಿದೆ’ ಎಂದೂ ಒತ್ತಾಯಿಸಿದರು.

ದೊಡ್ಡ ಮಳಿಗೆಯಲ್ಲೂ ಕ್ಷೀಣಿಸಿದ ವ್ಯಾಪಾರ

ಕೋರಮಂಗಲದ ‘ದುಬೈ ಪಾನ್’, ‘ಹಲೊ ಪಾನ್‌ವಾಲಾ’, ಶಿವಾಜಿನಗರದ ‘ಹಾಜಿ ಬಾಬಾ ಪಾನ್’ ಸೇರಿದಂತೆ ಹಲವು ಮಳಿಗೆಗಳಲ್ಲಿ ಬೀಡಾ ತಿನ್ನಲು ಜನರು ಸಾಲುಗಟ್ಟಿ ನಿಲ್ಲುತ್ತಿದ್ದರು. ಇದೀಗ ಪರಿಸ್ಥಿತಿ ಬದಲಾಗಿದ್ದು, ಗ್ರಾಹಕರ ಸಾಲು ಕ್ಷೀಣಿಸಿದೆ.

‘ಕೋವಿಡ್ ಮುನ್ನ ಗ್ರಾಹಕರ ದಟ್ಟಣೆ ಇತ್ತು. ಒಬ್ಬ ಗ್ರಾಹಕರಿಗೆ ಬೀಡಾ ತಯಾರಿಸಿ ಕೊಡಲು 15 ನಿಮಿಷದಿಂದ ಅರ್ಧ ಗಂಟೆ ಬೇಕಾಗಿತ್ತು. ಗ್ರಾಹಕರೂ ಕಾದು ನಿಂತು ಬೀಡಾ ತೆಗೆದುಕೊಂಡು ಹೋಗುತ್ತಿದ್ದರು. ಇದೀಗ ಗ್ರಾಹಕರ ಸಂಖ್ಯೆ ಕಡಿಮೆಯಾಗಿದ್ದು, ತಯಾರಿಸಿದ ಬೀಡಾ ಸಹ ಮಾರಾಟವಾಗುತ್ತಿಲ್ಲ’ ಎಂದು ಮಳಿಗೆಯೊಂದರ ಸಿಬ್ಬಂದಿ ಹೇಳಿದರು.

ಕೋವಿಡ್ ಬದುಕು ಪ್ರಯಾಸ

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	32.19 ಕೋಟಿ ▲	3.65 ಕೋಟಿ ▲
ಸಕ್ರಿಯ ಪ್ರಕರಣ	5.17 ಕೋಟಿ ▲	12.72 ಲಕ್ಷ ▲
ಗುಣಮುಖ	26.46 ಕೋಟಿ ▲	3.48 ಕೋಟಿ ▲
ಸಾವು	55.42 ಲಕ್ಷ ▲	4.85 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	32.56 ಲಕ್ಷ ▲	2.64 ಲಕ್ಷ ▲
ಗುಣಮುಖ	11.66 ಲಕ್ಷ ▲	1.09 ಲಕ್ಷ ▲
ಸಾವು	7,704 ▼	219 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

8.06 ಲಕ್ಷ ▼ ಅಮೆರಿಕ · 3.05 ಲಕ್ಷ ▼ ಫ್ರಾನ್ಸ್ · 1.84 ಲಕ್ಷ ▲ ಇಟಲಿ

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

2.14 ಕೋಟಿ ಅಮೆರಿಕ ▲ · 41.51 ಲಕ್ಷ ಫ್ರಾನ್ಸ್ ▲ · 36.89 ಲಕ್ಷ ಬ್ರಿಟನ್ ▲

ಎಲ್ಲಿ ಹೆಚ್ಚು ಸಾವು (ಒಟ್ಟು)

1.41 ಲಕ್ಷ ಮಹಾರಾಷ್ಟ್ರ · 50,369 ▲ ಕೇರಳ · 36,930 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

70.81 ಮಹಾರಾಷ್ಟ್ರ ▲ · 53.26 ಕೇರಳ ▲ · 28.68 ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶುಕ್ರವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಕೋವಿಡ್: ಮಾರುಕಟ್ಟೆಗಳ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಗರದ ನಾಲ್ಕು ವ್ಯಾಪಾರ ಕೇಂದ್ರಗಳನ್ನು ಬೇರೆಡೆಗೆ ಸ್ಥಳಾಂತರಿಸಿ ಬಿಬಿಎಂಪಿ ಆದೇಶಿಸಿದೆ.

ಕೆ.ಆರ್.ಮಾರುಕಟ್ಟೆಯ ಹೂವಿನ ಮಾರುಕಟ್ಟೆಯಲ್ಲಿ ಹರಾಜಿನಲ್ಲಿ (ಬೆಳಿಗ್ಗೆ 3ರಿಂದ 6 ಗಂಟೆ ತನಕ) ಪಾಲ್ಗೊಳ್ಳುವ ಮಾರಾಟಗಾರರು (ಮಳಿಗೆದಾರರನ್ನು ಹೊರತುಪಡಿಸಿ) ಬಿನ್ನಿಪೇಟೆಯ ಎಪಿಎಂಸಿ ಮಾರುಕಟ್ಟೆಗೆ ಸ್ಥಳಾಂತರ ಆಗಬೇಕು ಎಂದು ಆದೇಶದಲ್ಲಿ ತಿಳಿಸಿದೆ.

ಕೆ.ಆರ್.ಮಾರುಕಟ್ಟೆಯಲ್ಲಿ ತರಕಾರಿ ಮತ್ತು ಹಣ್ಣು ಮಾರುಕಟ್ಟೆಯ ಬೀದಿ ಬದಿ ವ್ಯಾಪಾರಿಗಳನ್ನು ಎನ್.ಟಿ. ಪೇಟೆ ಮುಖ್ಯರಸ್ತೆ, ಗುಂಡಪ್ಪರಸ್ತೆ, ಅವೆನ್ಯೂ ಮುಖ್ಯರಸ್ತೆಗೆ ಸ್ಥಳಾಂತರಿಸಲಾಗಿದೆ. ಕಡ್ಡಾಯವಾಗಿ ತಳ್ಳು ಗಾಡಿಯಲ್ಲಿ ವ್ಯಾಪಾರ ವಹಿವಾಟು ನಡೆಸಬೇಕು ಎಂದು ಸೂಚಿಸಿದೆ.

ಕಲಾಸಿಪಾಳ್ಯದ ಜಯಚಾಮರಾಜೇಂದ್ರ ಸಗಟು ತರಕಾರಿ ಮಾರುಕಟ್ಟೆಯ ಬೀದಿ ಬದಿ ವ್ಯಾಪಾರಿಗಳನ್ನು ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆಗೆ ಸ್ಥಳಾಂತರಿಸಲಾಗಿದೆ. ಕಡ್ಡಾಯವಾಗಿ ತಳ್ಳುಗಾಡಿಗಳಲ್ಲಿ ವ್ಯಾಪಾರ ವಹಿವಾಟು ನಡೆಸಬೇಕು ಎಂದು ತಿಳಿಸಿದೆ. ಕಲಾಸಿಪಾಳ್ಯದ ಸಗಟು ತರಕಾರಿ ಮಾರುಕಟ್ಟೆಯಲ್ಲಿನ ವ್ಯಾಪಾರ ಸಮಯವನ್ನು ಬೆಳಿಗ್ಗೆ 3 ಗಂಟೆಯಿಂದ ಮಧ್ಯಾಹ್ನ 3 ಗಂಟೆ ತನಕ ಸೀಮಿತಗೊಳಿಸಿ ಆದೇಶಿಸಿದೆ.



ಸಂಕ್ರಾಂತಿ ಹಬ್ಬ ಹಾಗೂ ಕೋವಿಡ್ ಪ್ರಸರಣ ತಡೆಯಲು ಜಾರಿಗೊಳಿಸಿರುವ ವಾರಾಂತ್ಯ ಕರ್ಫ್ಯೂ ಹಿನ್ನೆಲೆಯಲ್ಲಿ ಜನರು ತಮ್ಮ ಊರುಗಳಿಗೆ ತೆರಳಲು ಬೆಂಗಳೂರಿನ ಎನ್‌ಆರ್‌ಚೌಕದ ಬಳಿ ಬಸ್‌ಗಳಿಗಾಗಿ ಕಾಯುತ್ತಿದ್ದ ದೃಶ್ಯ ಶುಕ್ರವಾರ ರಾತ್ರಿ ಕಂಡು ಬಂತು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಮಹಿಳೆಗೆ ಕಿರುಕುಳ ಆರೋಪ: ಕಾರ್ಮಿಕ ಆತ್ಮಹತ್ಯೆ

ಮೈಸೂರು: ಇಲ್ಲಿನ ಖಾಸಗಿ ಹೋಟೆಲ್ ಸಿಬ್ಬಂದಿ ಪ್ರಜ್ವಲ್ (19) ಹೋಟೆಲ್‌ನ ತಾರಸಿಯಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಮಹಿಳೆಯೊಬ್ಬರಿಗೆ ಮೊಬೈಲ್ ಮೂಲಕ ಲೈಂಗಿಕ ಕಿರಿಕುಳ ನೀಡಿದ್ದಾನೆ ಎಂದು ಆರೋಪಿಸಿದ ಗುಂಪೊಂದು, ಯರಗನಹಳ್ಳಿಯ ಪ್ರಜ್ವಲ್ ನಿವಾಸಕ್ಕೆ ತೆರಳಿ ಪೂರ್ವಾಪರಗಳನ್ನು ತಾಯಿಯ ಬಳಿ ವಿಚಾರಿಸಿತ್ತು. ತಾಯಿ ತನ್ನ ಮಗ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದು ಹೇಳಿ ಕೆಲಸದ ಸ್ಥಳಕ್ಕೆ ಕರೆದುಕೊಂಡು ಬಂದಿದ್ದರು. ಈ ವೇಳೆ ಪ್ರಜ್ವಲ್ ಜತೆ ಗಲಾಟೆ ನಡೆಸಿದ ಗುಂಪಿನ ಕೆಲವರು ಥಳಿಸಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹೋಟೆಲ್ ಸಮವಸ್ತ್ರ ಕಳಚಿ ಬೇರೆ ಬಟ್ಟೆ ತೊಟ್ಟು ಬರುವುದಾಗಿ ಹೇಳಿದ ಪ್ರಜ್ವಲ್, ಮಹಡಿ ಮೇಲಿದ್ದ ಕೋಣೆಗೆ ತೆರಳಿ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಿಳೆಯ ಪತಿ ಸೇರಿದಂತೆ 5 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ಹೇಳಿದ್ದಾರೆ.

ಮಹಿಳೆ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅವಾಚ್ಯವಾಗಿ ನಿಂದಿಸಿದ್ದಾರೆ ಎಂದು ಮಹಿಳೆಯರ ಗುಂಪೊಂದು ಸ್ಯಾನಿಟೋರಿಯಂ ಬಳಿ ಯುವಕನೊಬ್ಬನ ಮೇಲೆ ಹಲ್ಲೆ ನಡೆಸಿದ್ದ ವಿಡಿಯೊ ವೈರಲ್ ಆಗಿತ್ತು.

ಅಪರಾಧ ಕೃತ್ಯಕ್ಕೆ ಸಂಚು: ಇಬ್ಬರ ಬಂಧನ



ಬೇತಮಂಗಲ: ಅಪರಾಧ ಕೃತ್ಯಕ್ಕೆ ಸಂಚು ರೂಪಿಸಿ ಮಾರಕಾಸ್ತ್ರಗಳೊಂದಿಗೆ ಆಟೊದಲ್ಲಿ ಕಾಯುತ್ತಿದ್ದ ಬೆಂಗಳೂರು ಮೂಲದ ಇಬ್ಬರು ಆರೋಪಿಗಳನ್ನು ಬೇತಮಂಗಲ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ರಾಜು (23) ಮತ್ತು ಸಲ್ಮಾನ್(22) ಬಂಧಿತರು. ಬೆಂಗಳೂರಿನ ಕಲ್ಕೆರೆ ವಾಸಿ ಕಾರ್ತಿಕ್, ಶಿವಾಜಿನಗರ ಚೌಕ ನಿವಾಸಿ ಯತೀಶ್, ಕಲ್ಕೆರೆ ನಿವಾಸಿ ಹೇಮಂತ್ ತಪ್ಪಿಸಿಕೊಂಡಿದ್ದು, ಅವರ ಬಂಧನಕ್ಕೆ ಬಲೆ ಬೀಸಲಾಗಿದೆ. ಬೆಂಗಳೂರಿನ ಗಾರ್ಡನ್‌ಸಿಟಿ ಕಾಲೇಜು ಬಳಿ ಕದ್ದಿದ್ದ ಆಟೊದಲ್ಲಿಯೇ ಕೃತ್ಯ ಎಸಗಲು ಆರೋಪಿಗಳು ಬಂದಿದ್ದರು.

ಬಂಧಿತರಿಂದ 3 ಚಾಕುಗಳು, 1 ಹಗ್ಗ ಮತ್ತು 1 ಕೆ.ಜಿ ಮೆಣಸಿನ ಪುಡಿ ವಶಪಡಿಸಿಕೊಳ್ಳಲಾಗಿದೆ. ಪರಾರಿಯಾದವರ ಪತ್ತೆಗಾಗಿ ವೃತ್ತ ನಿರೀಕ್ಷಕ ಆರ್. ವೆಂಕಟೇಶ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ.

ಕೆಜಿಎಫ್ ತಾಲ್ಲೂಕಿನ ಬಂಗಾರು ತಿರುಪತಿ ದೇವಾಲಯದಲ್ಲಿ ಗುರುವಾರ ವೈಕುಂಠ ಏಕಾದಶಿ ಇತ್ತು. ಇದರ ಅಂಗವಾಗಿ ಬಂದೋಬಸ್ತ್ ಕಾರ್ಯ ಮುಗಿಸಿಕೊಂಡು ಪೊಲೀಸರು ಠಾಣೆಗೆ ಬರುವಾಗ ಮುಳಬಾಗಿಲು- ಗುಟ್ಟಹಳ್ಳಿ ರಸ್ತೆ ಬಳಿಯ ನೀಲಗಿರಿ ತೋಪಿನಲ್ಲಿ 5 ಮಂದಿಯ ತಂಡ ಆಟೊ ನಿಲ್ಲಿಸಿಕೊಂಡಿತ್ತು. ಇದನ್ನು ಗಮನಿಸಿದ ಪಿಎಸ್‌ಐ ಅವರನ್ನು ವಿಚಾರಿಸಿದ್ದಾರೆ. ಆಗ ತಪ್ಪು ಮಾಹಿತಿ ನೀಡಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ವಶಕ್ಕೆ ಪಡೆಯಲಾಗಿದೆ. ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಪಿಎಸ್‌ಐ ಜಗದೀಶ್ ರೆಡ್ಡಿ, ಸಿಬ್ಬಂದಿಯಾದ ಸತೀಶ್, ಮಣಿಕಂಠ, ಸತೀಶ್ ಕುಮಾರ್, ಮುರುಳಿ, ಶಿವಪ್ರಸಾದ್, ರಾಜ್‌ಕುಮಾರ್, ಆಲಗೌಡ ಕುಂಬಾರ ಅವರ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜು ಮತ್ತು ಉಪಾಧೀಕ್ಷಕ ಮುರಳೀಧರ್ ಶ್ಲಾಘಿಸಿದ್ದಾರೆ.

ಕೊಲೆ ಪ್ರಕರಣ: ನಾಲ್ವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಧಾರವಾಡ: ತಾಲ್ಲೂಕಿನ ವನಹಳ್ಳಿ ಗ್ರಾಮದಲ್ಲಿ ನಡೆದಿದ್ದ ವ್ಯಕ್ತಿಯೊಬ್ಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಗ್ರಾಮೀಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗ್ರಾಮದ ಶಿವಪ್ಪ ನಿಂಗಪ್ಪ ಆರೆಣ್ಣವರ (56) ಕೊಲೆಯಾದ ವ್ಯಕ್ತಿ. ಅದೇ ಗ್ರಾಮದ ಭೀಮಸಿ (ಭೀಮಪ್ಪ ಮಡಿವಾಳಪ್ಪ ಭಂಗಿ), ಶ್ರೀಶೈಲ ವೀರಭದ್ರಪ್ಪ ನರಗುಂದ, ರವಿ ಶಂಕ್ರೆಪ್ಪ ಆರೆಣ್ಣವರ ಮತ್ತು ಮಂಜುನಾಥ ಗಂಗಪ್ಪ ಮಟ್ಟಿ ಕೊಲೆ ಆರೋಪಿಗಳು.

ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ, ಆರೋಪಿಗಳು ಡಿ. 12ರಂದು ವನಹಳ್ಳಿ-ಹೆಬ್ಬಳ್ಳಿ ರಸ್ತೆಯ ಹೊಲವೊಂದರಲ್ಲಿ ಶಿವಪ್ಪ ಅವರ ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದರು. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿಪಿಐ ಶ್ರೀಧರ ಸತಾರೆ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.



ನಗರದ ಮಿಷನ್ ರಸ್ತೆಯ ಸಿಕೆಸಿ ಗಾರ್ಡನ್‌ನಲ್ಲಿ ಸಂಕ್ರಾಂತಿ ಪ್ರಯುಕ್ತ ಜನ ಒಲೆಗಳಲ್ಲಿ ಪೊಂಗಲ್ ತಯಾರಿಸಿ ಹಬ್ಬ ಆಚರಿಸಿದರು –ಪ್ರಜಾವಾಣಿ ಚಿತ್ರ

ಶುಶ್ರೂಷಾಧಿಕಾರಿಗಳಿಗೆ ‘ಅಪಾಯ ಭತ್ಯೆ’ ನೀಡಲು ಒತ್ತಾಯ

ಬೆಂಗಳೂರು: ವೈದ್ಯಕೀಯ ಶಿಕ್ಷಣ ಇಲಾಖೆಯ ಕಾಯಂ ಶುಶ್ರೂಷಾಧಿಕಾರಿಗಳಿಗೆ ಕೋವಿಡ್–19 ‘ಅಪಾಯ ಭತ್ಯೆ’ ನೀಡುವಂತೆ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆಯ ಶುಶ್ರೂಷಾಧಿಕಾರಿಗಳ ಸಂಘ ಒತ್ತಾಯಿಸಿದೆ.


ಆರೋಗ್ಯ ಇಲಾಖೆ ವ್ಯಾಪ್ತಿಯಲ್ಲಿರುವ ಶುಶ್ರೂಷಾಧಿಕಾರಿಗಳಿಗೆ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಕೋವಿಡ್–19 ಅಪಾಯ ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಆದರೆ, ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಶುಶ್ರೂಷಾಧಿಕಾರಿಗಳನ್ನು ಕಡೆಗಣಿಸಲಾಗಿದೆ ಎಂದು ಅಧ್ಯಕ್ಷ ಬಿ. ಸಂತೋಷಕುಮಾರ್ ಶುಕ್ರವಾರ ತಿಳಿಸಿದ್ದಾರೆ.

ಈ ತಾರತಮ್ಯವನ್ನು ಸರಿಪಡಿಸುವಂತೆ ಒತ್ತಾಯಿಸಿ ಜ.17ರಿಂದ ಏಳು ದಿನಗಳ ಕಾಲ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ ಶುಶ್ರೂಷಾಧಿಕಾರಿಗಳು ಕಪ್ಪು ಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸುತ್ತಾರೆ ಎಂದು ತಿಳಿಸಿದ್ದಾರೆ.

2021ರಲ್ಲಿ 618 ಅಪಘಾತ, 651 ಸಾವು

ಬೆಂಗಳೂರು: ನಗರದಲ್ಲಿ 2021ರ ಜನವರಿಯಿಂದ ಡಿಸೆಂಬರ್‌ವರೆಗೆ 618 ಅಪಘಾತಗಳು ಸಂಭವಿಸಿದ್ದು, 651 ಮಂದಿ ಮೃತಪಟ್ಟಿದ್ದಾರೆ. ಅಪಘಾತಗಳ ಅಂಕಿ–ಅಂಶಗಳನ್ನು ಸಂಚಾರ ವಿಭಾಗದ ಪೊಲೀಸರು ಶುಕ್ರವಾರ ಬಿಡುಗಡೆ ಮಾಡಿದ್ದು, ಅದರ ವಿವರ ಇಲ್ಲಿದೆ.

- 553 ಮೃತ ಗಂಡಸರು
- 97 ಚಾಲನೆ ಪರವಾನಗಿ ಇಲ್ಲದೇ ಉಂಟಾದ ಅಪಘಾತಗಳು
- 113 ಹೆಲ್ಮೆಟ್ ಧರಿಸದವರು
- 98 ಮೃತ ಹೆಂಗಸರು
- 161 ಮೃತ ಪಾದಚಾರಿಗಳು
- 99 ರಸ್ತೆ ದಾಟುವಾಗ ಮೃತಪಟ್ಟವರು
- 404 ಮೃತ ದ್ವಿಚಕ್ರವಾಹನ ಸವಾರರು
- 338 ಮೃತಪಟ್ಟ ಬೆಂಗಳೂರಿನವರು
- 248 ದ್ವಿಚಕ್ರ ವಾಹನದಿಂದ ಉಂಟಾದ ಅಪಘಾತಗಳು
- 27 ಬಿಎಂಟಿಸಿ ಬಸ್‌ಗಳಿಂದ ಉಂಟಾದ ಅಪಘಾತಗಳು



ದಿನವಾರು ಅಪಘಾತಗಳ ಸಂಖ್ಯೆ

ದಿನ	ಸಂಖ್ಯೆ
ಭಾನುವಾರ	107
ಸೋಮವಾರ	70
ಮಂಗಳವಾರ	86
ಬುಧವಾರ	89
ಗುರುವಾರ	77
ಶುಕ್ರವಾರ	88
ಶನಿವಾರ	101



• ‘21 ವರ್ಷದಿಂದ 30 ವರ್ಷದೊಳಗಿನ 245 ಮಂದಿ ಅಪಘಾತದಲ್ಲಿ ಮೃತಪಟ್ಟಿದ್ದಾರೆ’ ಎಂದು ಸಂಗತಿ ವರದಿಯಲ್ಲಿದೆ.

• ‘31 ವರ್ಷದಿಂದ 40 ವರ್ಷದೊಳಗಿನ 166 ಮಂದಿ ಮೃತಪಟ್ಟಿದ್ದಾರೆ. 41–50 ವರ್ಷದೊಳಗಿನ 85 ಮಂದಿ ಅಪಘಾತದಲ್ಲಿ ಅಸುನೀಗಿದ್ದಾರೆ’ ಎಂಬ ಮಾಹಿತಿಯೂ ವರದಿಯಲ್ಲಿದೆ.

ಸಮನ್ವಿ ಸಾವು: ಆಟೊ ಹಿಂದಿಕ್ಕಲು ಹೋಗಿ ಅಪಘಾತ

ಬೆಂಗಳೂರು: ಕೋಣನಕುಂಟೆ ಬಳಿಯ ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಸಮನ್ವಿ (6) ಮೃತಪಟ್ಟಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು, ಲಾರಿ ಚಾಲಕ ಮಂಜೇಗೌಡನನ್ನು ಬಂಧಿಸಿದ್ದಾರೆ. ‘ಕಲರ್ಸ್ ಕನ್ನಡ ವಾಹಿನಿಯ ‘ನನ್ನಮ್ಮ ಸೂಪರ್ ಸ್ಟಾರ್’ ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದ ಸಮನ್ವಿ ಹಾಗೂ ಆಕೆಯ ತಾಯಿ ಅಮೃತಾ ನಾಯ್ಡು, ಗುರುವಾರ ಸಂಜೆ 4.30ರ ಸುಮಾರಿಗೆ ಸ್ಕೂಟಿಯಲ್ಲಿ ಮೆಟ್ರೊ ನಿಲ್ದಾಣಕ್ಕೆ ಹೊರಟಿದ್ದಾಗ ಅಪಘಾತ ಸಂಭವಿಸಿತ್ತು. ‘ತಾಯಿ–ಮಗಳು, ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಸ್ಕೂಟಿಯಲ್ಲಿ ತೆರಳುತ್ತಿದ್ದರು. ವೇಗದ ಮಿತಿಯನ್ನೂ ದಾಟಿರಲಿಲ್ಲ. ಅದೇ ಮಾರ್ಗದಲ್ಲೇ ಚಾಲಕ ಮಂಜೇಗೌಡ ಲಾರಿಯನ್ನು ವೇಗವಾಗಿ ಚಲಾಯಿಸಿಕೊಂಡು ಹೊರಟಿದ್ದ. ಎದುರಿಗಿದ್ದ ಆಟೊವನ್ನು ಹಿಂದಿಕ್ಕಲು ಮುಂದಾಗಿದ್ದ ಮಂಜೇಗೌಡ, ಲಾರಿಯನ್ನು ಸ್ಕೂಟಿಗೆ ಡಿಕ್ಕಿ ಹೊಡೆಸಿದ್ದ.ಈ ಬಗ್ಗೆ ಚಾಲಕ ಹೇಳಿಕೆ ನೀಡಿದ್ದಾನೆ. ಆತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

2 ನಿಮಿಷ 13 ಸೆಕೆಂಡು ಶಿವಲಿಂಗಕ್ಕೆ ಆದಿತ್ಯನ ಕಿರಣಾಭಿಷೇಕ

ಗವಿ ಗಂಗಾಧರೇಶ್ವರನಿಗೆ ಸೂರ್ಯ ನಮನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕರ ಸಂಕ್ರಮಣದ ಮುನ್ನಾ ದಿನವಾದ ಶುಕ್ರವಾರ ಸೂರ್ಯನು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಪಥ ಬದಲಿಸಿದ್ದು, ಈ ವೇಳೆ ಸೂರ್ಯ ರಶ್ಮಿಯು ಗವಿಪುರದಲ್ಲಿರುವ ಐತಿಹಾಸಿಕ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗವನ್ನು ಸ್ಪರ್ಶಿಸಿತು.

2 ನಿಮಿಷ 13 ಸೆಕೆಂಡು ಶಿವಲಿಂಗಕ್ಕೆ ಆದಿತ್ಯನ ಕಿರಣಾಭಿಷೇಕವಾಯಿತು. ಭಕ್ತರು ಈ ವಿಸ್ಮಯಕಾರಿ ದೃಶ್ಯ ಕಣ್ತುಂಬಿಕೊಂಡರು.

‘ಗುಹಾಂತರ ದೇಗುಲ’ದ ಬಲಭಾಗದಲ್ಲಿರುವ ಕಿಟಕಿಯ ಸರಳುಗಳ ನಡುವಿನಿಂದ ಸಂಜೆ 5.17ರ ಸುಮಾರಿಗೆ ಗರ್ಭಗುಡಿ ಪ್ರವೇಶಿಸಿದ ಸೂರ್ಯರಶ್ಮಿ, ನಂದಿ ವಿಗ್ರಹದ ಎಡಗಾಲನ್ನು ಸ್ಪರ್ಶಿಸಿತು. ಬಳಿಕ ಅದರ ಎರಡು ಶೃಂಗಗಳ (ಕೊಂಬು) ಮಧ್ಯಭಾಗದಿಂದ ಹಾದು ಹೋಗಿ ಗವಿಗಂಗಾಧರೇಶ್ವರನ ಪಾದ ಸ್ಪರ್ಶಿಸಿತು.

ನೋಡು ನೋಡುತ್ತಲೇ ಕಿರಣಗಳು ಲಿಂಗವನ್ನು ಪೂರ್ಣವಾಗಿ ಆವರಿಸಿದವು. ಈ ವೇಳೆ ಶಿವಲಿಂಗಕ್ಕೆ ನಿರಂತರವಾಗಿ ಕ್ಷೀರ ಹಾಗೂ ಎಳನೀರಿನ ಅಭಿಷೇಕ ಮಾಡಲಾಯಿತು. ಗಂಟೆ, ಜಾಗಟೆ ಹಾಗೂ ನಗಾರಿಯ ಸದ್ದು ಮೊಳಗಿದವು. ಶಂಕರನ ಸ್ತೋತ್ರಗಳೂ ಅನುರಣಿಸಿದವು. ಭಕ್ತರು ಹರ ನಾಮ ಸ್ಮರಿಸುತ್ತಾ ಭಾವ ಪರವಶರಾದರು.



ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗವನ್ನು ಸೂರ್ಯ ರಶ್ಮಿ ಸ್ಪರ್ಶಿಸಿದ ಮನಮೋಹಕ ದೃಶ್ಯ ಪ್ರಜಾವಾಣಿ ಚಿತ್ರ/ ರಂಜು ಪಿ

ಶಿವಲಿಂಗದ ಶಿರವನ್ನು ಚುಂಬಿಸಿ ಸೂರ್ಯದೇವ ಮರೆಯಾಗುತ್ತಿದ್ದಂತೆ ದೇವಸ್ಥಾನದೊಳಗಿದ್ದವರು ‘ಓಂ ನಮಃ ಶಿವಾಯ.. ಓಂ ನಮಃ ಶಿವಾಯ.. ಹರ ಹರ ಮಹಾದೇವ್.. ಶಂಭೋ ಶಿವ ಶಂಕರ’ ಎಂಬ ಘೋಷಣೆಗಳನ್ನು ಮೊಳಗಿಸಿದರು. ನಂತರ ದೇವರಿಗೆ ಮತ್ತೊಮ್ಮೆ ಅಭಿಷೇಕ ಮಾಡಿ ಹೂವಿನಿಂದ ಅಲಂಕರಿಸಲಾಯಿತು. ಸಂಕಲ್ಪ ಪೂಜೆಯನ್ನೂ ನೆರವೇರಿಸಲಾಯಿತು.

‘ದೇಗುಲದೊಳಗೆ ಪ್ರವೇಶಿಸಿದ ಸೂರ್ಯದೇವ ಮೊದಲು ನಂದಿಯ ಎಡ ಕಾಲಿಗೆ ನಮಸ್ಕರಿಸಿದ. ಬಳಿಕ ಅದರ ಕಿವಿಯ ಹತ್ತಿರ ಬಂದು ನಂದಿಯನ್ನು ಪ್ರಾರ್ಥಿಸಿದ. ನಂತರ ಅದರ ಎರಡು ಶೃಂಗಗಳ ಮಧ್ಯಭಾಗದಿಂದ ಸ್ವಾಮಿಯ ಗರ್ಭಗೃಹ ಪ್ರವೇಶಿಸಿದ. ಶಿವ ಮತ್ತು ಪಾರ್ವತಿ ಒಂದೇ ಪೀಠದಲ್ಲಿರುವುದು ಈ ದೇಗುಲದ ವೈಶಿಷ್ಟ್ಯ. ಗರ್ಭಗುಡಿ ಪ್ರವೇಶಿಸುತ್ತಿದ್ದಂತೆ ಸೋಮಸೂತ್ರದ ಪಾರ್ವತಿಯ ದರ್ಶನ ಮಾಡಿ ಆಕೆಯ ಅನುಗ್ರಹ ಪಡೆದ. ಅನಂತರ ಲಿಂಗದ ಪಾದ ಸ್ಪರ್ಶಿಸಿದ ಸೂರ್ಯದೇವ, ಕ್ರಮೇಣ ಇಡೀ ಲಿಂಗಕ್ಕೆ ಕಿರಣಾಭಿಷೇಕ ಮಾಡಿ ಉತ್ತರಾಯಣಕ್ಕೆ ಪ್ರವೇಶ ಮಾಡಿದ್ದಾನೆ’ ಎಂದು ದೇವಸ್ಥಾನದ ಪ್ರಧಾನ ಅರ್ಚಕ ಸೋಮಸುಂದರ್ ದೀಕ್ಷಿತ್ ಹೇಳಿದರು.

ಭಕ್ತರಿಗಿಲ್ಲ ಪ್ರವೇಶ

ಕೋವಿಡ್‌ನಿಂದಾಗಿ ಈ ಬಾರಿ ದೇವಸ್ಥಾನಕ್ಕೆ ಭಕ್ತರ ಪ್ರವೇಶ ನಿರಾಕರಿಸಲಾಗಿತ್ತು.

‘ಈ ಅದ್ಭುತ ದೃಶ್ಯ ಕಾಣಲು ಪ್ರತಿ ವರ್ಷವೂ ಸಾವಿರಾರು ಜನ ದೇವಸ್ಥಾನಕ್ಕೆ ಬರುತ್ತಿದ್ದರು. ದೇಗುಲದ ಹೊರಾಂಗಣದಲ್ಲಿ ಎಲ್‌ಇಡಿ ಪರದೆಗಳನ್ನು ಅಳವಡಿಸಿ ಅವಿಸ್ಮರಣೀಯ ಕ್ಷಣದ ದರ್ಶನಕ್ಕೆ ಭಕ್ತರಿಗೆ ಅನುವು ಮಾಡಿಕೊಡಲಾಗುತ್ತಿತ್ತು. ಕೋವಿಡ್‌ನಿಂದಾಗಿ ಈ ಬಾರಿ ಭಕ್ತರಿಗೆ ಆ ಅವಕಾಶ ಸಿಗಲಿಲ್ಲ’ ಎಂದು ಸೋಮಸುಂದರ್ ದೀಕ್ಷಿತ್ ಹೇಳಿದರು.

ಬೂಸ್ಟರ್ ಡೋಸ್ ಲಸಿಕೆ ಪಡೆದ ರಾಜ್ಯಪಾಲ ಥಾವರಚಂದ್ ಗೆಹಲೋತ್

‘ಲಸಿಕೆಯಿಂದ ಕೋವಿಡ್ ತೀವ್ರತೆ ತಗ್ಗಲಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೊರೊನಾ ಸೋಂಕಿನ ತೀವ್ರತೆಯನ್ನು ತಗ್ಗಿಸಲು ಲಸಿಕೆಯೊಂದೇ ಪರಿಹಾರ. ರಾಜ್ಯದ ಪ್ರತಿಯೊಬ್ಬರೂ ಕಡ್ಡಾಯವಾಗಿ ಲಸಿಕೆ ಪಡೆದುಕೊಳ್ಳಬೇಕು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮನವಿ ಮಾಡಿಕೊಂಡರು.

ಅವರು ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬೂಸ್ಟರ್ ಡೋಸ್ ಲಸಿಕೆ ಪಡೆದುಕೊಂಡು, ಮಾತನಾಡಿದರು. ‘ನವದೆಹಲಿಯಲ್ಲಿ ಕೋವಿಡ್ ಲಸಿಕೆಯ ಎರಡು ಡೋಸ್‌ಗಳನ್ನು ಹಾಕಿಸಿಕೊಂಡಿದ್ದೆ. ಸೋಂಕಿನಿಂದ ರಕ್ಷಣೆ ಪಡೆಯಲು ಮುನ್ನೆಚ್ಚರಿಕಾ ಡೋಸ್ ಲಸಿಕೆಯೊಂದಿಗೆ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಲಸಿಕೆ ವಿತರಣೆಯಲ್ಲಿ ಕರ್ನಾಟಕ ಉತ್ತಮ ಸಾಧನೆ ಮಾಡಿದೆ’ ಎಂದು ಹೇಳಿದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ‘ಲಸಿಕೆಯಿಂದ ಮಾತ್ರ ಕೋವಿಡ್ ನಿಯಂತ್ರಣ ಸಾಧ್ಯ. ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಈವರೆಗೆ 83,937 ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿದೆ. ಇಲ್ಲಿ 420 ಬಾಣಂತಿಯರು ಹಾಗೂ 1,179 ಗರ್ಭಿಣಿಯರು ಲಸಿಕೆ ಪಡೆದುಕೊಂಡಿದ್ದಾರೆ. ಆರೋಗ್ಯ ಸಿಬ್ಬಂದಿ ಸೇರಿದಂತೆ ಅರ್ಹರು ಮುನ್ನೆಚ್ಚರಿಕೆ ಡೋಸ್ ಲಸಿಕೆಯನ್ನು ಪಡೆಯಬೇಕು’ ಎಂದು ತಿಳಿಸಿದರು.

ವಾಣಿವಿಲಾಸ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ. ಗೀತಾ ಶಿವಮೂರ್ತಿ, ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತ ರಾಥೋಡ್ ಇದ್ದರು.



ಥಾವರಚಂದ್ ಗೆಹಲೋತ್ ಅವರು ಬೂಸ್ಟರ್ ಡೋಸ್ ಲಸಿಕೆ ಪಡೆದುಕೊಂಡರು. ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ರಮೇಶ್ ಕೃಷ್ಣ, ಡಾ.ಕೆ. ಸುಧಾಕರ್ ಇದ್ದರು – ಪ್ರಜಾವಾಣಿ ಚಿತ್ರ



ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	13,73,452 ▲
ಸಕ್ರಿಯ ಪ್ರಕರಣಗಳು	1,09,312 ▲
ಗುಣಮುಖರಾದವರು	12,47,696 ▲
ಒಟ್ಟು ಸಾವು	16,443 ▲

ದಿನದ ಏರಿಕೆ

ಹೊಸ ಪ್ರಕರಣ	20,121 ▲
ಗುಣಮುಖ	1,695 ▲
ಸಾವು	07 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಶನಿವಾರ, ಜನವರಿ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 15 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,223 ▼	18,255 ▼	₹49,600 (ಬೆಂಗಳೂರು) ▲	₹ 63,100 (ಬೆಂಗಳೂರು) ▲	74.15 ▼

ಭೂಮಿಕಾ
ಸಂಕ್ರಾಂತಿ ಹೆಣ್ಣು ಮಕ್ಕಳಿಗೆ ವಿಶಿಷ್ಟವಾದ ಹಬ್ಬ. ಉತ್ತರ ಕರ್ನಾಟಕ ಭಾಗದಲ್ಲಿ ಮಹಿಳೆಯರು ಸಂಕ್ರಾಂತಿ ಹಬ್ಬವನ್ನು ಸಂಭ್ರಮಿಸುವ ಪರಿಯನ್ನು ಆ ನೆಲದ ಸೊಗಡಿನಲ್ಲೇ ಓದಿ...



ಪ್ರಿಯ ಓದುಗರು, ಜಾಹೀರಾತುದಾರರು ಮತ್ತು ಪತ್ರಿಕಾ ವಿತರಕರಿಗೆ ಸಂಕ್ರಾಂತಿ ಹಬ್ಬದ ಶುಭಾಶಯಗಳು
–ಸಂ

ಸರ್ಕಾರಕ್ಕೆ ಕಠಿಣ ತಾಕೀತು; ರಾಜಕೀಯ ಸಮಾವೇಶಕ್ಕೆ ಅವಕಾಶ ಬೇಡ

ರ್‍ಯಾಲಿಗೆ ಹೈಕೋರ್ಟ್ ಅಂಕುಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೋನಾ ನಿಯಂತ್ರಿಸಲು ಜಾರಿಗೊಳಿಸಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಜಾರಿಯಲ್ಲಿರುವ ತನಕ ರಾಜ್ಯದಲ್ಲಿ ಯಾವುದೇ ರ್‍ಯಾಲಿ, ಧರಣಿ ಅಥವಾ ರಾಜಕೀಯ ಸಮಾವೇಶಕ್ಕೆ ಅನುಮತಿ ನೀಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

'ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಹಮ್ಮಿಕೊಂಡಿರುವ ಪಾದಯಾತ್ರೆ ತಡೆಯಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ತಿಂಡ್ಲು ನಿವಾಸಿ ಎ.ವಿ.ನಾಗೇಂದ್ರ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಮುಂದುವರೆಸಿತು.

ವಿಚಾರಣೆ ವೇಳೆ ಕೆಪಿಸಿಸಿ ಪರ ಹಾಜರಾಗಿದ್ದ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಇದೇ 12ರಂದು ಹೈಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯ ಮತ್ತು ಕೊರೋನಾ ಹೆಚ್ಚುತ್ತಿರುವುದನ್ನು ಪರಿಗಣಿಸಿ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿ ಇರಿಸಲಾಗಿದೆ. ಸಾಂಕ್ರಾಮಿಕ ನಿಯಂತ್ರಣಕ್ಕೆ ಬಂದ ನಂತರ ಮುಂದುವರಿಸಲಾಗುವುದು' ಎಂದರು.

ಅಂತೆಯೇ, 'ಅನ್ಯ ರಾಜಕೀಯ ಪಕ್ಷಗಳು ಎಸ್‌ಒಪಿ ಉಲ್ಲಂಘಿಸಿದ ಬಗ್ಗೆ ಸರ್ಕಾರವು ಚಕಾರ ಎತ್ತುತ್ತಿಲ್ಲ. ಕೆಪಿಸಿಸಿಯ ಪಾದಯಾತ್ರೆಯನ್ನು ಮಾತ್ರವೇ ನಿಷೇಧಿಸಿದೆ' ಎಂದು ಆಕ್ಷೇಪಿಸಿದರು. 'ಇದೇ 4ರಂದು ಎಸ್‌ಒಪಿ ಜಾರಿಗೆ ಬಂದ ಬಳಿಕ ಸರ್ಕಾರಿ ಆದೇಶ ಉಲ್ಲಂಘಿಸಿದ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು.

9ನೇ ಪುಟ ನೋಡಿ

ದೇಶದಲ್ಲಿ 2.64 ಲಕ್ಷ ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರಗತಿಯಲ್ಲಿ ಏರುತ್ತಿದ್ದು, ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 2,64,202 ಸೋಂಕು ಪ್ರಕರಣಗಳು ದೃಢಪಟ್ಟಿವೆ. ಇದು 239 ದಿನಗಳಲ್ಲಿ ದಾಖಲಾದ ಹೆಚ್ಚು ಪ್ರಕರಣಗಳಾಗಿವೆ.

ಇದೇ ಅವಧಿಯಲ್ಲಿ 315 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಈ ಪೈಕಿ 117 ಮಂದಿ ಕೇರಳದವರು ಮತ್ತು 36 ಮಂದಿ ಮಹಾರಾಷ್ಟ್ರದವರು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 12,72,073ಕ್ಕೆ ಏರಿದ್ದು, ಕೋವಿಡ್ ದೃಢ ಪ್ರಮಾಣ 14.78ಕ್ಕೆ ಜಿಗಿದಿದೆ. ದೇಶದಲ್ಲಿ ಸದ್ಯ 5,753 ಓಮೈಕ್ರಾನ್ ಪ್ರಕರಣಗಳಿವೆ. 24 ಗಂಟೆಗಳ ಅವಧಿಯಲ್ಲಿ 1,09,345 ಮಂದಿ ಕೋವಿಡ್‌ನಿಂದ ಚೇತರಿಸಿಕೊಂಡಿದ್ದಾರೆ.

ಮಧ್ಯಪ್ರದೇಶ- ಶಾಲೆ, ಹಾಸ್ಟೆಲ್ ಬಂದ್ (ಭೋಪಾಲ್): ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಧ್ಯ ಪ್ರದೇಶ ಸರ್ಕಾರವು ರಾಜ್ಯದ 1ರಿಂದ 12ನೇ ತರಗತಿವರೆಗಿನ ಎಲ್ಲ ಶಾಲೆ ಮತ್ತು ಹಾಸ್ಟೆಲ್‌ಗಳನ್ನು ಇದೇ 31ರವರೆಗೆ ಮುಚ್ಚುವಂತೆ ಆದೇಶಿಸಿದೆ.

ನ್ಯಾಯಪೀಠದ ಪ್ರಶಂಸೆ



'ಕಳೆದ ವಿಚಾರಣೆ ವೇಳೆ ಹೈಕೋರ್ಟ್ ನೀಡಿದ ಎಚ್ಚರಿಕೆಯನ್ನು ಪರಿಗಣಿಸಿ ಪಾದಯಾತ್ರೆ ಅಮಾನತುಪಡಿಸಿದ ಕಾರಣಕ್ಕಾಗಿ ನಿಮ್ಮನ್ನು ನ್ಯಾಯಾಲಯ ಪ್ರಶಂಸಿಸುತ್ತದೆ' ಎಂದು ವಿಚಾರಣೆ ವೇಳೆ ಉದಯ ಹೊಳ್ಳ ಅವರ ಹೇಳಿಕೆಗೆ ನ್ಯಾಯಪೀಠ ಹೇಳಿತು.



ಕೊರೋನಾ ಸಮಯದಲ್ಲಿ ರಾಜ್ಯದ ಎಲ್ಲೇ ಆಗಲಿ ಯಾವುದೇ ರೀತಿಯ ಧರಣಿ, ಪ್ರತಿಭಟನೆ, ಮೆರವಣಿಗೆ ನಡೆಸಬಾರದು
ಋತುರಾಜ್ ಅವಸ್ಥಿ
ಮುಖ್ಯ ನ್ಯಾಯಮೂರ್ತಿ

ಜ.14ರ ಕೋವಿಡ್ ಮಾಹಿತಿ	
ರಾಜ್ಯದ ಹೊಸ ಪ್ರಕರಣ	28,723
ಬೆಂಗಳೂರಿನ ಹೊಸ ಪ್ರಕರಣ	20,121
ಸೋಂಕು ದೃಢ ಪ್ರಮಾಣ	12.98%
ಸಕ್ರಿಯ ಪ್ರಕರಣ	1,41,337
ದೃಢಪಟ್ಟ ಮರಣ ಪ್ರಕರಣ	14
ನಡೆಸಲಾದ ಪರೀಕ್ಷೆ	2,21,205

ಜಗಳೂರು: ಅಪಘಾತದಲ್ಲಿ 7 ಮಂದಿ ಸಾವು

ಜಗಳೂರು (ದಾವಣಗೆರೆ ಜಿಲ್ಲೆ): ತಾಲ್ಲೂಕಿನ ಕಾನನಕಟ್ಟೆ ಬಳಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಶುಕ್ರವಾರ ನಸುಕಿನಲ್ಲಿ ಟಾಟಾ ಇಂಡಿಕಾ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಏಳು ಮಂದಿ ಮೃತಪಟ್ಟಿದ್ದಾರೆ.
12

ಕಾರ್ಯಭಾರ 15 ಗಂಟೆಗಳಿಗೆ ಹೆಚ್ಚಳ

ಅತಿಥಿ ಉಪನ್ಯಾಸಕರಿಗೆ ಸಂಕ್ರಾಂತಿ 'ಹುಗ್ಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸುದೀರ್ಘ ಹೋರಾಟಕ್ಕೆ ಮಣಿದಿರುವ ರಾಜ್ಯ ಸರ್ಕಾರ ಅವರ ಗೌರವಧನವನ್ನು ಹೆಚ್ಚಳ ಮಾಡಿದೆ.

ಅತಿಥಿ ಉಪನ್ಯಾಸಕರ ಕಾರ್ಯಭಾರವನ್ನು ವಾರಕ್ಕೆ 8–10 ಗಂಟೆಯಿಂದ 15 ಗಂಟೆಗಳಿಗೆ ಹೆಚ್ಚಿಸಲಾಗಿದೆ. ಸೆಮಿಸ್ಟರ್ ಆಧಾರದಲ್ಲಿ ನೇಮಕಾತಿ ಮಾಡುವುದನ್ನು ನಿಲ್ಲಿಸಿ, ಇನ್ನು ಮುಂದೆ ಇಡೀ ಶೈಕ್ಷಣಿಕ ವರ್ಷಕ್ಕೆ (10 ತಿಂಗಳಿಗೆ) ನೇಮಿಸಲು ಸರ್ಕಾರ ತೀರ್ಮಾನಿಸಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು, ಈ ತೀರ್ಮಾನದಿಂದಾಗಿ 430 ಸರ್ಕಾರಿ ಪದವಿ ಕಾಲೇಜುಗಳ 14,564 ಅತಿಥಿ ಉಪನ್ಯಾಸಕರಿಗೆ ಪ್ರಯೋಜನ ಸಿಗಲಿದೆ. ತಿಂಗಳಿಗೆ ₹13 ಸಾವಿರ ಪಡೆಯುತ್ತಿದ್ದವರಿಗೆ ₹32 ಸಾವಿರ, ₹11 ಸಾವಿರ ಪಡೆಯುತ್ತಿದ್ದವರಿಗೆ ₹28 ಸಾವಿರಕ್ಕೆ ಏರಿಕೆ ಮಾಡಿದ್ದು, ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಗೌರವಧನ ಪಾವತಿ ಮಾಡಲಾಗುವುದು ಎಂದರು.

'ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸರ್ಕಾರ ತಿಂಗಳ ಹಿಂದೆ ನಮ್ಮ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿಯೊಂದನ್ನು ರಚಿಸಿ ವರದಿ ನೀಡಲು ಸೂಚಿಸಲಾಗಿತ್ತು. ಸಮಿತಿಯ ಶಿಫಾರಸಿನಂತೆ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದರು.

12ನೇ ಪುಟ ನೋಡಿ



ಅತಿಥಿ ಉಪನ್ಯಾಸಕರ ಬಹುದಿನಗಳ ಬೇಡಿಕೆ ಈಡೇರಿಸಲು ಸರ್ಕಾರ ಒಪ್ಪಿದೆ. ಸಮಿತಿ ನೀಡಿದ ಶಿಫಾರಸುಗಳ ಜಾರಿಗೆ ಹಣಕಾಸಿನ ಅನುಮೋದನೆ ನೀಡಲಾಗಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಒಡೆದಾಳುವ ನೀತಿಯ ಆದೇಶ'

'ಈ ಆದೇಶದಿಂದ ತೃಪ್ತಿಯಾಗಿಲ್ಲ. ಸರ್ಕಾರವು ಒಡೆದಾಳುವ ನೀತಿ ಅನುಸರಿಸಿದೆ. ಇದು ಸಂಕ್ರಾಂತಿಯ ಸಿಹಿ ಅಲ್ಲ, ಉಪನ್ಯಾಸಕರ ಪಾಲಿಗೆ ಕಹಿ ಆದೇಶವಾಗಿದ್ದು, ಅದನ್ನು ತಿರಸ್ಕರಿಸುತ್ತೇವೆ' ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ತಿಳಿಸಿದ್ದಾರೆ.

12ನೇ ಪುಟ ನೋಡಿ

'ಶೇ 40 ಕಮಿಷನ್: ದಾಖಲೆ ಬಿಡುಗಡೆ ಮಾಡಿದರೆ ಸರ್ಕಾರ ಪತನ'

ಪ್ರಜಾವಾಣಿ ವಾರ್ತೆ

ತುಮಕೂರು: 'ಸರ್ಕಾರ ಭ್ರಷ್ಟಾಚಾರದ ಕೂಪವಾಗಿದೆ. ಶೇ 40 ಕಮಿಷನ್‌ಗೆ ಸಂಬಂಧಿಸಿದಂತೆ ನಮ್ಮಲ್ಲಿರುವ ದಾಖಲೆಗಳನ್ನು ಬಿಡುಗಡೆಗೊಳಿಸಿದರೆ ಸರ್ಕಾರ ಒಂದು ದಿನವೂ ಅಧಿಕಾರದಲ್ಲಿ ಇರಲ್ಲ. 25ಕ್ಕೂ ಹೆಚ್ಚು ಶಾಸಕರು, ನಾಲ್ವರು ಮುಖ್ಯ ಎಂಜಿನಿಯರ್‌ಗಳು ಅಧಿಕಾರ ಕಳೆದುಕೊಳ್ಳುತ್ತಾರೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಲಿ' ಎಂದು ಗುತ್ತಿಗೆದಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆಂಪಣ್ಣ ಶುಕ್ರವಾರ ಇಲ್ಲಿ ಒತ್ತಾಯಿಸಿದರು.

'ಎಲ್ಲ ಪಕ್ಷಗಳ ಅಧಿಕಾರದಲ್ಲೂ ಭ್ರಷ್ಟಾಚಾರ ಒಂದು ಭಾಗವಾಗಿದೆ. ಆದರೆ, ಈಗ ಅದರ ಪ್ರಭಾವ, ಪ್ರಮಾಣ ಹೆಚ್ಚಾಗಿದೆ. ಶೇ 40 ರಷ್ಟು ಕಮಿಷನ್ ಸರ್ಕಾರವಾಗಿ ಮಾರ್ಪಟ್ಟಿದೆ. ಗುತ್ತಿಗೆದಾರರು ಯಾವುದಾದರೂ ಕಾಮಗಾರಿ ಗುತ್ತಿಗೆ ಪಡೆಯಬೇಕಾದರೆ ಮುಂಗಡ ಹಣ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಆರೋಪ ಮಾಡಿದರು.

6ನೇ ಪುಟ ನೋಡಿ

ಚರ್ಚೆ
ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತು ಕಸ್ತೂರಿ ರಂಗನ್ ನೇತೃತ್ವದ ಸಮಿತಿಯ ವರದಿ ಅನುಷ್ಠಾನ ಬೇಕೇ ಬೇಡವೇ? 11

ಒಳ ಪುಟಗಳು

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕಲಾವಿದರಿಗೆ ಗೌರವ

‘ಕರ್ನಾಟಕ ಕಲಾಶ್ರೀ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ



‘ಕರ್ನಾಟಕ ಕಲಾಶ್ರೀ ಪ್ರಶಸ್ತಿ’ ಪುರಸ್ಕೃತರೊಂದಿಗೆ (ಮುಂದೆ ಕುಳಿತವರು ಎಡದಿಂದ ಬಲಕ್ಕೆ) ಅಕಾಡೆಮಿ ರಿಜಿಸ್ಟ್ರಾರ್ ಎಂ. ಶಾಂತಮ್ಮ, ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, ಗರ್ತಿಕೆರೆ ರಾಘವೇಂದ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಇದ್ದಾರೆ

ಬೆಂಗಳೂರು: ಸಂಗೀತ-ನೃತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2020–21 ಮತ್ತು 2021–22ನೇ ಸಾಲಿನ ‘ಕರ್ನಾಟಕ ಕಲಾಶ್ರೀ ಪ್ರಶಸ್ತಿ’ಯನ್ನು ಶುಕ್ರವಾರ ಪ್ರದಾನ ಮಾಡಲಾಯಿತು.

ನಗರದಲ್ಲಿ ಅಕಾಡೆಮಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಗಾಯಕ ಗರ್ತಿಕೆರೆ ರಾಘವೇಂದ್ರ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಆರ್.ಪಿ. ಅಸುಂಡಿ, ಎಸ್.ಎಸ್.ಶಿವಾನಂದಸ್ವಾಮಿ ಹಾಗೂ ಎ.ಆರ್.ರಾಮಮೂರ್ತಿ ಅವರಿಗೆ ‘ಗೌರವ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ದಿವಂಗತ ರಮಾ ಅರವಿಂದ ಅವರ ಪರವಾಗಿ ಪುತ್ರಿ ಮಾನಸಾ ಹೊಳ್ಳ ಅವರು ಪ್ರಶಸ್ತಿ ಸ್ವೀಕರಿಸಿದರು. ಗೌರವ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಹಾಗೂ ನೆನಪಿನ ಕಾಣಿಕೆ ಒಳಗೊಂಡಿದೆ.

ವಾರ್ಷಿಕ ಪ್ರಶಸ್ತಿ: ಕರ್ನಾಟಕ ಸಂಗೀತ ವಿಭಾಗದಲ್ಲಿ ಮಧೂರು ಪಿ. ಬಾಲ ಸುಬ್ರಹ್ಮಣ್ಯಂ, ಸುಕನ್ಯಾ ರಾಂಗೋಪಾಲ್, ಸುರೂಳಿ ಗಣೇಶ್ ಮೂರ್ತಿ, ವಿ. ಮುರುಳಿ, ಎಚ್.ಕೆ.ಬಾಲಕೃಷ್ಣರಾವ್, ಎಚ್.ಎಸ್.ನಾಗರಾಜ್, ಟಿ.ಎಸ್.ಚಂದ್ರಶೇಖರ ಹಾಗೂ ರಂಗಸ್ವಾಮಿ ಪ್ರಶಸ್ತಿ ಸ್ವೀಕರಿಸಿದರು. ಹಿಂದೂಸ್ತಾನಿ ಸಂಗೀತ ವಿಭಾಗದಲ್ಲಿ ಶ್ರೀಪಾದ ಹೆಗಡೆ, ಪಂ. ರಾಜಪ್ರಭು ದೋತ್ರೆ, ಟಿ. ರಂಗ ಪೈ ತೋನ್ಸೆ, ಅಪ್ಪಣ್ಣಾ ರಾಮಚಂದ್ರ ಶಿರೋಳ, ಬಾಲಚಂದ್ರ ನಾಕೋಡ್, ದೇವೇಂದ್ರಕುಮಾರ ಪತ್ತಾರ ಹಾಗೂ ಡಿ.ಎಸ್.ಚಾಳೇಕರ್ ಅವರಿಗೆ ಪ್ರಶಸ್ತಿ ನೀಡಲಾಯಿತು.

ನೃತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ನಯನಾ ರೈ, ಪ್ರವೀಣ್ ಕುಮಾರ್, ಮಧು ನಟರಾಜ್, ಜಿ. ಗುರುಮೂರ್ತಿ, ಕಮಲಾಕ್ಷ ಆಚಾರ್, ಪದ್ಮಜಾ ಸುರೇಶ್, ವಿದ್ಯಾ ರವಿಶಂಕರ್ ಹಾಗೂ ಬಾಲಸುಬ್ರಹ್ಮಣ್ಯಂ ಶರ್ಮ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸುಗಮ ಸಂಗೀತದಲ್ಲಿ ಉಪಾಸನಾ ಮೋಹನ್, ಇಂದ್ರಾಣಿ ಅನಂತರಾಂ, ವಸಂತಕುಮಾರ ಕುಂಬ್ಳೆ, ಕಥಾಕೀರ್ತನದಲ್ಲಿ ವೈಕುಂಠದಾಸ ಮಹಾರಾಜ, ಜಿ. ಸೋಮಶೇಖರದಾಸ್, ಕೆ.ವಿ. ಚಂದ್ರಮೌಳಿ ಹಾಗೂ ಗಮಕ ಕ್ಷೇತ್ರದಲ್ಲಿ ಸಾಧನೆಗೆ ಎಚ್.ಎಸ್. ಗೋಪಾಲ್ ಅವರು ಪ್ರಶಸ್ತಿ ಸ್ವೀಕರಿಸಿದರು.

ಕೀಬೋರ್ಡ್ ವಾದಕ ಗಣೇಶ್ ಭಟ್ ಅವರಿಗೆ ‘ವಿಶೇಷ ಪ್ರಶಸ್ತಿ’ ಹಾಗೂ ಡಿ. ಕೇಶವ್ ಅವರಿಗೆ ‘ಹೊರದೇಶ ಕನ್ನಡ ಕಲಾವಿದರು’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಾರ್ಷಿಕ ಪ್ರಶಸ್ತಿ ತಲಾ ₹ 25 ಸಾವಿರ ನಗದು ಹಾಗೂ ನೆನಪಿನ ಕಾಣಿಕೆ ಹೊಂದಿದೆ.

ಪ್ರಶಸ್ತಿ ಪುರಸ್ಕೃತ ಮಧೂರು ಪಿ. ಬಾಲಸುಬ್ರಹ್ಮಣ್ಯಂ, ‘ಕಲೆಯಲ್ಲಿ ಗುರು-ಶಿಷ್ಯ ಪರಂಪರೆ ಮುಖ್ಯ. ಶಾಸ್ತ್ರೀಯ ಕಲೆ ಔಷಧವಾಗಿದ್ದು, ಮನಸ್ಸಿಗೆ ನೆಮ್ಮದಿ ನೀಡಲಿದೆ. ಸರ್ಕಾರ ಕಡ್ಡಾಯವಾಗಿ ಎಲ್ಲ ಶಾಲೆಗಳಲ್ಲಿ ಕಲಾ ಶಿಕ್ಷಕರನ್ನು ನೇಮಕ ಮಾಡಬೇಕು’ ಎಂದು ಮನವಿ ಮಾಡಿಕೊಂಡರು.



ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಡಾ.ಜಿ.ಎಲ್. ಹೆಗಡೆ ಅಧಿಕಾರ ಸ್ವೀಕರಿಸಿದರು. ಅಕಾಡೆಮಿ ರಿಜಿಸ್ಟ್ರಾರ್ ಎಸ್.ಎಚ್. ಶಿವರುದ್ರಪ್ಪ, ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ನಮ್ರತಾ, ಸದಸ್ಯರಾದ ಶ್ರೀನಿವಾಸ ಸಾಸ್ತಾನ, ಕೆ.ಎಂ.ಶೇಖರ, ಸೆಲ್ಕೋ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹನ ಹೆಗಡೆ ಹೆರವಟ್ಟ, ಲೆಕ್ಕಪರಿಶೋಧಕ ಗೋಪಾಲಕೃಷ್ಣ ಹೆಗಡೆ, ಡಾ. ಶ್ರೀಪಾದ ಹುಕ್ಲಮಕ್ಕಿ, ಯಕ್ಷಗಾನ ಸಂಶೋಧಕಿ ಮಮತಾ ಜೋಶಿ ಹಾಗೂ ಉದ್ಯಮಿ ಶಾಂತಾರಾಮ ಭಟ್ಟ ಇದ್ದರು

‘ಯಕ್ಷಗಾನ ದೇಶದ ಕಲೆಯಾಗಬೇಕು’

ಬೆಂಗಳೂರು: ‘ಯಕ್ಷಗಾನ ವಿಶಿಷ್ಟವಾದ ಕಲಾ ಪ್ರಕಾರವಾಗಿದ್ದು, ಇದು ದೇಶದ ಕಲೆಯಾಗಿ ಹೊರಹೊಮ್ಮಬೇಕು’ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ.ಜಿ.ಎಲ್. ಹೆಗಡೆ ಮಣಕಿ ತಿಳಿಸಿದರು.

ಅಕಾಡೆಮಿಯ ಅಧ್ಯಕ್ಷರಾಗಿ ಶುಕ್ರವಾರ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ‘ಯಕ್ಷಗಾನ ಕಲೆಯು ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುತ್ತಿದೆ. ಪ್ರಪಂಚದ ಎಲ್ಲೆಡೆ ಈ ಕಲೆ ಪ್ರದರ್ಶನ ಕಾಣುವಂತಾಗಬೇಕು. ಯಕ್ಷಗಾನದ ಪ್ರಕಾರವಾದ ಮೂಡಲ ಪಾಯದ ಏಳ್ಗೆಗೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು’ ಎಂದು ಹೇಳಿದರು.

‘ಅಕಾಡೆಮಿಯ ಕಳೆದ ಸಾಲಿನ ಗೌರವ ಪ್ರಶಸ್ತಿ, ಯಕ್ಷಸಿರಿ ಪ್ರಶಸ್ತಿಯನ್ನು ಪ್ರದಾನ ಮಾಡಬೇಕಿದೆ. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಕನ್ನಡ ಮತ್ತು ಸಂಸ್ಕೃತಿ ಸಚಿವರ ಜೊತೆಗೆ ಚರ್ಚಿಸಿ, ದಿನಾಂಕ ನಿಗದಿಮಾಡಲಾಗುವುದು’ ಎಂದು ತಿಳಿಸಿದರು.

ಎಡಬ್ಲ್ಯುಎಸ್ ಸ್ಪರ್ಧೆಯಲ್ಲಿ ಗೆಲುವು



ವೆಂಕಟ್ ತನ್ಮಯ್ ಕುಮಾರ್

ಬೆಂಗಳೂರು: ನಗರದ ಅಮಾತ್ರ ಅಕಾಡೆಮಿ ಶಾಲೆಯ ವೆಂಕಟ್ ತನ್ಮಯ್ ಕುಮಾರ್ ‘ಅಮೆಜಾನ್ ವೆಬ್ ಸೇವೆ’ಗಳ (ಎಡಬ್ಲ್ಯುಎಸ್) ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ.

ವೈಜ್ಞಾನಿಕ ಮನೋಧರ್ಮ, ವಿನ್ಯಾಸ ಮತ್ತು ಕೋಡಿಂಗ್ ಕೌಶಲಗಳ ಪರೀಕ್ಷೆಗಾಗಿ ಕೇಂದ್ರ ಶಿಕ್ಷಣ ಸಚಿವಾಲಯದ ಇನ್ನೊವೇಟಿವ್ ಕೋಶ, ಅಟಲ್ ಇನ್ನೊವೇಷನ್ ಮಿಷನ್, ನೀತಿ ಆಯೋಗ ಮತ್ತು ಸಿಬಿಎಸ್‌ಇ ಸಹಯೋಗದಲ್ಲಿ ಈ ಸ್ಪರ್ಧೆ ಆಯೋಜಿಸಲಾಗಿತ್ತು.

ಸ್ಪರ್ಧೆಯ ‘ಯಂಗ್ ಬಿಲ್ಡರ್ಸ್ ಚಾಲೆಂಜ್–2021’ ವಿಭಾಗದಲ್ಲಿ ತನ್ಮಯ್ ಸಿದ್ಧಪಡಿಸಿದ್ದ ‘ಇಂಟಲಿಜೆಂಟ್ ಬಸ್ ಸಿಮ್ಯುಲೇಟರ್ ಆ್ಯಪ್’ ಗೆಲುವು ಸಾಧಿಸಿತು.

ರಸ್ತೆಯಲ್ಲಿ ಬಸ್, ಆಂಬುಲೆನ್ಸ್‌ನಂತಹ ಆದ್ಯತಾ ವಾಹನಗಳು ಹಾದುಹೋದಾಗ ಈ ತಾಂತ್ರಿಕತೆ ಕಾರ್ಯನಿರ್ವಹಿಸುತ್ತದೆ. ಆದ್ಯತಾ ವಾಹನಗಳು ಸಮೀಪಿಸಿದಾಗ ಸ್ಮಾರ್ಟ್ ಲೇನ್‌ನ ಬಣ್ಣ ಬದಲಾಗಿ, ಚಾಲಕರನ್ನು ಎಚ್ಚರಿಸುವುದು ಆ್ಯಪ್‌ನ ವಿಶೇಷ.

ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ವೆಂಕಟ್ ತನ್ಮಯ್ ಸೇರಿದಂತೆ ದೇಶದ 10 ಶಾಲೆಗಳ ವಿಜೇತರನ್ನು ಸನ್ಮಾನಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

‘ಸದ್ದಿಲ್ಲದೆ ಹೆಚ್ಚುತ್ತಿದೆ ಮಕ್ಕಳಲ್ಲಿ ಕಿವುಡುತನ’

ಬೆಂಗಳೂರು: ‘ಮಕ್ಕಳಲ್ಲಿನ ಕಿವುಡುತನ ಸದ್ದಿಲ್ಲದೆ ಹೆಚ್ಚುತ್ತಿದೆ. ಈ ಸಮಸ್ಯೆಯನ್ನು ಜನಿಸಿದ ಆರು ವರ್ಷದೊಳಗೆ ಪತ್ತೆ ಮಾಡಿ, ಚಿಕಿತ್ಸೆ ನೀಡಬೇಕು’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗೆ ಈಚೆಗೆ ಚಾಲನೆ ನೀಡಿ, ಮಾತನಾಡಿದರು.

ಸುದ್ದಿ 2 ನಿಮಿಷ

ಚುನಾವಣೆ: ಅರ್ಜಿ ವಿಲೇವಾರಿ

ಬೆಂಗಳೂರು: ’ಅವಧಿ ಪೂರ್ಣಗೊಂಡ 56 ನಗರ ಸ್ಥಳೀಯ ಸಂಸ್ಥೆಗಳಿಗೆ 2021 ಡಿಸೆಂಬರ್ ಅಂತ್ಯದೊಳಗೆ ಚುನಾವಣೆ ನಡೆಸಲಾಗಿದೆ‘ ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ಗೆ ಶುಕ್ರವಾರ ಮಾಹಿತಿ ನೀಡಿದೆ.

ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಿಗೆ ನಿಗದಿತ ಕಾಲಮಿತಿಯೊಳಗೆ ಚುನಾವಣೆ ನಡೆಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಅಗತ್ಯ ನಿರ್ದೇಶನ ನೀಡಲು ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಚುನಾವಣಾ ಆಯೋಗದ ಪರ ಹಾಜರಾಗಿದ್ದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ’ಹೈಕೋರ್ಟ್, 2021ರ ನವೆಂಬರ್ 17ರಂದು ನೀಡಿದ್ದ ಆದೇಶದ ಅನುಸಾರ ಅವಧಿ ಪೂರ್ಣಗೊಂಡ 56 ಸ್ಥಳೀಯ ಸಂಸ್ಥೆಗಳಿಗೆ ಡಿಸೆಂಬರ್ 30ರೊಳಗೆ ಚುನಾವಣೆ ನಡೆಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ವಿಜಯಪುರ ಮಹಾನಗರ ಪಾಲಿಕೆ ಚುನಾವಣೆಗಳಿಗೆ ಸಂಬಂಧಿಸಿದ ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿವೆ. ಹಾಗಾಗಿ ಈ ಎರಡೂ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಆಗಿಲ್ಲ‘ ಎಂದು ಮಾಹಿತಿ ನೀಡಿದರು.



ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ‘ಅರ್ಜಿ ವಿಚಾರಣೆ ಮುಂದುವರಿಸುವ ಅಗತ್ಯ ಇಲ್ಲ’ ಎಂದು ಅಭಿಪ್ರಾಯಪಟ್ಟು ವಿಲೇವಾರಿ ಮಾಡಿದೆ.

ಕನ್ನಡ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಲು ಆಗ್ರಹ

ಬೆಂಗಳೂರು: ‘ರಾಜ್ಯದಲ್ಲಿ 1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮದ ಅನುದಾನರಹಿತ ಶಾಲಾ–ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಬೇಕು’ ಎಂದು ರಾಜ್ಯ ಅನುದಾನರಹಿತ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳ ಮತ್ತು ನೌಕರರ ಒಕ್ಕೂಟ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಗೌರವಾಧ್ಯಕ್ಷ ಜಲಮಂಗಲ ನಾಗರಾಜು,‘ 1995ರ ನಂತರದ ಅನುದಾನರಹಿತ ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸದೆ, ಈಗಿನ ಸರ್ಕಾರಗಳು ಕನ್ನಡ ಭಾಷೆಗೆ ಅವಮಾನ ಮಾಡಿವೆ’ ಎಂದು ದೂರಿದರು.

‘2018ರಲ್ಲಿ ಬಿಜೆಪಿ ಸರ್ಕಾರ ನಮ್ಮ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿತ್ತು. ಕಳೆದ ಅಧಿವೇಶನದಲ್ಲೂ ಈ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಲಾಗಿತ್ತು. ಆದರೆ, ಈವರೆಗೆ ಸಮಸ್ಯೆ ಬಗೆಹರಿದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಐಟಿಐ ಕಾರ್ಮಿಕರ ಮೇಲಿನ ದಬ್ಬಾಳಿಕೆ ನಿಲ್ಲಲಿ: ಮೇಧಾ ಪಾಟ್ಕರ್

ಪ್ರಜಾವಾಣಿ ವಾರ್ತೆ



ಪ್ರತಿಭಟನನಿರತ ಕಾರ್ಮಿಕರ ಜೊತೆ ಮೇಧಾ ಪಾಟ್ಕರ್ (ಮಧ್ಯ) ಸಮಾಲೋಚನೆ ನಡೆಸಿದರು

ಬೆಂಗಳೂರು: ‘ಕಾರ್ಮಿಕರು, ಸಂಘಟನೆ ಕಟ್ಟಿಕೊಂಡು ಆ ಮೂಲಕ ತಮ್ಮ ಕಾನೂನುಬದ್ಧ ಹಕ್ಕುಗಳಿಗಾಗಿ ಒತ್ತಾಯಿಸಿದ್ದಾರೆ. ಈ ಕಾರಣಕ್ಕೆ ಅವರನ್ನು ಕೆಲಸದಿಂದ ವಜಾಗೊಳಿಸಿರುವುದು ಸರಿಯಲ್ಲ. ಭಾರತದ ಮೊದಲ ಸಾರ್ವಜನಿಕ ವಲಯದ ಉದ್ದಿಮೆಯಾಗಿರುವ ಐಟಿಐ ಲಿಮಿಟೆಡ್ ತನ್ನ ನಿರ್ಧಾರ ಹಿಂಪಡೆಯಬೇಕು. 80 ಕಾರ್ಮಿಕರನ್ನೂ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು’ ಎಂದು ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಆಗ್ರಹಿಸಿದರು.

ತಮ್ಮನ್ನು ಕಾನೂನು ಬಾಹಿರವಾಗಿ ಕೆಲಸದಿಂದ ವಜಾಗೊಳಿಸಿರುವ ಐಟಿಐ ಆಡಳಿತ ಮಂಡಳಿ ಕ್ರಮವನ್ನು ಖಂಡಿಸಿ ಕಾರ್ಮಿಕರು ಸತತ 45 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ ಅವರು ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

‘ಐಟಿಐ ಆಡಳಿತ ಮಂಡಳಿಯು ಕಾರ್ಮಿಕರ ಶ್ರಮವನ್ನು ಹೀರಿ, ಅವರ ಮೇಲೆ ದಬ್ಬಾಳಿಕೆ ನಡೆಸಿ ತನ್ನ ಖಜಾನೆ ತುಂಬಿಸಿಕೊಳ್ಳಲು ಮುಂದಾಗಿರುವುದು ಸರಿಯಲ್ಲ. ಸಂಘಟನೆ ಕಟ್ಟಿಕೊಳ್ಳುವುದು ಪ್ರತಿಯೊಬ್ಬರ ಹಕ್ಕು. 1926ರ ಟ್ರೇಡ್ ಯೂನಿಯನ್ ಕಾಯ್ದೆಯಲ್ಲೇ ಇದನ್ನು ಖಚಿತಪಡಿಸಲಾಗಿದೆ. ಸಂಘಟನೆ ಮಾಡಿಕೊಂಡಿದ್ದಾರೆ ಎಂಬ ಕಾರಣಕ್ಕೆ ದೌರ್ಜನ್ಯ ನಡೆಸುತ್ತಿರುವುದು ಖಂಡನಾರ್ಹ’ ಎಂದರು.

‘ಐಟಿಐ ಆಡಳಿತ ಮಂಡಳಿಯು ಕೇಂದ್ರ ಕಾರ್ಮಿಕ ಇಲಾಖೆಯ ಸೂಚನೆ ಪಾಲಿಸಬೇಕು. ವಜಾಗೊಳಿಸಿರುವ ಎಲ್ಲಾ ಕಾರ್ಮಿಕರನ್ನೂ ಮರು ನೇಮಕ ಮಾಡಿಕೊಳ್ಳುವಂತೆ ಐಟಿಐ ಆಡಳಿತ ಮಂಡಳಿಗೆ ಪ್ರಾದೇಶಿಕ ಕಾರ್ಮಿಕ ಆಯುಕ್ತರು ಸೂಚನೆ ನೀಡಿದ್ದಾರೆ. ಅದನ್ನು ಪಾಲಿಸಬೇಕು. ಇಲ್ಲದಿದ್ದರೆ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ಸಹಯೋಗದಲ್ಲಿ ದೇಶವ್ಯಾಪಿ ಹೋರಾಟ ನಡೆಸಲಾಗುತ್ತದೆ’ ಎಂದು ಎಚ್ಚರಿಸಿದರು.

ಎಐಸಿಸಿಟಿಯು ರಾಜ್ಯ ಘಟಕದ ಅಧ್ಯಕ್ಷ ಕ್ಲಿಫ್ಟನ್ ಡಿ’ ರೊಜಾರಿಯೋ, ‘ಐಟಿಐ ಕಾರ್ಮಿಕರ ಹೋರಾಟ ಐತಿಹಾಸಿಕವಾದದ್ದು. ಗುತ್ತಿಗೆದಾರರಾಗಿ ಹಲವು ವರ್ಷ ಕೆಲಸ ಮಾಡಿರುವವರು ಸೇವೆ ಕಾಯಂಗೊಳಿಸುವಂತೆ ಈಗ ಹೋರಾಟ ಮಾಡುತ್ತಿದ್ದಾರೆ. ಆಡಳಿತ ವರ್ಗದವರು ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡುವವರೆಗೂ ಪ್ರತಿಭಟನೆ ಮುಂದುವರಿಯಲಿದೆ’ ಎಂದರು.

ಕೆಜಿಎಲ್‌ಯು ಐಟಿಐ ಘಟಕದ ಅಧ್ಯಕ್ಷ ಹೇಮಂತ್, ‘ಕಂಪನಿಗಾಗಿ ಮೂರು ದಶಕಗಳಿಂದ ಕರ್ತವ್ಯ ನಿರ್ವಹಿಸಿದವರನ್ನೇ ಕೆಲಸದಿಂದ ವಜಾಗೊಳಿಸಲಾಗಿದೆ. ಇದನ್ನು ಪ್ರಶ್ನಿಸಿ 45 ದಿನಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದರೂ ಆಡಳಿತ ಮಂಡಳಿ ಬೇಡಿಕೆಗಳಿಗೆ ಸ್ಪಂದಿಸಿಲ್ಲ. ಕಾರ್ಮಿಕರ ಬಗೆಗೆ ಕಂಪನಿ ತಳೆದಿರುವ ಧೋರಣೆಗೆ ಇದು ಸಾಕ್ಷಿ’ ಎಂದು ದೂರಿದರು.

ಗೃಹ ಕಾರ್ಮಿಕರ ಸಂಘದ ಅಧ್ಯಕ್ಷೆ ಸಿಸ್ಟರ್ ಸೀಲಿಯಾ ಮತ್ತು ಗಮನ ಮಹಿಳಾ ಸಮೂಹದ ಮಮತಾ ಇದ್ದರು.

‘ವೇದಿಕೆ ಕಾರ್ಯಕ್ರಮದಲ್ಲಿ ಕನ್ನಡ ಕಡ್ಡಾಯಗೊಳಿಸಿ’

ಬೆಂಗಳೂರು: ‘ರಾಜ್ಯದಲ್ಲಿ ನಡೆಯುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ವೇದಿಕೆ ಕಾರ್ಯಕ್ರಮಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಲು ಕ್ರಮವಹಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ‘ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಕನ್ನಡ ನಮಗೆ ಆದ್ಯತೆಯ ಭಾಷೆಯಾಗಬೇಕೇ ಹೊರತು ಆಯ್ಕೆಯಾಗಬಾರದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೆಲ ಕಾರ್ಯಕ್ರಮಗಳಲ್ಲಿ ಕನ್ನಡ ಬಳಸದಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಪ್ರಾಧಿಕಾರವನ್ನು ಗುರುತುಮಾಡಿ, ಟೀಕೆ ಮಾಡುತ್ತಿದ್ದಾರೆ. ಈ ಸರ್ಕಾರಕ್ಕೆ ಕನ್ನಡದ ಬದ್ಧತೆಯಿಲ್ಲವೆಂದು ಚರ್ಚೆ ಮಾಡುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

PUBLIC NOTICE

ಥಣಿಸಂದ್ರ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿರುವ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಇನ್ನುಮುಂದೆ **ಷೆಡ್ಯೂಲ್ ಪ್ರಾಪರ್ಟಿ** ಎಂದು ಕರೆಯಲ್ಪಡುವ ಮತ್ತು **ಈ ಕೆಳಕಂಡ ಪಟ್ಟಿಯಲ್ಲಿ 1 ರಿಂದ 38ರ ಸಂಖ್ಯೆಯ ವರೆಗೂ ವಿಸ್ತೃತವಾಗಿ ನಮೂದಿಸಿರುವ 19 ಎಕರೆ 14 ಗುಂಟೆಗಳ (17 ಗುಂಟೆಗಳ ಖರಾಬು ಜಮೀನನ್ನು ಹೊರತುಪಡಿಸಿ) ಸಂಯೋಜಿತ ಪರಿವರ್ತಿತ ಸಂಪೂರ್ಣ ಸ್ವತ್ತು ಗೋಕುಲ ಹೌಸ್, ಗೋಕುಲ ಎಕ್ಸ್‌ಟೆನ್ಷನ್, ಮತ್ತೀಕೆರೆ, ಬೆಂಗಳೂರು–560054 ವಿಳಾಸದಲ್ಲಿ ವಾಸವಾಗಿರುವ ದಿವಂಗತ ಶ್ರೀ ಎಂ.ಎಸ್. ರಾಮಯ್ಯ ಅವರ ಪುತ್ರ ಶ್ರೀ ಎಂ.ಆರ್. ಸೀತಾರಾಮ್ (ಮಾಲೀಕರು)** ಅವರಿಗೆ ಸೇರಿದ್ದು ಅವುಗಳ ಹಕ್ಕುಪತ್ರ ಮತ್ತು ನಂ. 21/19, ಕ್ರೇಗ್ ಪಾರ್ಕ್ ಲೇಔಟ್, ಎಂ.ಜಿ. ರಸ್ತೆ ಹತ್ತಿರ, ಬೆಂಗಳೂರು–560001 ವಿಳಾಸದಲ್ಲಿ ನೋಂದಾಯಿತ ಕಛೇರಿಯನ್ನು ಹೊಂದಿರುವ ಜಿ–ಕಾರ್ಪ್ ಸ್ಪೇಸಸ್ ಪ್ರೈವೇಟ್ ಲಿಮಿಟೆಡ್‌ನವರು **(ಡೆವಲಪರ್)** ಈ ಸ್ವತ್ತನ್ನು ಅಭಿವೃದ್ಧಿ ಮಾಡುತ್ತಿರುವ ಹಕ್ಕುಗಳ ಪತ್ರಗಳನ್ನು ನಾವು ಪರಿಶೀಲಿಸುತ್ತಿದ್ದೇವೆ. ಷೆಡ್ಯೂಲ್ ಸ್ವತ್ತಿನ ಹಕ್ಕುಪತ್ರಗಳನ್ನು ಮತ್ತು ಅಭಿವೃದ್ಧಿ ಮಾಡಲು ಹೊಂದಿರುವ ಹಕ್ಕುಗಳನ್ನು ಮಾತ್ರ ಪರಿಶೀಲಿಸಲು ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಕ್ಲೈಮ್‌ಗಳನ್ನು ಹೊಂದಿದ್ದಲ್ಲಿ ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಯೊಡನೆ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕುಬಾಧ್ಯತೆ ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು ಮತ್ತು ಇದರಂತೆ ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಪರಿಶೀಲಿಸಲು ಮುಂದುವರಿಯುತ್ತೇವೆ.

ಷೆಡ್ಯೂಲ್ ಆಸ್ತಿ

ಥಣಿಸಂದ್ರ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿರುವ ಈ ಕೆಳಕಂಡ ಟೇಬಲ್‌ನಲ್ಲಿ ವಿಸ್ತೃತವಾಗಿ ನಮೂದಿಸಿರುವ 19 ಎಕರೆ 14 ಗುಂಟೆಗಳ (17 ಗುಂಟೆಗಳ ಖರಾಬು ಜಮೀನನ್ನು ಹೊರತುಪಡಿಸಿ) ಸಂಯೋಜಿತ ಪರಿವರ್ತಿತ ಸಂಪೂರ್ಣ ಸ್ವತ್ತು.

ಕ್ರಮ ನಂ.	ಸರ್ವೆ ಸಂಖ್ಯೆ	ವಿಸ್ತೀರ್ಣ			ಚೆಕ್ಕುಬಂದಿ			
		ಎಕರೆ	ಗುಂಟೆ	ಖರಾಬು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	47/1 (P)	00	12	00	ಸರ್ವೆ ನಂ. 47/2	ಸರ್ವೆ ನಂ. 48/8	ಸರ್ವೆ ನಂ. 48/5	ಸರ್ವೆ ನಂ. 47/1 ಉಳಿದ ಭಾಗ
2	47/2 (P)	00	25	00	ಖಾಸಗಿ ಸ್ವತ್ತು	ಸರ್ವೆ ನಂ. 47/1	ಸರ್ವೆ ನಂ. 48/5	ಸರ್ವೆ ನಂ. 47/2 ಉಳಿದ ಭಾಗ
3	48/1 (P)	00	16	00	ಸರ್ವೆ ನಂ. 48/2 & 48/7	ಸರ್ವೆ ನಂ. 51	ಸರ್ವೆ ನಂ. 50/2	ಸರ್ವೆ ನಂ. 48/1 ಉಳಿದ ಭಾಗ
4	48/2 (P)	00	05	00	ಸರ್ವೆ ನಂ. 48/6	ಸರ್ವೆ ನಂ. 48/1	ಸರ್ವೆ ನಂ. 48/7	ಸರ್ವೆ ನಂ. 48/2 ಉಳಿದ ಭಾಗ
5	48/4	00	28	00	ಹಳ್ಳ ಅಥವಾ ನಾಲೆ	ಸರ್ವೆ ನಂ. 49/2 & 48/9	ಸರ್ವೆ ನಂ. 49/2	ಸರ್ವೆ ನಂ. 48/9 & 48/5
6	48/5	00	25	00	ಹಳ್ಳ ಅಥವಾ ನಾಲೆ	ಸರ್ವೆ ನಂ. 48/3	ಸರ್ವೆ ನಂ. 48/9 & 48/4	ಸರ್ವೆ ನಂ. 48/8 & 47/1
7	48/6 (P)	00	8.5	00	ಸರ್ವೆ ನಂ. 49/2, 48/3 & 48/8	ಸರ್ವೆ ನಂ. 48/7 & 48/2	ಸರ್ವೆ ನಂ. 50/2	ಸರ್ವೆ ನಂ. 48/6 ಉಳಿದ ಭಾಗ
8	48/7	00	03	00	ಸರ್ವೆ ನಂ. 48/6	ಸರ್ವೆ ನಂ. 48/1	ಸರ್ವೆ ನಂ. 50/2	ಸರ್ವೆ ನಂ. 48/2
9	48/8 (P)	00	02	01	ಸರ್ವೆ ನಂ. 47/1	ಸರ್ವೆ ನಂ. 48/6	ಸರ್ವೆ ನಂ. 48/3 & 48/5	ಸರ್ವೆ ನಂ. 48/8 ಉಳಿದ ಭಾಗ
10	48/9	00	07	00	ಸರ್ವೆ ನಂ. 48/4	ಸರ್ವೆ ನಂ. 48/3	ಸರ್ವೆ ನಂ. 48/4	ಸರ್ವೆ ನಂ. 48/5
11	49/2 (P)	00	08	00	ಸರ್ವೆ ನಂ. 48/4	ಸರ್ವೆ ನಂ. 48/7	ಸರ್ವೆ ನಂ. 49/2 ಉಳಿದ ಭಾಗ	ಸರ್ವೆ ನಂ. 48/3
12	50/2	00	19	00	ಸರ್ವೆ ನಂ. 49/2	ಸರ್ವೆ ನಂ. 51	ಸರ್ವೆ ನಂ. 50/1	ಸರ್ವೆ ನಂ. 48/7
13	51 (P)	01	18	00	ಸರ್ವೆ ನಂ. 50/1, 50/2, 48/7 & ಸರ್ವೆ ನಂ. 48/1ರ ಭಾಗ	ಸರ್ವೆ ನಂ. 55/4, 55/8, 55/3, 55/2, ಸರ್ವೆ ನಂ. 55/5ರ ಭಾಗ	ಸರ್ವೆ ನಂ. 52/8	ಸರ್ವೆ ನಂ. 51 ಉಳಿದ ಭಾಗ
14	52/1	00	05	00	ಸರ್ವೆ ನಂ. 60/1	ಸರ್ವೆ ನಂ. 53	ಸರ್ವೆ ನಂ. 59/2	ಸರ್ವೆ ನಂ. 52/8
15	52/2	00	09	00	ಸರ್ವೆ ನಂ. 52/7	ಸರ್ವೆ ನಂ. 52/8	ಸರ್ವೆ ನಂ. 60/1	ಸರ್ವೆ ನಂ. 50/1
16	52/7	00	08	00	ಸರ್ವೆ ನಂ. 52/3	ಸರ್ವೆ ನಂ. 52/2	ಸರ್ವೆ ನಂ. 60/1 & 60/2	ಸರ್ವೆ ನಂ. 50/1
17	52/8	00	09	00	ಸರ್ವೆ ನಂ. 52/2	ಸರ್ವೆ ನಂ. 53	ಸರ್ವೆ ನಂ. 52/1 & 60/1	ಸರ್ವೆ ನಂ. 51
18	53	00	15	00	ಸರ್ವೆ ನಂ. 52/1 & 52/8	ಸರ್ವೆ ನಂ. 54/2, 54/3, 54/4	ಸರ್ವೆ ನಂ. 58/2	ಸರ್ವೆ ನಂ. 55/1 & 55/4
19	54/1	00	24	01	ಸರ್ವೆ ನಂ. 54/2, 54/3, 54/4	ಸರ್ವೆ ನಂ. 56/4	ಸರ್ವೆ ನಂ. 58/1 & 58/2	ಸರ್ವೆ ನಂ. 56/4 & 55/1
20	54/2	00	04	00	ಸರ್ವೆ ನಂ. 53	ಸರ್ವೆ ನಂ. 54/1	ಸರ್ವೆ ನಂ. 58/2	ಸರ್ವೆ ನಂ. 54/3
21	54/3	00	04	00	ಸರ್ವೆ ನಂ. 53	ಸರ್ವೆ ನಂ. 54/1	ಸರ್ವೆ ನಂ. 54/2	ಸರ್ವೆ ನಂ. 54/4
22	54/4	00	05	00	ಸರ್ವೆ ನಂ. 53	ಸರ್ವೆ ನಂ. 54/1	ಸರ್ವೆ ನಂ. 54/3	ಸರ್ವೆ ನಂ. 55/1
23	55/1	02	19	00	ಸರ್ವೆ ನಂ. 55/4, 55/8, 55/3, 55/2 & 55/5	ಸರ್ವೆ ನಂ. 56/4	ಸರ್ವೆ ನಂ. 54/1, 54/4 & 53	ಸರ್ವೆ ನಂ. 55/7 & 55/6
24	55/2	02	07	00	ಸರ್ವೆ ನಂ. 51	ಸರ್ವೆ ನಂ. 55/1	ಸರ್ವೆ ನಂ. 55/3	ಸರ್ವೆ ನಂ. 55/5
25	55/3	00	06	00	ಸರ್ವೆ ನಂ. 51	ಸರ್ವೆ ನಂ. 55/1	ಸರ್ವೆ ನಂ. 55/8	ಸರ್ವೆ ನಂ. 55/2
26	55/4	00	13	00	ಸರ್ವೆ ನಂ. 51	ಸರ್ವೆ ನಂ. 55/1	ಸರ್ವೆ ನಂ. 53	ಸರ್ವೆ ನಂ. 55/8
27	55/5 (P)	00	11	00	ಸರ್ವೆ ನಂ. 51	ಸರ್ವೆ ನಂ. 55/1 & 55/9	ಸರ್ವೆ ನಂ. 55/2	ಸರ್ವೆ ನಂ. 55/9 & ಸರ್ವೆ ನಂ. 55/5 ಉಳಿದ ಭಾಗ
28	55/6 (P)	00	06	00	ಸರ್ವೆ ನಂ. 55/9	ಸರ್ವೆ ನಂ. 55/7	ಸರ್ವೆ ನಂ. 55/1	ಸರ್ವೆ ನಂ. 55/6 ಉಳಿದ ಭಾಗ
29	55/7	00	06	00	ಸರ್ವೆ ನಂ. 55/6	ಸರ್ವೆ ನಂ. 56/4	ಸರ್ವೆ ನಂ. 55/1	ಸರ್ವೆ ನಂ. 55/7 ಉಳಿದ ಭಾಗ
30	55/8	00	07	00	ಸರ್ವೆ ನಂ. 51	ಸರ್ವೆ ನಂ. 55/1	ಸರ್ವೆ ನಂ. 55/4	ಸರ್ವೆ ನಂ. 55/3
31	55/9 (P)	00	02	00	ಸರ್ವೆ ನಂ. 55/5	ಸರ್ವೆ ನಂ. 55/6	ಸರ್ವೆ ನಂ. 55/5	ಸರ್ವೆ ನಂ. 55/9 ಉಳಿದ ಭಾಗ
32	56/1	00	25.5	6.5	ಸರ್ವೆ ನಂ. 56/3	ಸರ್ವೆ ನಂ. 57	ಸರ್ವೆ ನಂ. 58/1	ಸರ್ವೆ ನಂ. 56/2
33	56/2 (P)	00	11.5	3.5	ಸರ್ವೆ ನಂ. 56/3	ಸರ್ವೆ ನಂ. 57	ಸರ್ವೆ ನಂ. 56/1	ಸರ್ವೆ ನಂ. 56/2 ಉಳಿದ ಭಾಗ
34	56/3 (P)	01	07	00	ಸರ್ವೆ ನಂ. 56/4	ಸರ್ವೆ ನಂ. 56/1 & 56/3	ಸರ್ವೆ ನಂ. 58/1	ಸರ್ವೆ ನಂ. 56/3 ಉಳಿದ ಭಾಗ
35	56/4 (P)	01	15.5	00	ಸರ್ವೆ ನಂ. 54/1 & 55/1	ಸರ್ವೆ ನಂ. 56/3	ಸರ್ವೆ ನಂ. 58/1 & 54/1	ಸರ್ವೆ ನಂ. 56/4 ಉಳಿದ ಭಾಗ
36	58/2	00	33	00	ಸರ್ವೆ ನಂ. 59/2	ಸರ್ವೆ ನಂ. 58/1	ಸರ್ವೆ ನಂ. 59/2	ಸರ್ವೆ ನಂ. 54/1, 54/2 & 53
37	59/2	02	25	05	ಸರ್ವೆ ನಂ. 60/1	ಸರ್ವೆ ನಂ. 59/1 & 58/1	ಸರ್ವೆ ನಂ. 61	ಸರ್ವೆ ನಂ. 58/2, 52/1 & 60/1
38	60/1 (P)	01	00	00	ಸರ್ವೆ ನಂ. 60/2	ಸರ್ವೆ ನಂ. 59/2 & 52/1	ಸರ್ವೆ ನಂ. 60/1 ಉಳಿದ ಭಾಗ	ಸರ್ವೆ ನಂ. 52/8, 52/2 & 52/7
	ಮೊತ್ತ	**19**	**14**	**17**				

ಸಹಿ/– (ಆರ್. ಸುನೀತಾ), ವಕೀಲರು, ಎಎಸ್‌ಎಲ್‌ಎಫ್ ಲಾ ಆಫೀಸಸ್
ನಂ. 34, 7ನೇ ಅಡ್ಡರಸ್ತೆ, ವಸಂತನಗರ ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560052, ದೂ. +91–80–42423000

ಐಸಿಎಆರ್–ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ

ದಕ್ಷಿಣ ವಲಯ ನಿಲ್ದಾಣ
(ಭಾರತೀಯ ಕೃಷಿ ಸಂಶೋಧನಾ ಪರಿಷತ್)
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ
ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಸಚಿವಾಲಯ,
ಆಡುಗೋಡಿ ಅಂಚೆ, ಬೆಂಗಳೂರು–560030

ಎಫ್.ನಂ.3–34/ಸಿಡಿಎನ್/ಎಲ್‌ಆರ್‌ಸಿ/ಟಿ–ಕೊಕೊನಟ್/ಎನ್‌ಡಿಆರ್‌ಐ/2019–20/
ದಿನಾಂಕ: 11–01–2022

ಎಳೆಯ ತೆಂಗಿನಕಾಯಿ ಫಸಲು ಕೊಯ್ಲಿಗಾಗಿ ಕೊಟೇಶನ್ ಆಹ್ವಾನ ಪ್ರಕಟಣೆ

ಮೇಲ್ಕಾಣಿಸಿದ ವಿಳಾಸದಲ್ಲಿನ ಸುಮಾರು 484 ಮರಗಳಿಂದ ಎಳೆಯ ತೆಂಗಿನಕಾಯಿ ಕೊಯ್ಲಿಗಾಗಿ ಹನ್ನೊಂದು ತಿಂಗಳ ಅವಧಿಗಾಗಿ ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 04–02–2022 ಅಪರಾಹ್ನ 2.00 ಗಂಟೆಯೊಳಗೆ ಕೆಳಗೆ ಸಹಿ ಹಾಕಿರುವವರ ಕಚೇರಿಯಿಂದ ಖಾಲಿ ಕೊಟೇಶನ್ ಜೊತೆಗೆ ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಆಡಳಿತಾಧಿಕಾರಿ
ಲ್ಯಾಂಡ್‌ಲೈನ್ ನಂ. 080 22631405

ಪುರಸಭೆ, ಬಾಗೇಪಲ್ಲಿ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(Standard Bidding Document KG-1)

ಟೆಂಡರ್ ಅಧಿಸೂಚನೆ ಸಂ: ಬಾಪುಸ/ಆಶಾ/ಸಿಆರ್/70/2021–22 ದಿ: 10.01.2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಮುಖ್ಯಾಧಿಕಾರಿಗಳು ಪುರಸಭೆ ಬಾಗೇಪಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಬಾಗೇಪಲ್ಲಿ ಪುರಸಭೆಯ 2021–22ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಬಾಗೇಪಲ್ಲಿ ಪಟ್ಟಣದ 01ನೇ ಹಾಗೂ 05ನೇ ವಾರ್ಡ್‌ನಲ್ಲಿನ ಮನೆಗಳಿಗೆ ಹಸಿ–ಕಸ ಹಾಗೂ ಒಣ–ಕಸ ಸಂಗ್ರಹಿಸಲು ಹಸಿರು ಮತ್ತು ನೀಲಿ ಬಣ್ಣದ ಕಸದ ಬುಟ್ಟಿಗಳನ್ನು ಖರೀದಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಜಿ–1 ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಸಕರು ಸಾಮಗ್ರಿಯ ಹೆಸರು: **INDENT No.: DMA/2021-22/IND12904.** ಬಾಗೇಪಲ್ಲಿ ಪಟ್ಟಣದ 01ನೇ ಹಾಗೂ 5ನೇ ವಾರ್ಡ್‌ನಲ್ಲಿನ ಮನೆಗಳಿಗೆ ಹಸಿಕಸ ಹಾಗೂ ಒಣ ಕಸ ಸಂಗ್ರಹಿಸಲು ಹಸಿರು ಮತ್ತು ನೀಲಿ ಬಣ್ಣದ ಕಸದ ಬುಟ್ಟಿಗಳನ್ನು ಸರಬರಾಜು ಮಾಡುವುದು. **Supplying of High Molecule High density Polyethylene (HMHDPE) 10L green and blue dustbins to TMC Bagepalli.** ಇ.ಎಂ.ಡಿ ಮೊತ್ತ: **ರೂ.9550.00.** ಟೆಂಡರ್ ಕಾಲಾವಧಿ: **90 ದಿನಗಳು.** ಗುತ್ತಿಗೆದಾರರ ದರ್ಜೆ: **ಅರ್ಹ ದರ್ಜೆ ಗುತ್ತಿಗೆದಾರರು. ಸೂಚನೆ:** ಟೆಂಡರ್ ನಮೂನೆ ಶುಲ್ಕ: ಇ–ಪ್ರೊಕ್ಯೂರ್‌ಮೆಂಟ್‌ನಂತೆ. **(1)** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24.01.2022 ಸಂಜೆ 5.30 ಗಂಟೆವರೆಗೆ. (2)** ಬಿಡ್ ತೆರೆಯುವ ದಿನಾಂಕ: **27.01.2022 ಸಂಜೆ 4.00 ಗಂಟೆ ನಂತರ. ಷರತ್ತುಗಳು: (1)** ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. **(2)** ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಅಧ್ಯಕ್ಷರು, ಪುರಸಭೆ, ಬಾಗೇಪಲ್ಲಿ | **ಸಹಿ/– ಉಪಾಧ್ಯಕ್ಷರು, ಪುರಸಭೆ, ಬಾಗೇಪಲ್ಲಿ** | **ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬಾಗೇಪಲ್ಲಿ**

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂ.309/ಎಂಸಿಎ/2021–22

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಲಸಂಪನ್ಮೂಲ ಇಲಾಖೆ
(ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇ: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ: 08152–200049.

ಸಂಖ್ಯೆ: ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಕಿ.ಇಂ/ಟೆಂಡರ್ ಪ್ರಕಟಣೆ/43/2021–22/ ದಿನಾಂಕ: 12.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2021–22/ ದಿನಾಂಕ: 11.01.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 04 ಕಾಮಗಾರಿಗಳಿಗೆ ಕೆಡಬ್ಲ್ಯೂ–1&2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ 28ರ ಅನ್ವಯ 03 ಮತ್ತು 04 ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿದಾರರಿಂದ ಏಕಲಕೋಟೆ ಹಾಗೂ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ **ರೂ. 24.97 ಲಕ್ಷ** ಹಾಗೂ ಕನಿಷ್ಠ ಟೆಂಡರ್ ಮೊತ್ತ **ರೂ.4.16 ಲಕ್ಷ.** ನಿಗಧಿತ ಇ.ಎಂ.ಡಿ. ಮೊತ್ತವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯೂಮೆಂಟ್‌ಗಳನ್ನು ವೆಬ್‌ಸೈಟ್ **www.eproc.karnataka.gov.in** ಮೂಲಕ ದಿನಾಂಕ: **17.01.2022ರಿಂದ 29.01.2022ರವರೆಗೆ** ಪಡೆಯಬಹುದು (Download), ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 31.01.2022ರ ಸಂಜೆ 4.30 ಗಂಟೆಯ ನಂತರ.** ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.eproc.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 333/ಎಂ.ಸಿ.ಎ/2021–22

ಕೋವಿಡ್‌-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗೋವಿಂದರಾಜನಗರ ಅಭಿವೃದ್ಧಿ: ಸಚಿವ ಸೋಮಣ್ಣ ಅಧ್ಯಕ್ಷತೆಯಲ್ಲಿ ಸಭೆ

‘ನಗರೋತ್ಥಾನ; ಕಾಮಗಾರಿ ಆರಂಭಿಸಿ’

ಪ್ರಜಾವಾಣಿ ವಾರ್ತೆ



ಸಭೆ ನಡೆಸಿದ ಸಚಿವ ವಿ. ಸೋಮಣ್ಣ. ಮುಖ್ಯ ಎಂಜಿನಿಯರ್‌ಗಳಾದ ವಿಶ್ವನಾಥ್, ಬಿ.ಎಸ್. ಪ್ರಹ್ಲಾದ್, ಸುಗುಣಾ ಇದ್ದರು

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ರಸ್ತೆಗಳು, ಆಸ್ಪತ್ರೆ, ಶಾಲಾ ಕಟ್ಟಡ, ಕೆರೆ ಮತ್ತು ರಾಜಕಾಲುವೆ ಅಭಿವೃದ್ಧಿಗೆ ಯೋಜನೆ ರೂಪಿಸುವಂತೆ ವಸತಿ ಸಚಿವ ವಿ. ಸೋಮಣ್ಣ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಬೇಕಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿದ ಅವರು, ‘ಕೂಡಲೇ ವಿಸ್ತೃತ ಯೋಜನಾ ವರದಿ ರೂಪಿಸಿ ನಗರೋತ್ಥಾನ ಯೋಜನೆಯಡಿ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದರು.

‘ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹೈಟೆನ್ಷನ್ ವಿದ್ಯುತ್ ಮಾರ್ಗ ಹಾಗೂ ವಿದ್ಯುತ್ ಪರಿವರ್ತಕ ಬದಲಾವಣೆ ಸೇರಿ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು 20 ದಿನಗಳಲ್ಲಿ ಪೂರ್ಣಗೊಳಿಸಬೇಕು. ಪಂತರಪಾಳ್ಯ ಆಸ್ಪತ್ರೆ ಬಳಿಯಿರುವ ವಿದ್ಯುತ್ ಪರಿವರ್ತಕದ ಕಂಬಗಳನ್ನು ಕೂಡಲೇ ತೆರವುಗೊಳಿಸಬೇಕು. ಮಾಗಡಿ ರಸ್ತೆ ಮಾರ್ಗದಲ್ಲಿ ಅಳವಡಿಸಿರುವ ಎಚ್‌.ಟಿ ವಿದ್ಯುತ್ ಕೇಬಲ್‌ಗಳು ರಸ್ತೆ ಬದಿ ಬಿದ್ದಿದ್ದು, ಅವುಗಳನ್ನು ತೆರವುಗೊಳಿಸಬೇಕು ಎಂದರು.

ದಟ್ಟಣೆ ಕಾರಿಡಾರ್: ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ನಗರದ 12 ಅತಿ ದಟ್ಟಣೆ ಕಾರಿಡಾರ್‌ಗಳ ಅಭಿವೃದ್ಧಿ ಸೇರಿದಂತೆ ₹6 ಸಾವಿರ ಕೋಟಿ ಮೊತ್ತದ ಕಾಮಗಾರಿಗೆ ರಾಜ್ಯ ಸರ್ಕಾರ ಶುಕ್ರವಾರ ತಾತ್ವಿಕ ಅನುಮೋದನೆ ನೀಡಿದೆ.

ರಸ್ತೆ ಅಭಿವೃದ್ಧಿ, ಕೆಳ ಸೇತುವೆ (ಗ್ರೇಡ್ ಸಪರೇಟರ್), ಕೆರೆ ಅಭಿವೃದ್ಧಿ, ರಾಜಕಾಲುವೆ, ಸೇರಿ ಹಲವಾರು ಅಭಿವೃದ್ಧಿ ಕೆಲಸಗಳಿಗೆ ₹6 ಸಾವಿರ ಕೋಟಿ ಅನುದಾನ ಒದಗಿಸುವ ಬಗ್ಗೆ 75ನೇ ಸ್ವಾತಂತ್ರ್ಯೋತ್ಸವದಲ್ಲಿ ಮುಖ್ಯಮಂತ್ರಿ ಘೋಷಣೆ ಮಾಡಿದ್ದರು. 2022ರ ಜ. 6ರಂದು ಸಚಿವ ಸಂಪುಟದ ಅನುಮೋದನೆಯೂ ದೊರೆತಿತ್ತು.

‘ಮುಂದಿನ ಮೂರು ವರ್ಷಗಳಲ್ಲಿ ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ರಾಜ್ಯ ಸರ್ಕಾರದಿಂದ ಶೇ 50ರಷ್ಟು ಅನುದಾನ ನೀಡಲಾಗುತ್ತದೆ. ಶೇ 40ರಷ್ಟನ್ನು ಕೆಯುಐಡಿಎಫ್‌ಸಿಯ ‘ಕರ್ನಾಟಕ ವಾಟರ್ ಆ್ಯಂಡ್ ಸ್ಯಾನಿಟೈಸೇಷನ್ ಪೂಲ್ಡ್ ಫಂಡ್ ಟ್ರಸ್ಟ್’ನಿಂದ ಸಾಲ ಪಡೆಯಬೇಕು. ಶೇ 10ರಷ್ಟನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲದಿಂದ ಭರಿಸಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಕಾಮಗಾರಿ ಹಂಚಿಕೆ ಮತ್ತು ಕ್ರಿಯಾ ಯೋಜನೆಯನ್ನು ಆಡಳಿತ ಇಲಾಖೆಯ ವಿವೇಚನೆಗೆ ಒಳಪಟ್ಟು ಅಂತಿಮಗೊಳಿಸಲು ಅನುಮೋದನೆ ನೀಡಲಾಗಿದೆ. ₹10 ಕೋಟಿಗೂ ಕಡಿಮೆ ಇರದಂತೆ ಪ್ಯಾಕೇಜ್ ರೂಪಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ(ಕೆಟಿಪಿಪಿ) ಪ್ರಕಾರ ಟೆಂಡರ್ ಪ್ರಕ್ರಿಯೆ ನಡೆಸಬೇಕು’ ಎಂದು ಆದೇಶದಲ್ಲಿ ಷರತ್ತು ವಿಧಿಸಲಾಗಿದೆ.

ವಿಶೇಷ ಜಿಲ್ಲಾಧಿಕಾರಿ ಹೊನ್ನಾಂಬಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆಯ ಅಡಿಯಲ್ಲಿ ದಾಖಲಾಗಿರುವ ಅರೆ ನ್ಯಾಯಿಕ ಪ್ರಕರಣಗಳ ತ್ವರಿತ ವಿಲೇವಾರಿಗೆ ವಿಶೇಷ ಜಿಲ್ಲಾಧಿಕಾರಿ-3 ಹುದ್ದೆಯನ್ನು ಸೃಜಿಸಿರುವ ಸರ್ಕಾರ, ಐಎಎಸ್ ಅಧಿಕಾರಿ ಎಸ್. ಹೊನ್ನಾಂಬಾ ಅವರನ್ನು ಈ ಹುದ್ದೆಗೆ ಶುಕ್ರವಾರ ನೇಮಿಸಿದೆ.

ಬೀಡಾಡಿ ಪ್ರಾಣಿ ಸಂರಕ್ಷಣೆಗೆ ಏನು ಕ್ರಮ: ಹೈಕೋರ್ಟ್

ಬೆಂಗಳೂರು: ’ಗೋ ಸಂರಕ್ಷಣೆ ಮಾಡಬೇಕು ಎಂದು ಸರ್ಕಾರ ಹೇಳುತ್ತಿದೆ. ಅದೇ ರೀತಿ ಬೀಡಾಡಿ ಪ್ರಾಣಿಗಳ ಸಂರಕ್ಷಣೆಯೂ ಅತ್ಯಗತ್ಯವಾಗಿದ್ದು, ಅದಕ್ಕಾಗಿ ಸರ್ಕಾರ ಏನು ಮಾಡುತ್ತಿದೆ‘ ಎಂದು ಹೈಕೋರ್ಟ್, ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

’ರಾಜ್ಯದ ಪ್ರತಿ ತಾಲ್ಲೂಕಿನಲ್ಲೂ ಗೋಶಾಲೆ ಆರಂಭಿಸಬೇಕು ಹಾಗೂ ಈಗಾಗಲೇ ಇರುವ ಗೋಶಾಲೆಗಳಿಗೆ ಮೇವು, ನೀರು, ಸೂಕ್ತ ಜಾಗ ಮತ್ತು ಆರೋಗ್ಯ ಸೌಲಭ್ಯ ಕಲ್ಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು‘ ಎಂದು ಕೋರಿ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ’ಬೀಡಾಡಿ ಪ್ರಾಣಿಗಳ ಕಲ್ಯಾಣಕ್ಕಾಗಿ ಯೋಜನೆ ಜಾರಿಗೊಳಿಸಲಾಗಿದೆಯೇ ಎಂಬ ಬಗ್ಗೆ ಮಾಹಿತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಕೋರ್ಟ್ ಸೂಚಿಸಿದೆ. ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿದೆ.

ಬಿಬಿಎಂಪಿ ಚುನಾವಣೆಗೆ ಅರ್ಜಿ ಆಹ್ವಾನ

ಬೆಂಗಳೂರು: ಬಿಬಿಎಂಪಿ ಚುನಾವಣೆಗೆ ಸಿದ್ಧತೆ ನಡೆಸಿರುವ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಜನಪರ ಕಾಳಜಿಯುಳ್ಳ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯ ಜಂಟಿ ಕಾರ್ಯದರ್ಶಿ ಮತ್ತು ಬೆಂಗಳೂರು ಉಸ್ತುವಾರಿ ರಘುಪತಿ ಭಟ್, ‘ಕೆಆರ್‌ಎಸ್ ಪಕ್ಷ ಜನರ ಸಹಭಾಗಿತ್ವದಲ್ಲಿ ಸಮೃದ್ಧ ಬೆಂಗಳೂರು ನಿರ್ಮಿಸುವ ಗುರಿ ಹೊಂದಿದೆ. ಸ್ವತಂತ್ರವಾಗಿ ಯೋಚಿಸುವ ಮಹಿಳೆಯರು ರಾಜಕಾರಣದಲ್ಲಿ ತೊಡಗಲು ಹಾಗೂ ಚುನಾವಣೆಗಳಲ್ಲಿ ಸ್ಪರ್ಧಿಸಲು ವೇದಿಕೆ ಕಲ್ಪಿಸಲಿದೆ’ ಎಂದರು.

‘ಬಿಬಿಎಂಪಿ ಚುನಾವಣೆಗೆ ಎಲ್ಲ ವಾರ್ಡ್‌ಗಳಿಂದ ಉತ್ತಮ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಉದ್ದೇಶದಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ವಿಶೇಷವಾಗಿ ನಡೆಯಲಿದೆ. ಆಸಕ್ತರು https://cybermatrix.in/bbmpelereg ಅಥವಾ 9611720802 ಸಂಖ್ಯೆಗೆ BBMP ಎಂದು ವಾಟ್ಸ್‌ಆ್ಯಪ್ ಮಾಡಬಹುದು’ ಎಂದು ಹೇಳಿದರು.

ರಾಜಲಕ್ಷ್ಮೀ ಬರಗೂರು ಪುಸ್ತಕ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ಡಾ.ಬರಗೂರು ಪ್ರತಿಷ್ಠಾನದ ವತಿಯಿಂದ ರಾಜಲಕ್ಷ್ಮೀ ಬರಗೂರು ಸ್ಮರಣಾರ್ಥವಾಗಿ ನೀಡಲಾಗುವ ‘ಶ್ರೀಮತಿ ರಾಜಲಕ್ಷ್ಮೀ ಬರಗೂರು ಪುಸ್ತಕ ಪ್ರಶಸ್ತಿ’ಗೆ ಕೃತಿಗಳನ್ನು ಆಹ್ವಾನಿಸಲಾಗಿದೆ.

‘ಪ್ರೊ.ಬರಗೂರು ರಾಮಚಂದ್ರಪ್ಪ ಹಾಗೂ ದಿ.ರಾಜಲಕ್ಷ್ಮೀ ಬರಗೂರು ಅವರ ಆಸಕ್ತ ಕ್ಷೇತ್ರಗಳಾದ ವಿಚಾರ ಸಾಹಿತ್ಯ ಹಾಗೂ ಕಾದಂಬರಿ ಪ್ರಕಾರಗಳಲ್ಲಿ ಆಯ್ಕೆಯಾದ ಕೃತಿಗಳಿಗೆ ತಲಾ ₹10 ಸಾವಿರ ನಗದು, ಫಲಕ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಗುತ್ತದೆ’ ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು 2021ರ ಡಿಸೆಂಬರ್ 31ರೊಳಗೆ ಪ್ರಕಟವಾದ ವಿಚಾರ ಸಾಹಿತ್ಯ ಹಾಗೂ ಕಾದಂಬರಿಯ ತಲಾ ಮೂರು ಪ್ರತಿಗಳನ್ನು 2022ರ ಫೆಬ್ರುವರಿ 10 ರೊಳಗೆ ಸಲ್ಲಿಸಬೇಕು.

ಕೃತಿಗಳನ್ನು ಕಳುಹಿಸಬೇಕಾದ ವಿಳಾಸ: ಡಾ.ಎ.ವಿ.ಲಕ್ಷ್ಮೀನಾರಾಯಣ, ಬೆಳಕು, 2453, 3ನೇ ಬ್ಲಾಕ್, ವಿಶ್ವೇಶ್ವರಯ್ಯ ಬಡಾವಣೆ, ಸೊಣ್ಣೇನಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು–560110.
ಹೆಚ್ಚಿನ ಮಾಹಿತಿಗೆ: 9964640890.

ಬಿಬಿಎಂಪಿ: ಎರವಲು ಸೇವೆ 5 ವರ್ಷಕ್ಕೆ ಸೀಮಿತ

ಬೆಂಗಳೂರು: ಬಿಬಿಎಂಪಿಗೆ ಎರವಲು ಸೇವೆ ಮೇಲೆ ನೌಕರರನ್ನು ನಿಯೋಜನೆ ಮಾಡಿಕೊಳ್ಳುವ ಪ್ರಕ್ರಿಯೆಗೆ ರಾಜ್ಯ ಸರ್ಕಾರ ಹೊಸ ನೀತಿ ರೂಪಿಸಿದ್ದು, ಬೇರೆ ಇಲಾಖೆ ನೌಕರರನ್ನು ಐದು ವರ್ಷಕ್ಕೂ ಮೇಲ್ಪಟ್ಟು ಪಾಲಿಕೆಯಲ್ಲಿ ಉಳಿಸಿಕೊಳ್ಳಬಾರದು ಎಂಬ ನಿಯಮ ಜಾರಿಗೊಳಿಸಿದೆ.

ಬಿಬಿಎಂಪಿಯಲ್ಲಿ ಸದ್ಯ 93 ಎಂಜಿನಿಯರ್‌ಗಳು ಬೇರೆ ಇಲಾಖೆಯವರಾಗಿದ್ದು, ಅವರಲ್ಲಿ ಐದು ವರ್ಷ ಪೂರೈಸಿದ 11 ಎಂಜಿನಿಯರ್‌ಗಳು ಈಗ ಮಾತೃ ಇಲಾಖೆಗೆ ಮರಳಬೇಕಿದೆ. ‘ಪಾಲಿಕೆಗೆ ಎಲ್ಲ ಇಲಾಖೆಯಿಂದಲೂ ನಿಯೋಜನೆ ಮಾಡಿಕೊಳ್ಳಬಾರದು. ತಾಂತ್ರಿಕ ನೈಪುಣ್ಯ ಹೊಂದಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗಳಿಂದ ಮಾತ್ರ ನಿಯೋಜನೆ ಮಾಡಿಕೊಳ್ಳಬಹುದು. ಪರೀಕ್ಷಾರ್ಥ ಅವಧಿ ಮತ್ತು 2 ವರ್ಷ ಸೇವೆ ಸಲ್ಲಿಸಿದ ನಂತರವಷ್ಟೇ ನಿಯೋಜನೆಗೆ ಪರಿಗಣಿಸಬೇಕು’ ಎಂದು ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಹೊಸ ಆದೇಶದಲ್ಲಿ ತಿಳಿಸಿದೆ.

ಆನೇಕಲ್: ₹3.91 ಕೋಟಿ ಮೌಲ್ಯದ ಜಮೀನು ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಆನೇಕಲ್: 'ತಾಲ್ಲೂಕಿನ ವಿವಿಧೆಡೆ ಅಂದಾಜು ₹3.91 ಕೋಟಿ ಮೌಲ್ಯದ 3.23 ಎಕರೆ ವಿಸ್ತೀರ್ಣದ ಸರ್ಕಾರಿ ಜಮೀನು ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ' ಎಂದು ತಹಶೀಲ್ದಾರ್ ಪಿ.ದಿನೇಶ್ ತಿಳಿಸಿದ್ದಾರೆ.

ಕಸಬಾ ಹೋಬಳಿಯ ಮಡಿವಾಳದಲ್ಲಿ 12 ಗುಂಟೆ ಓಣಿ ದಾರಿಯನ್ನು ಒತ್ತುವರಿ ಮಾಡಿದನ್ನು ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ. ಈ ಜಮೀನಿನ ಬೆಲೆ ಅಂದಾಜು ₹60 ಲಕ್ಷಕ್ಕೂ ಹೆಚ್ಚಾಗಿದೆ.

ಈ ಜಾಗದ ಸರ್ವೆ ನಂಬರ್ 28ರಲ್ಲಿ ಒಟ್ಟು 20 ಗುಂಟೆ ಸರಕಾರಿ ಓಣಿ ದಾರಿಯನ್ನು ಒತ್ತುವರಿ ಮಾಡಿ ಬೇಲಿ ಹಾಕಿ ನಿವೇಶನ ವಿಂಗಡಿಸಿ ಮಾರಾಟ ಮಾಡುವ ಪ್ರಯತ್ನ ನಡೆದಿದೆ ಎನ್ನುವ ಮಾಹಿತಿ ತಿಳಿದು ಬಂದಿತ್ತು. ಇದನ್ನು ತೆರವುಗೊಳಿಸಲಾಗಿದೆ. ನಾಲ್ಕು ಗುಂಟೆ ಭೂಮಿಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿರುವುದು ಸಹ ಕಂಡುಬಂದಿದೆ. ಆದರೆ, ನ್ಯಾಯಾಲಯದಲ್ಲಿ ಈ ಜಮೀನಿನ ವಿಚಾರಣೆ ಬಾಕಿ ಇರುವುದರಿಂದ ತೆರವುಗೊಳಿಸಿಲ್ಲ ಎಂದು ದಿನೇಶ್ ತಿಳಿಸಿದ್ದಾರೆ.

ಗುಡ್ಡನಹಳ್ಳಿಯಲ್ಲಿ ಸರ್ಕಾರಿ ಕೆರೆಯಲ್ಲಿ ಒತ್ತುವರಿಯಾಗಿದ್ದ 2 ಗುಂಟೆ ಜಮೀನನ್ನು ತೆರವುಗೊಳಿಸಲಾಗಿದೆ. ಅತ್ತಿಬೆಲೆ ಹೋಬಳಿಯ ಹಳೇಹಳ್ಳಿಯಲ್ಲಿ ಒತ್ತುವರಿ ಮಾಡಿದ್ದ 2 ಎಕರೆ ಸರ್ಕಾರಿ ಕೆರೆಯನ್ನು ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ. ಇದರ ಮೌಲ್ಯ ₹ 1.5 ಕೋಟಿಯಾಗಿದೆ. ಬೊಮ್ಮಸಂದ್ರದಲ್ಲಿ ಒತ್ತುವರಿ ಮಾಡಲಾಗಿದ್ದ 3 ಗುಂಟೆ ಸ್ಮಶಾನದ ಜಾಗವನ್ನು ವಶಕ್ಕೆ ಪಡೆಯಲಾಗಿದೆ.

ಜಿಗಣಿ ಹೋಬಳಿ ರಾಜಾಪುರದಲ್ಲಿ ಒತ್ತುವರಿಯಾಗಿದ್ದ 20 ಗುಂಟೆ ರಾಜಕಾಲುವೆಯನ್ನು ತೆರವುಗೊಳಿಸಲಾಗಿದ್ದು, ಇದರ ಮೌಲ್ಯ ₹1 ಕೋಟಿಯಾಗಿದೆ. ಈ ಜಾಗಕ್ಕೆ ಗೇಟ್ ಅಳವಡಿಸಲಾಗಿತ್ತು ಹಾಗೂ ಉಳಿದ ಭೂಮಿಯಲ್ಲಿ ಖಾಸಗಿ ಈಜುಕೊಳ ನಿರ್ಮಿಸಿ ಬಡಾವಣೆ ನಿವಾಸಿಗಳು ಮಾತ್ರ ಬಳಸುವಂತೆ ಮಾಡಿಕೊಳ್ಳಲಾಗಿತ್ತು. ಅಧಿಕಾರಿಗಳು ಈ ಬಗ್ಗೆ ಪ್ರಶ್ನಿಸಿದಾಗ ಅಲ್ಲಿನ ಸಿಬ್ಬಂದಿ ಗೇಟು ತೆರೆಯದೆ ಈಜುಕೊಳವನ್ನು ಕೃಷಿ ಹೊಂಡ ಮತ್ತು ಮಳೆ ನೀರು ಸಂಗ್ರಹಕ್ಕೆ ಬಳಸಲಾಗುತ್ತಿದೆ ಎಂದು ಹೇಳಿ ದಾರಿ ತಪ್ಪಿಸಲು ಯತ್ನಿಸಿದ್ದರು. ಇದನ್ನು ಸಹ ತೆರವುಗೊಳಿಸಲಾಗಿದೆ ಎಂದು ದಿನೇಶ್ ತಿಳಿಸಿದ್ದಾರೆ.

ಸರ್ಜಾಪುರ ಹೋಬಳಿಯ ತಿಂಡ್ಲು ಗ್ರಾಮದಲ್ಲಿ ಒತ್ತುವರಿ ಮಾಡಿದ್ದ 10 ಗುಂಟೆ ಸರ್ಕಾರಿ ಕೆರೆಯನ್ನು ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ. ಚಿಕ್ಕದುನ್ನಸಂದ್ರ ಗ್ರಾಮದಲ್ಲಿ ಸಾಬೀಕ್ ಕಂಪನಿ ಒತ್ತುವರಿ ಮಾಡಿದ್ದ 10 ಗುಂಟೆ, ಮುತ್ತಾನಲ್ಲೂರು ಗ್ರಾಮದಲ್ಲಿ ಒತ್ತುವರಿ ಮಾಡಿದ್ದ 4 ಗುಂಟೆ ಸರ್ಕಾರಿ ಕೆರೆಯನ್ನು ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ತೋಟಗಾರಿಕೆ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ಆವರಣದಲ್ಲಿ ಈ ಬಾರಿಯ 'ರಾಷ್ಟ್ರೀಯ ತೋಟಗಾರಿಕೆ ಮೇಳ'ದ ಭೌತಿಕ ವೀಕ್ಷಣೆಯನ್ನು ಕೋವಿಡ್ ಕಾರಣದಿಂದ ರದ್ದು ಮಾಡಲಾಗಿದೆ. ಆನ್‌ಲೈನ್ ವೇದಿಕೆಗಳಲ್ಲೇ ಮೇಳ ಪ್ರದರ್ಶಿಸಲು ತಯಾರಿ ನಡೆದಿದೆ.

ಸಂಸ್ಥೆಯ ಆವರಣದಲ್ಲಿ ಪ್ರತಿ ವರ್ಷದಂತೆ ಮೇಳಕ್ಕೆ ಬೇಕಾದ ಅಗತ್ಯ ತಯಾರಿಗಳು ಈ ಬಾರಿಯೂ ನಡೆದಿದ್ದವು. ಫೆಬ್ರುವರಿ 24ರಿಂದ 27ರ ವರೆಗೆ ಮೇಳ ನಡೆಸಲು ದಿನಾಂಕ ನಿಗದಿಯಾಗಿತ್ತು. ಆದರೆ, ಕೋವಿಡ್ ಪ್ರಕರಣಗಳ ಏರಿಕೆಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಮೇಳಕ್ಕೆ ಜನರಿಗೆ ಪ್ರವೇಶ ನೀಡದಿರಲು ಐಐಎಚ್‌ಆರ್ ತೀರ್ಮಾನಿಸಿದೆ.

'ಕೋವಿಡ್ ಪರಿಸ್ಥಿತಿಯಲ್ಲಿ ಲಕ್ಷಾಂತರ ಜನ ಸೇರುವ ತೋಟಗಾರಿಕೆ ಮೇಳ ಆಯೋಜನೆ ಸೂಕ್ತವಲ್ಲ. ಈ ಕಾರಣದಿಂದ ಮೇಳದ ಭೌತಿಕ ವೀಕ್ಷಣೆಗೆ ಅವಕಾಶ ನೀಡದಿರಲು ತೀರ್ಮಾನಿಸಲಾಗಿದೆ. ಈ ಬಾರಿ ಆನ್‌ಲೈನ್‌ಮೇಳಕ್ಕೆಆದ್ಯತೆನೀಡಿದ್ದೇವೆ'ಎಂದು ಐಐಎಚ್‌ಆರ್‌ನಿರ್ದೇಶಕಬಿ.ಎನ್.ಎಸ್. ಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕೃಷಿಕರಿಗೆ ನೆರವಾಗುವಂತೆ ಸಂಸ್ಥೆ ಈ ಬಾರಿಯೂ 14 ಕೃಷಿ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸಿದೆ. 10 ಹೊಸ ತಳಿಗಳನ್ನೂ ಹೊರತಂದಿದ್ದೇವೆ. ಇವುಗಳ ಪ್ರಾತ್ಯಕ್ಷಿಕೆಗಳು ಸಂಸ್ಥೆಯ ಆವರಣದಲ್ಲಿ ಈಗಾಗಲೇ ಸಿದ್ಧಗೊಂಡಿವೆ' ಎಂದು ವಿವರಿಸಿದರು.

'ಒಂದು ವೇಳೆ ಮೇಳ ನಿಗದಿಯಾಗಿರುವ ಸಮಯಕ್ಕೆ ಕೋವಿಡ್ ಪ್ರಭಾವ ತಗ್ಗಿದರೆ, ಸೀಮಿತ ಮಂದಿಗೆ ಮಾತ್ರ ಮೇಳಕ್ಕೆ ಪ್ರವೇಶ ನೀಡಲಿದ್ದೇವೆ. ಜಿಲ್ಲಾವಾರು ರೈತರಿಗೆ ನಿಗದಿತ ದಿನದಂದು ಮೇಳ ವೀಕ್ಷಣೆಗೆ ಅವಕಾಶ ಕಲ್ಪಿಸುವ ಚಿಂತನೆ ಇದೆ. ಮೇಳದಲ್ಲಿ ಪ್ರದರ್ಶನ ಮಳಿಗೆಗಳನ್ನು ಹಾಕಲು ಹಲವರು ಆಸಕ್ತಿ ತೋರಿದ್ದರು. ಭೌತಿಕ ಮೇಳ ರದ್ದಾಗಿರುವುದರಿಂದ ಅವರು ಮುಂಗಡವಾಗಿ ನೀಡಿದ್ದ ಹಣ ಹಿಂತಿರುಗಿಸಲಾಗಿದೆ' ಎಂದು ಅವರು ಹೇಳಿದರು.


ರಾಷ್ಟ್ರೀಯ ತೋಟಗಾರಿಕೆ ಮೇಳ (ಸಂಗ್ರಹ ಚಿತ್ರ)

'ನೇರಪ್ರಸಾರ ಇರುವುದಿಲ್ಲ'


ಬಿ.ಎನ್.ಎಸ್. ಮೂರ್ತಿ

'ಕಳೆದ ಬಾರಿಯಂತೆ ಆನ್‌ಲೈನ್ ವೇದಿಕೆಗಳಲ್ಲಿ ಮೇಳದ ನೇರಪ್ರಸಾರ ಇರುವುದಿಲ್ಲ. ಈ ಪರಿಸ್ಥಿತಿಯಲ್ಲಿ ನೇರಪ್ರಸಾರ ವ್ಯವಸ್ಥೆ ಕಲ್ಪಿಸಿದರೂ ಹಣ ವ್ಯರ್ಥ. ಈ ಕಾರಣದಿಂದ ಮೇಳದ ವಿಶೇಷಗಳು ಹಾಗೂ ಕೃಷಿ ಮಾಹಿತಿ ವಿವರಿಸುವ ವಿಡಿಯೊಗಳನ್ನು ಚಿತ್ರೀಕರಿಸಿ, ಅವುಗಳನ್ನು ಐಐಎಚ್‌ಆರ್ ವೆಬ್‌ಸೈಟ್ ಹಾಗೂ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಿದ್ದೇವೆ. ಈ ಕಾರ್ಯ ಪ್ರಗತಿಯಲ್ಲಿದ್ದು, ರೈತರು ಹಾಗೂ ಸಾರ್ವಜನಿಕರು ತಮಗೆ ಬೇಕಾದಾಗ ಅವುಗಳನ್ನು ವೀಕ್ಷಿಸಬಹುದು' ಎಂದು ಬಿ.ಎನ್.ಎಸ್.ಮೂರ್ತಿ ವಿವರಿಸಿದರು.

'ಕೃಷಿ ವಿಜ್ಞಾನ ಕೇಂದ್ರಗಳಲ್ಲಿ (ಕೆವಿಕೆ) ಕಳೆದ ವರ್ಷ ಮೇಳದ ನೇರಪ್ರಸಾರ ವ್ಯವಸ್ಥೆ ಇತ್ತು. ರೈತರು ಕೆವಿಕೆಗಳಲ್ಲಿ ಕುಳಿತು ಮೇಳ ವೀಕ್ಷಿಸಿದ್ದರು. ಈ ವರ್ಷ ಕೆವಿಕೆಗಳಲ್ಲೂ ರೈತರನ್ನು ಸೇರಿಸುವ ಪರಿಸ್ಥಿತಿ ಇಲ್ಲ. ನೇರಪ್ರಸಾರದಲ್ಲಿ ಕೃಷಿ ಮಾಹಿತಿ ನೀಡಲು ಸಂಸ್ಥೆಯ ನೂರಾರು ಸಿಬ್ಬಂದಿ ಆವರಣದಲ್ಲಿ ಸೇರಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ನೇರಪ್ರಸಾರ ಕೈಬಿಡಲಾಗಿದೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH Stage, Anjanapura, Vishweswaraiah Layout, BDA/ A Katha 20x30, 30x40, 40x60, 50x80, BUYING/ SELLING, IMMEDIATE SETTLEMENT. SHIVARAJU: 9845390290, 9591369367.

BANASHANKARI 6TH Stage,7th Block,30x40, West, 6th Block, 40x60, Sites For sale. 9632822225 9148553232

BTM Layout

BTM 2ND STAGE 4th 'B' CROSS- 66x69 North Facing SITE FOR SALE: CONTACT: 93437-28200/ 81051-88430

HBR Layout

5TH BLOCK 3 Adjoining 40X60 BDA Sites North Facing, 40' Road, @ 9000/- 9880225333/ 9845035333

Jayanagar

VISVESHWARAIAH LAYOUT- BDA 4TH BLOCK-30x40 North Facing Site for Sale immediately. 8660044518

J P Nagar

"SALE BDA 60x40 site @ J.P.Nagar 9th Phase. W/F, 60 feet Road, Brokers Excuse. 9663512935"

Kengeri

KEMPEGOWDA LAYOUT, BDA Site 100 Feet Road, Commercial Site for Sale, East Facing, 40x60, 2 sites (adjacent). Contact 9945112279

KHB SITE (Bande Mata) Kengeri For Sale, 30x40 West Facing, Contact 9945112279

Kanakapura Road

KANAKAPURA ROAD, HOUSE Starting 60 Lakhs & SITE Starting 20 Lakhs. BDA 'A' Khata, Panchayat Khata, R.M.S. PROPERTIES. 6360702897



BMRDA APPROVED
Rs. 1649/- Per Sq.feet
Near Art of Living
Ready to Reg & Const.,
upto 90% Bank Loan
Contact: 9513850029

"40X60 SOUTH facing Site, Developed Locality, Sreenidhi Layout, near Konanakunte, 6300/- P.sft. Owner: 9845088449, 9845249799"

Magadi Road

SITES FOR SALE
@ Tavarekere Town
BMRDA 'A' Katha
Sites Available
Ready for Registration & Construction
Bank loan Available...
Contact
9535311817 / 7650076571

Nagarabhavi

A KHATA 40x65 Site for Sale East Facing Rs 9500 Sqft at Mallathahalli Deepa Complex Next Mahesh PU College Contact: 9845989058

Nelamangala

SALE 60X65 Site at Arashinakunte, Near BELLayout, Nelamangala Main Road. Contact Owner: 9886789567

Ramanagar

RESIDENTIAL CONVERTED Site For Sale Near Ramanagar 0.5Km from Highway 10890 Sq.ft 1350/- P.Sq.ft Clear Title. Owner- 9900115519.

Vishweshwariah Layout

VISHVESHWARAIAH LAYOUT 4th Block 50x80 West Facing Site for sale Direct Parties,Agents Excuse. 9845500019/ 7019314962

AVAILABLE/ WANTED, BDA Sites in Vishweshwaraiah Layout, Kempegowda Layout, 20x30, 30x40, 40x60, 50x80 Contact: Genuine Buyers/ Sellers For Immediate Settlement: 8892901567/ 9341733480.

30X40 RAILWAY Layout Bavaninagar Ullal Main Road Mangalore Pu College, Visveswaraya Layout 30x40 4th Block Site Sale 40ft 5600/-: 8310003509

AVAILABLE BDA Site Visveswariah Layout 3rd Block 30x40 West Facing Good Location Genuine Buyers: 9743381719

URGENT SALE Vishweshwaraiah Layout BDA site #3428, N/F, 40x60, 6th Block, near National Public School and park parallel 100 ft Road, Require immediate settlement. Owner Pratap. 9606847367.

'AVAILABLE VISHWESHWARAIAH Layout 1st Block 20x30. 4th Block 30x40- 40 Feet Road Good Location. 8553908699'

Rajajinagar

RAJAJINAGAR 1ST Block Gokul Hotel Road 45x90 East Face Commercial site sale for. Contact: 9945079777

Vidyaranyapura

2-BHK FLATS For Sale. Behind Sambhram College, MS Palya. Newly Built. Call: 9901834205/ 9739216896

Kumaraswamy Layout

EAST FACING 30 x 40 BDA site with house in ISRO Layout Bangalore, Owner 9591411133

Commercial Building

Banaswadi

BRAND NEW Retail Commercial Building for Sale, HBR ORR, Banaswadi, Expected 80Cr, Stoyds. 9845003469/6364910678

Indiranagar

COMMERCIAL BUILDING for Sale, 100 feet Road, Indiranagar, 60x90, Expected 24Cr. 45x90, Expected 12Cr. Stoyds. 9845003469/ 6364910678

TENENTED COMMERCIAL NEW BUILDING 12,000 Sft SALE, Indiranagar, Getting 7L, 10 Years Agreement, 13Cr. 9980577227.

Real Estate Agents

Koramangala

KORAMANGALA EXCELLENT POSH RESIDENTIAL LOCATION 60X90 PLOT with ULTRA LUXURIOUS BUNGALOW on SALE, and 40x60 Plot Brand new 4 BHK independent House with Lift. Call 'Venkat' 9845156191

Flat

Dollars Colony

3 BHK Luxury Flats Dollars Colony, 2nd cross, Pebble Bay. 8088330330. www.govianu.com

HRBR Layout

FLATS FOR Sale @ HRBR BDA Layout 2/ 3 BHK in Good Location 9538828808 9845066608

Jayanagar

JAYANAGAR 4TH 'T'Block, 3 BHK fully furnished, 3 attach bathroom, 1850 Sft- 2,30,00,000/- -9980761200.

NEW FLATS For Sale Jayanagar 1st Block East 2 & 3BHK Call 9538848828, 9845066608.

Kanakapura Road

2- 3- BHK FLAT Sale,Vastu Compliant, 41,00,000/- Onwards. Konankunte Near Junior Delhi Public School, Kanakapura Main Road. Contact:- 9611144096/ 9343722162.

J P Nagar

J.P.NAGAR 3RD Phase near Mini forest New apartment,BBMP 'A'Khatha, 3 BHK,2200 sft 2,30,00,000/-, 2nd Phase- 3 BHK,1346sft 1,50,00,000/--, 4 BHK,2597 sft 2,72,00,000/- -9980761200.

NEW FLATS for sale, J.P.Nagar 9th Phase 2&3 BHK,now 20%.less price, possession 3 months, Contact- 8867255121, 9902673417.

Old Airport Road

MURUGESHPALYA WIND Tunnel Road. FLAT FOR SALE. 2-Bedroom with Carparking, First Floor. 5500000/-. Negotiable. 9845243757

Rajarajeshwari Nagar

3BHK FLATS, 75L, Opposite Gopalan Arcade, Metro Station. OC + CC, Canara Bank Approved: 9611374397

R T Nagar

RT NAGAR Shriram White House 3 BHK flat for Sale @ 1.10 crore slightly Negotiable, clean title Deeds with all amenities, Newly painted with all new accessories. 7022223429, 9916471979

Sahakarnagar

LUXURY HIGH Rise Flats, Sahakar Nagar, 60 Feet Road, F-Block. 8088330330, www.govianu.com

Sunkadakatte

SALE 2 BHK (760 sft) Corner Flat, Gound floor, Janariya apartment, Sunkadakate, Magadi Road. Contact: 9886789567

Sanjaynagar

3 BHK Luxury Flats Sanjaynagar, near RMV Hospital Park. 8088330330 www.govianu.com

Vasanth Nagar

2 BHK flat for sale at palace cross Road, Vasanthnagar, East facing, 1 Covered car park. Gated community, 1262 sqft. 9845493251/ 9449009325

Farm House/ Land/ Resorts

Out-Station

SALE- CHIKKAMAGALUR Farm House with Resort, 29 Lakh per acre. 8103990990. www.govianu.com

House

Banashankari

40X60 BDA independent house for sale in Banashankari contact 9886846877 / 8123259015

HSR Layout

'HOUSE FOR sale HSR layout, 30×50, Ground and first floor, N/F, Brokers excuse, Contact 9663512935'

Jayanagar

SALE 4000 Sqft West BDA Site 7 BHK Bunglow Jayanagar 1st Block 24000/- Sqft Negotiable 7349580555

Kumaraswamy Layout

NEW BUILDING for sale, BDA Kumarswamy layout. 25x40 GF 1 BHK, First and Second 2 BHK 3rd Floor 3 BHK Duplex with lift Contact: 9035279845 Price- 2.70CR

Koramangala

FOR SALE Koramangala 3rd Block 3750 sft plot with decent 4 BRduplex house. Good location. Genuine buyers only call Rajender 9886111960.

Rajajinagar

RAJAJINAGAR.M BLOCK 43x55 BDA NE, Corner old House for Sale on Main Road opposite Marriott 22k Negotiable Sunil: 9845201710

Ramamurthy Nagar

NEW HOUSE SALE: NRI LAYOUT, Ramamurthy Nagar, 1.15 Crore. Ground, First. N/F. 1,000 Sqft. 9110499696.

Uttarahalli

SALE 5 Rooms Spacious, Luxurious, Vaasthu HOUSE, Teak, Granite, Marble, Near Mantri Alpyne, Dwarakanagar, Near Channasandra. Contact: 9900149157.

Vishweshwariah Layout

NEWLY CONSTRUCTED Architect designed triplex house for sale in BDA site Vishveshwariah Layout 3rd block. Contact: 9880745310

Commerical

Basaveshwaranagar

WEST OF CHORD Road- Near Pavitra Paradise 55x75- East facing. Cheque Payment 30,000/ Sft. 'PRAKASH ENTERPRISES'- 98456-09477

HRBR Layout

AVAILABLE For Sale HRBR Layout, I Block, 2nd Cross, North Facing BDA Commercial 60 x 40 Plot with residential building. Contact 9980117302

Joint Development

Multiple Locations

JOINT VENTURE & Joint Developement. Small & Large plot available in Bangalore City and Surroundings. Broker Excuse 6364212394

Villas/Bunglows

Kanakapura Road

NANADA PRAKRUTHI Gated Community Independent Villa BMRDA Approved 30x40 Duplex 3 BHK, Wardrobes, kitchenette 85 Lakhs Off Kanakapura Road Before Ravishankar Ashram 9901011122, 9845064043.

3 BHK, 1st Floor, E/Facing, Near Southend, Park Belt, Metro Station, School, Colleges, Jayanagar. 8073039883

Villas/Bunglows

ACCOMMODATION AVAILABLE for Rent 3 Bedroom 1250 sqft Independent Villa in Cox town. Contact: 9845930444.

RENTAL PROPERTIES

Accommodation Available

Commercial

1400 SFT FIRST, Second Floor Commercial Space Suitable For office Garment Shop at Jayanagar, 3rd Block Circle Rent, 55000/- Negotiable 9886673794

COMMERCIAL SPACE for rent ground floor 300 to 800 sqft for mobile shop, sweetsshop. Pharmacy. Bank. ATM, Restaurants, Showroom and 1st floor 800 sqft plug and play. 1300 sft office space Opp.Sagar Hospital Thilaknagar Road. 100 feet from Swagath Theatre Metro Station in Bannerghatta Road. Contact 9845522122/ 9353883078

Flats

FOR LEASE 2Bedroom FLAT With Car Parking First Floor 20,00,000/- Basaveshwar Nagar Bangalore 79: 9980133336

House

AVAILABLE HOUSE 3 BHK With Interior, For RENT at Malleshwaram, Vegetarians Only Contact: Owner 9448421431.

REAL ESTATE BUYING

Sites

Kanakapura Road

SITE WANTED 30x40/ 40x60 BDA/ BDA Approved, Preferably in Narayananagar (Bank Officer's Layout)/ BCMC/ Judicial Layout/ Banashankari 6th stage. Dr. Roopak 9880299011.

Multiple Locations

BDA SITES WANTED Arkavathi, Anjanapura, Banashankari 6th Stage, Vishweswaraiah, Kempegowda, any BDA Layout. Contact: SAPTHAGIRI. 9900268073, 9448068073.

REQUIRED 30X40, 40x60, 50x80, 80x120 Commercial/ residentialsites Hebbal, Manyatha, Judicial Layout. 2% Commission. 9845004307.

BUILDERS ESSENTIAL

Water Proofing Materials

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement.
This newspaper does not vouch or subscribe to the claims and representations made by advertisers.
GM-Advertisement

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

JOB OPPORTUNITIES

Marketing & Sales

Local Rep Bangaluru Retired person from Defense organization. Promote Technical textiles. Rs. 10000/- per month. Work from home. 2% Commission. resume@urjafabrics.com

Part-Time Jobs

REPUTED MNC Company Provide Work From Home to 30 to 35K at Malleswaram: 7019215243/ 9886641282

BUSINESS

Business to Business

Financial Services

'AISHWARYA GROUP'- Invest 25L- 50L in Trading, Multiple Businesses. Property Security.Monthly 5% Fixed Returns. Investors Welcome. Contact:- 7892818780

Business Offers

Dealers And Stockists

WANTED STOCKIST, Promoters Sales Staff for Fast moving Consumer/ Herbal products all over Karnataka. Phone No. 9448041257

Finance

NRI'S INVESTMENT And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

EDUCATIONAL

Admission

ONE SITTING: LL.B, B.TECH, M.TECH, DIPLOMA, MBA, MCA, M.Sc, BBA, BCA, B.Sc, B.Com, B.PHARM, GNM, MLT, PU, SSLC. Asha Institute, Bangalore. Ph: 9448460103/ 7093438248.

PERSONAL

Change of Name

I, VASANTHI, widow daughter of No. 7005725, Rank: HAV, Name: M. KANNAN, R/a: No. 119, 4th Cross, Sonnenahalli PO, Viveknagar, Bengaluru-560047, have changed my name from VASANTHI to K. VASANTHI vide affidavit dated 10/01/2022 before notary S.I. Balaguru and advocate S. Balu, City Civil Courts, Mayo Hall, Bengaluru.

I, MANJULAMMA D/o Nagappa N.S., Residing at #03/2-2, 6th Cross, Amarjyothinagar, Vijayanagar, Bangalore-560040, have Changed my Name to N.Manjula W/o T.V. Shivalingappa, D/o Nagappa N.S., Vide Affidavit Dated 12-01-2022, Before Notary B A Lakshminarayana Rao, Bangalore

I, AMOGH CHANDRASHEKAR S/o. Chandrashekar. S. R/a #001, Block-1, Om Sri Residency, Uttarahalli Main Road, Opposite to Union Bank of India, Bengaluru-560061 Have Changed My Name to AMOGH RAO vide Affidavit Dated: 14.01.2022 Before Notary D.K. Rameshappa, Bangalore-11.

I, ADITYA. C. S/o. Chandrashekar. S. R/a #001, Block-1, Om Sri Residency, Uttarahalli Main Road, Opposite to Union Bank of India, Bengaluru- 560061 Have Changed My Name to ADITYA VASISHT vide Affidavit Dated: 14.01.2022 Before Notary D.K. Rameshappa, Bangalore-11.

I, Sumaiya Taj Kaiser W/O Azharulla Shariff K.M,aged about 37 years,Residing at #4254, K.G.F Main road, Bharath Polytec Bangarpet Town 563114. Have changed my name from Sumaiya Taj Kaiser Jamal to Sumaiya Taj Kaiser affidavit dated 06.01.2022 Notary V.B.Prasad Bangarpet.

I, BINDU B.R. W/o. Gangadhar B.R. R/a #2533, Nrupathunga Road, Opp. CSI Kannada Church, T. Dasarahalli, Bengaluru-560057 Have Changed My Name to AMRUTHA B.R. vide Affidavit Dated: 11.01.2022 Sworn Before Notary G.B. Turamari, Bengaluru-32.

I, RANJITHA R/o #803, Ghaana Apartment Road, Dr. Vishnuvardhan Road, Rajarajeshwari Nagar, Bengaluru-98 have changed my name as RANJITH Vide affidavit dated 13-01-2022 before Notary L. Puttaraju, Bangalore

Lost

LOST
I, G. Krishnamurthy, R/a No. 595, 16th Cross, 6th Phase, J.P. Nagar, Bangalore-560 078 have lost Original Sale Deed No.945 / 68-69 dated 22-5-1968 Regd at S.R.O B'lore South Taluk
Finders please contact: 9880945945
or inform near by Police Station

ಸಂಕ್ರಾಂತಿಯ ಸುಗ್ಗಿಗೆ ಹುಗ್ಗಿಯ ಸಿಹಿ

ವೇದಾವತಿ ಎಚ್.ಎಸ್

ಗೋಧಿ ನುಚ್ಚಿನ ಸಿಹಿ ಪೊಂಗಲ್

ಬೇಕಾಗುವ ಸಾಮಗ್ರಿಗಳು: ಗೋಧಿ ನುಚ್ಚು/ವಡಕಲು ಗೋಧಿ – 1 ಕಪ್, ಹೆಸರುಬೇಳೆ – 1/4 ಕಪ್, ನೀರು – 3ಕಪ್, ಹಾಲು – 1/2 ಲೀಟರ್, ಬೆಲ್ಲ – 1 ಕಪ್, ತುಪ್ಪ – 1/4 ಕಪ್, ಒಣಕೊಬ್ಬರಿ – 1/4 ಕಪ್, ಲವಂಗದ ಪುಡಿ – 1/4ಟೀ ಚಮಚ, ಏಲಕ್ಕಿ ಪುಡಿ – 1/2ಟೀ ಚಮಚ, ಗೋಡಂಬಿ, ದ್ರಾಕ್ಷಿ ಸ್ವಲ್ಪ, ಪಚ್ಚ ಕರ್ಪೂರದ ಪುಡಿ ಚಿಟಿಕೆ, ಉಪ್ಪು ಚಿಟಿಕೆ.

ತಯಾರಿಸುವ ವಿಧಾನ: ಹೆಸರುಬೇಳೆ ಮತ್ತು ಗೋಧಿನುಚ್ಚನ್ನು ಬೇರೆ ಬೇರೆಯಾಗಿ 2 ರಿಂದ 3 ನಿಮಿಷಗಳ ಕಾಲ ಹುರಿಯಿರಿ. ಬಳಿಕ ಹುರಿದ ಬೇಳೆ ಮತ್ತು ಗೋಧಿ ನುಚ್ಚನ್ನು ಕುಕ್ಕರಿನಲ್ಲಿ ಹಾಕಿ. ನೀರು ಮತ್ತು ಹಾಲನ್ನು ಸೇರಿಸಿ. 5-6 ವಿಷಲ್ ಕೂಗಿಸಿ. ಇನ್ನೊಂದು ಪಾತ್ರೆಯಲ್ಲಿ ಬೆಲ್ಲವನ್ನು ಹಾಕಿ ಕಾಲು ಕಪ್ ನೀರು ಸೇರಿಸಿ ಕುದಿಸಿ ಸೋಸಿಕೊಳ್ಳಿ. ನಂತರ ಬೆಲ್ಲದ ನೀರನ್ನು ಬೇಯಿಸಿದ ಮಿಶ್ರಣಕ್ಕೆ ಸೇರಿಸಿ. ಒಣ ಕೊಬ್ಬರಿಯನ್ನು ಸೇರಿಸಿ. ಗಟ್ಟಿಯಾಗುತ್ತಾ ಬಂದಾಗ ತುಪ್ಪವನ್ನು ಚಿಟಿಕೆ ಉಪ್ಪನ್ನು ಸೇರಿಸಿ. ಲವಂಗ, ಪಚ್ಚ ಕರ್ಪೂರದ ಪುಡಿ ಮತ್ತು ಏಲಕ್ಕಿ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ. ಕೈಬಾಣಲೆಯಲ್ಲಿ ಒಂದು ಟೀ ಚಮಚ ತುಪ್ಪ ಹಾಕಿ ಬಿಸಿ ಮಾಡಿಕೊಳ್ಳಿ. ಈ ತುಪ್ಪದಲ್ಲಿ ಗೋಡಂಬಿ, ದ್ರಾಕ್ಷಿಯನ್ನು ಹುರಿದು ತಯಾರಿಸಿ ಕೊಂಡ ಪೊಂಗಲ್‌ಗೆ ಮಿಶ್ರಣ ಮಾಡಿ. ರುಚಿಯಾದ ಗೋಧಿ ನುಚ್ಚಿನ ಸಿಹಿ ಪೊಂಗಲ್ ತಯಾರಿಸಿ ಸವಿಯಿರಿ.





ನಳಪಾಕ



ಶೇಂಗಾ ಎಳ್ಳಿನ ಉಂಡೆ

ಬೇಕಾಗುವ ಸಾಮಗ್ರಿಗಳು: ಶೇಂಗಾ ಬೀಜ – 1 ಕಪ್, ಎಳ್ಳು – ಅರ್ಧ ಕಪ್, ಗಟ್ಟಿ ಅವಲಕ್ಕಿ – ಅರ್ಧ ಕಪ್, ಒಣಕೊಬ್ಬರಿ – ಕಾಲು ಕಪ್ , ಬೆಲ್ಲ – 1 ಕಪ್ ಪುಡಿ, ಏಲಕ್ಕಿಪುಡಿ,– ಅರ್ಧ ಟೀ ಚಮಚ, ತುಪ್ಪ – 2 ಟೇಬಲ್ ಚಮಚ

ತಯಾರಿಸುವ ವಿಧಾನ: ಶೇಂಗಾ ಬೀಜವನ್ನು ಹುರಿದು ಸಿಪ್ಪೆ ತೆಗೆಯಿರಿ. ಎಳ್ಳು ಸಿಡಿಯುವರೆಗೆ ಹುರಿಯಿರಿ. ಅವಲಕ್ಕಿಯನ್ನು ಗರಿಗರಿಯಾಗುವರೆಗೆ ಸಣ್ಣ ಉರಿಯಲ್ಲಿ ಹುರಿಯಿರಿ. ಒಣಕೊಬ್ಬರಿಯನ್ನು ಒಂದು ನಿಮಿಷ ಸಣ್ಣ ಉರಿಯಲ್ಲಿ ಹುರಿಯಿರಿ. ಮಿಕ್ಸಿ ಜಾರಿಗೆ ಶೇಂಗಾ, ಎಳ್ಳು, ಅವಲಕ್ಕಿ, ಒಣಕೊಬ್ಬರಿ ಹಾಕಿ ನುಣ್ಣಗೆ ಪುಡಿ ಮಾಡಿ. ಪುಡಿ ಮಾಡಿದ ಮಿಶ್ರಣಕ್ಕೆ ಬೆಲ್ಲದಪುಡಿ ಮತ್ತು ಏಲಕ್ಕಿ ಪುಡಿಯನ್ನು ಸೇರಿಸಿ ಮತ್ತೊಮ್ಮೆ ಮಿಕ್ಸಿಯಲ್ಲಿ ನುಣ್ಣಗೆ ಮಾಡಿಕೊಳ್ಳಿ. ತಯಾರಿಸಿದ ಪುಡಿಯನ್ನು ಬೌಲಿಗೆ ಹಾಕಿ ತುಪ್ಪವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣದಿಂದ ನಿಂಬೆ ಗಾತ್ರದ ಉಂಡೆಯನ್ನು ತಯಾರಿಸಿಕೊಳ್ಳಿ. ರುಚಿಕರವಾದ ಮತ್ತು ಆರೋಗ್ಯಕರವಾದ ಉಂಡೆಯನ್ನು ಹದಿನೈದು ದಿನಗಳ ಕಾಲ ಇಟ್ಟು ಸವಿಯಬಹುದು.

ಸಂಕ್ರಾಂತಿ ಸುಗ್ಗಿ ಸಂಭ್ರಮದ ಹಬ್ಬ. ಹೆಣ್ಣು ಮಕ್ಕಳಿಗಂತೂ ವಿಶಿಷ್ಟವಾದ ಹಬ್ಬ. ಉತ್ತರ ಕರ್ನಾಟಕ ಭಾಗದಲ್ಲಿ ಮಹಿಳೆಯರು ಸಂಕ್ರಾಂತಿ ಹಬ್ಬವನ್ನು ಸಂಭ್ರಮಿಸುವ ಪರಿಯನ್ನು ಆ ನೆಲದ ಸೊಗಡಿನಲ್ಲೇ ಆಸ್ವಾದಿಸಿ...

ನೆನಪಿನ ಬುತ್ತಿಗೆ ಸಂಕ್ರಮಣದ ಬುತ್ತಿಯೂಟ

ಎದಿತುಂಬ ಕುಸುರೆಳ್ಳು ಮೂಡಿದ್ದಂಗ...

ರಶ್ಮಿ ಎಸ್.

ಸಂಕ್ರಾಂತಿ ಹಿಂದಿನ ದಿನದ ಸಂಭ್ರಮನೇ ಸಂಭ್ರಮ. ನಮ್ಮನ್ಯಾಗ ನಮ್ಮವ್ವ ರಾತ್ರಿ ತೊಳದು ಒಣ ಹಾಕಿದ ಎಳ್ಳಿಗೆ ಚೂರು ಅರಿಶಿಣ ಮತ್ತು ಬೇವಿನೆಲಿ ಕೂಡಿಸಿ, ಮಿಕ್ಸಿಗೆ ಹಾಕಿ ಇಟ್ಟಂದ್ರ ಅವೊತ್ತು ಸಾಬೂನಿಗೆ ಸೂಟಿ ಅಂತಲೇ ಅರ್ಥ.

ಚಳಿಗಾಲ ಕಳದು, ಬ್ಯಾಸಗಿ ಹೆಜ್ಜಿ ಇಡೂ ಹೊತ್ತಿನಾಗ ತಂಗಾಳಿ, ಒಣಗಾಳಿಯಾಗ್ತದ. ಮೊಣಕಾಲಿನಿಂದ ಕೆಳಗೆಲ್ಲ ಕೆರಕೊಂಡ ಗಾಯಗಳು, ಮೊಣಕೈಯಿಂದ ಮುಂಗೈತನಾನೂ ಗೀರುಗಾಯಗಳು ಮೂಡ್ತಾವ. ಕಣ್ಣಕೆಳಗಿನ ಗಲ್ಲದ ಮ್ಯಾಲೆ ಬರ ಬಿದ್ದ ಹೊಲದಂಥ ಬಿರುಕುಗಳು ಮೂಡಿದ್ರ, ನಗೂದು ತ್ರಾಸು.

ನಕ್ರ ರಕ್ತ ಸುರಸ್ತೀನಿ ಅನ್ನೂಹಂಗ ತುಟಿ ಬಿರೀತಾವ. ಅವಾಗ... ಬರೋಬ್ಬರಿ ಅವಾಗ ಈ ಸಂಕ್ರಾಂತಿ ಬರ್ತದ. ಮೈಮನಸಿಗೆ ಎಣ್ಣಿಯುಣಸಾಕ. ಚರ್ಮ ಮಿದುಗೊಳಿಸಾಕಂತ ಆ ಎಳ್ಳು ಅರಿಶಿಣದ ಮಿಶ್ರಣ ಮಾಡಿ ಸ್ನಾನಕ್ಕ ಕೊಡ್ತಾರ.

ಹೆಣ್ಮಕ್ಕಳು ಭೋಗಿ ದಿನ ತಲಿಗೆ ಎಣ್ಣಿ ಹಚ್ಕೊಂಡು, ಮೈಗೆ ಈ ಮೃದುವಾದ ಲೇಪನ ಹಚ್ಕೊಂಡು ಸ್ನಾನ ಮಾಡಿದ್ರ, ಆ ಒಣಚರ್ಮದ ಗುರುತಿಲ್ಲದಷ್ಟು ನುಣ್ಣನೆಯ ನುಣುಪು ಮೈಗೆ ಬರ್ತದ. ಸಂಕ್ರಾಂತಿಗೆ ತಣ್ಣನೆಯ ಗಾಳಿಯೊಳಗ ಮೂಡುವ ಎಳೀಬಿಸಿಲಿಗೆ ಕುಂತ್ರ... ಆಹಹಾ.. ಸ್ವರ್ಗ ಅಗ್ದಿ ನಮ್ಮನಿ ಅಂಗಳದಾಗ. ಈಗ ಅಂಗಳ ಇಲ್ಲಂದ್ರ ಬಾಲ್ಕನಿಗೆ ಬಂದಂಗ.

ಅಂಗಳದಾಗ ಕುಂತ ಕೂಡಲೆ, ನಮ್ಮವ್ವ ಮೊದಲು ಕಾಡಗಿ ಹಿಡ್ಕೊಂಡು ಬರ್ತಿದ್ಲು. ಅದೂ ಕಳಸಕ್ಕ ಎಣ್ಣಿ ಹಚ್ಚಿ, ದೀಪದ ಅಡ್ಡ ಹಿಡದು ಬರುವ ಕಪ್ಪು. ಅದನ್ನ ಕಣ್ಣಂಚಿಗೆ ಹಚ್ತಿದ್ರು. ಆ ಅರಿಷಿಣದ ಮೈಗೆ ದೃಷ್ಟಿಯಾಗಬಾರದು ಅನ್ನುವ ಎಚ್ಚರಿಕೆಯಂತ. ಗಲ್ಲದ ತುದಿಗೊಂದು ಕಪ್ಪು ಚುಕ್ಕಿ ಇಟ್ಟಾಗ ಸಮಾಧಾನ ಅವರಿಗೆ. ಬ್ಯಾಡಂದ್ರ ಅಗ್ದಿ ಕಿವಿಹಿಂದರೆ ಒಂದು ದೃಷ್ಟಿಬೊಟ್ಟು ಚುಚ್ಚಿದ ಮ್ಯಾಲೆ ಅವರ ಜನ್ಮಕ್ಕ ಸಮಾಧಾನ ಆಗೂದು.

ಆಮೇಲೆ ಒಂದು ಹರಿವಾಣದಾಗ ಕುದಿಸಿದ ಗೆಣಸು, ಸುಲಿದಿಟ್ಟ ಕಬ್ಬು, ತೊಳೆದಿಟ್ಟ ಸುಲಗಾಯಿ(ಕಡ್ಲೆ ಗಿಡ), ಕ್ಯಾರೆಟ್ಟು, ಸೀಬೆಕಾಯಿ, ಕ್ಯಾರೆಕಾಯಿ, ಹುರದ ಸೇಂಗಾ, ಬೆಲ್ಲ, ಇಲ್ಲಾಂದ್ರ ಸೇಂಗಾದುಂಡಿ, ಎಳ್ಳುಂಡಿಯ ಚಿಗಳಿ ಇವಿಷ್ಟೂ ಬರೂವು. ಅವೊತ್ತು ಮುಂಜಾನಿಯ ನ್ಯಾರಿ (ತಿಂಡಿ)ಗೆ ಇವೇ ಎಲ್ಲ.

ಕೂದಲು ಒಣಗಿಸುವುದರೊಳಗ ಇವನ್ನೆಲ್ಲ ತಿಂದು, ಒಂದು ಹೊರಿ ಕಸ.. ಕಬ್ಬು ಮತ್ತು ಸುಲಗಾಯಿದು. ಅದು ನೋಡಿದಾಗ ಗೊತ್ತಾಗಬೇಕು.. ಇವರ ಮನ್ಯಾಗ ಭೋಗಿ ಅದೆಷ್ಟು ಸಂಭ್ರಮದಿಂದಾಯ್ತು ಅಂತ.

ಇದು ಮುಗಿಸಿ ಒಳ ಬಂದ್ರ, ಸೇಂಗಾದ ಮೈ ಸುಡದ್ದಂಗ ಹಂಚಿಗೆ ಹಾಕಿ ಹುರೀಬೇಕು. ಅಂದ್ರ ಸತತ ಬಟ್ಟಲೆ ಅವುಗಳ ಮೈ ಹೊರಳಸ್ಕೊಂತ ಇರಬೇಕು. ಅಗ್ದಿ ನಮ್ಮ ಬೆರಳಿಗೆ ಕಾವು ತಾಕದ ಕಾಳಜಿಹಂಗೆ, ಸೇಂಗಾ ಕಪ್ಪಾಗದ್ದಂಗ ನೋಡಬೇಕು.

ಒಣ ಕೊಬ್ಬರಿ ಸಣ್ಣ ಹೆಚ್ಚಬೇಕು. ಪುಠಾಣಿ, ಹಸನು ಮಾಡಬೇಕು. ಡೈಮಂಡ್ ಕಲ್ಸಕ್ರಿ ನೋಡಾಕ ಸಿಗ್ತಿದ್ದಿದ್ದೇ ಈ ಸಮಯದೊಳಗ. ಅವನ್ನು ಒಂದು ಬಟ್ಟಲದಾಗ ಇಡಬೇಕು. ಕುಸುರೆಳ್ಳಿನ ಒಂದು ಪಾಕೀಟು. ಜೊತಿಗೆ ನಮ್ಮ ಸ್ನಾನದಷ್ಟೇ ಮುಚ್ಚಟೆಯಿಂದ ತೊಳೆದ ಎಳ್ಳು, ಬಾಣಲಿಯೊಳಗ ಹೊರಳಾಡಿ ಹೊಟ್ಟಿಯುಬ್ಬಿಸಿಕೊಂಡು ಮಲಗಿರ್ತಾವ. ಅವನ್ನು, ಬೆಲ್ಲದ ಚೂರು, ಇವೆಲ್ಲ ಕೂಡಿಸಿ ಕುಸುರೆಳ್ಳು ಮಾಡಿಟ್ರ, ಮಕ್ಕಳಿಗೆಲ್ಲ ಯಾವಾಗ ಇವನ್ನು ಬೀರೇವು.. ಯಾವಾಗ ಬಾಯ್ತುಂಬ ಹಾಕಿಕೊಂಡೇವು ಅಂತ ಕಾಯೂದೆ ಆಗ್ತದ.

ಸಂಕ್ರಾಂತಿ ಸಂಜೀತನಾನೂ ಇದಕ್ಕ ತಪದಂತೆ ಕಾಯಬೇಕು. ಇನ್ನ ಸಂಕ್ರಾಂತಿ ಬುತ್ತಿ ಕಟ್ಟೂದಂದ್ರ, ಅತ್ತಿ, ನಾದಿನಿಯರು, ಅತ್ತೆ ಸೊಸೆಯರು, ಅಮ್ಮ ಮಗಳು, ಹಿಂಗ ಎಲ್ಲ ಬಾಂಧವ್ಯಗಳೂ ತಮ್ಮ ತಮ್ಮ ವಿಶೇಷ ಖಾದ್ಯಗಳ ಅಡುಗೆ ಮಾಡಿ, ಎಲ್ಲಾರು ಕೂಡಿ ಎಲ್ಲರೆ ಹೋಗಿ ಉಂಡು ಬರುವ ಯೋಜನೆ ಒಂದು ತಿಂಗಳು ಮೊದಲೇ ಆಗಿರ್ತದ.

ಮಾಮಿ ಯಾಕ ಯಾವಾಗಲೂ ಚಪಾತಿ ವಹಿಸ್ಕೊತಾಳ, ವೈನಿಗೆ ಯಾಕ ಎಳ್ಳುಹೋಳಗಿ ಹೇಳಬೇಕು, ಸೇಂಗಾದ ಹೋಳಿಗಿ ಮಾಡುವ ಕಾಕು, ಮೊಸರನ್ನ ತರುವ ಪುಟ್ಟಕ್ಕ, ಚಿತ್ರಾನ್ನ ತರುವ ದೊಡ್ಡಕ್ಕ ಹಿಂಗ ಅವರವರ ವಿಶೇಷಗಳನ್ನು ಅವರವರೇ ವಹಿಸಿಕೊಂಡಿರ್ತಾರ. ಅದಾದ ಮ್ಯಾಲೆ ಪ್ರತಿಯೊಂದಕ್ಕೂ ಹೆಸರಿಡೂದು, ಉಣ್ಣೂಮುಂದ ಯಾವುದು ಹೆಚ್ಚು ಖರ್ಚಾತು ಅಂತ ಕಾಡಿಯಾಡೂದು ಎಲ್ಲ ಇದ್ದದ್ದೇ. ಹಿಂಗ ಎಲ್ಲಾರೂ ಕೂಡೂದ್ರಿಂದಲೇ ಸಂಕ್ರಾಂತಿ ತಾಟಿನಾಗ ಅದೆಷ್ಟು ಖಾದ್ಯಗಳು..

ಖಟಿ ಜೋಳದ ರೊಟ್ಟಿ, ಎಳ್ಳೂ ಹಚ್ಚಿದ ಸಜ್ಜಿ ರೊಟ್ಟಿ, ದಪಾಟಿ, ಚಪಾತಿ, ಸೇಂಗಾ ಮತ್ತು ಎಳ್ಳು ಹೋಳಗಿ, ಮೊಳಕಿ ಕಾಳಿನ ಪಲ್ಯೆ, ಹಿಟ್ಟಿನ ಪಲ್ಯೆ(ಝುಣಕದ ಒಡಿ), ಎಣ್ಣಿಗಾಯಿ (ಹೀರಿಕಾಯಿ, ಬದನಿಕಾಯಿ, ತೊಂಡಿ ಕಾಯಿ), ಭರ್ತ (ಹಸಿಕಾಳು, ಸೊಪ್ಪು, ಗಡ್ಡೆ, ತರಕಾರಿಗಳನ್ನು ಬೇಯಿಸಿ ಮಾಡುವ ಖಾದ್ಯ), ಬಜ್ಜಿ, ಹೆಸರು ಬ್ಯಾಳಿ, ಕಡ್ಲಿಬ್ಯಾಳಿ ಕೋಸಂಬ್ರಿ. ಇಷ್ಟು ಸಾಲದು ಅಂತ ಪಚಡಿ ಬ್ಯಾರೆ. ಮೂಲಂಗಿ, ಮೂಲಂಗಿ ಸೊಪ್ಪನ್ನು ಸಣ್ಣಗೆ ಕೊಚ್ಚಿ, ಸೌತಿಕಾಯಿ ಹೆಚ್ಚಿ, ಉಳ್ಳಾಗಡ್ಡಿ ಹೆಚ್ಚಿ, ಕಲಸೂದು. ಮ್ಯಾಲೆ ಬೇಕಿದ್ದೋರಿಗೆ ಬಿಸಿ ಕಾದೆಣ್ಣಿ, ಅದಕ್ಕ ಗುರೆಳ್ಳು ಇಲ್ಲಾ ಅಗಸಿ ಹಿಂಡಿ ಹಾಕಿ ಕಲಿಸಿ, ಮ್ಯಾಲೆ ಒಂದಿಷ್ಟು ಹುರದಿಟ್ಟ ಸೇಂಗಾ ಹಾಕಿದ್ರ... ಆ ಪಚಡಿಗೆ ಮತ್ತೇನೂ ಬ್ಯಾಡನಿಸ್ತದ. ಹೊಲಕ್ಕ ಹೋಗಿ ಉಣ್ಣೋರು ಅಲ್ಲೇ ಸಿಗುವ ಹಕ್ಕರಕಿನೂ ಕಲಸ್ತಾರ.

ಇಷ್ಟಾದ್ರ ಮುಗಿಯೂದಿಲ್ಲ.. ಮುಗಿದೀತರೆ ಹೆಂಗ.. ಚಿತ್ರಾನ್ನ, ಮೊಸರನ್ನ, ಬಿಳಿಯನ್ನ ತುಪ್ಪ, ತೊವ್ವಿ, ಉಪ್ಪಿನಕಾಯಿ, ಜೊತಿಗೆ ಮಿರ್ಚಿ, ಉಳ್ಳಾಗಡ್ಡಿ ಭಜಿ, ಹಪ್ಪಳ, ಸಂಡಗಿ, ಮೆಂತ್ಯ ಮೆಣಸಿನಕಾಯಿ..

ಒಟ್ನಾಗ ಆ ತಾಟಿನಾಗ, ಹುರದಿದ್ದು, ಕರದಿದ್ದು, ಬೆಂದಿದ್ದು, ಬೇಯಿಸಿದ್ದು, ತೋಟದಿಂದ, ಮಡಕೆಯಿಂದ, ಭೂಮಿಯಾಳದಿಂದ, ಬಳ್ಳಿಯಿಂದ, ಗಿಡದಿಂದ, ಮರದಿಂದ, ತೆನಿಯಿಂದ ಹಿಂಗ ವಸುಂಧರೆಯ ಸಮಸ್ತ ತಿನಿಸೂ ಆ ತಾಟಿನೊಳಗ ಇರ್ತದ. ಸಾಕ್ಷಾತ್ ಅನ್ನ ಬ್ರಹ್ಮ ಅನಿಸುವ ಊಟ ಅದು. ಇದಿಷ್ಟೂ ಉಂಡು, ಬೀಡಾ ಹಾಕ್ಕೊಂಡ್ರ ಮಧ್ಯಾಹ್ನದ ಸಂಭ್ರಮ ಮುಗೀತದ. ಸಂಜೀ ಚಾ ಕುಡದ ಮ್ಯಾಲೆ ಆ ಕಣ್ಣಿಗೆ ಒತ್ತಿದ ಕಾಡಗಿಯಷ್ಟೆ ಕಡುಕತ್ತಲೆ ಇಣುಕುವ ಮುಂದ, ಮಕ್ಕಳ ಅಲಂಕಾರದ ಕಲರವ ಶುರು. ಐದು ವರ್ಷಗಳ ಒಳಗಿನ ಮಕ್ಕಳು ಮನ್ಯಾಗಿದ್ರಂತೂ ಹಬ್ಬದ ಸಂಭ್ರಮ ಸರಭರ ಸರಭರ ಅಂತದ.

ಅವರಿಗೆ ಹಣ್ಣೆರಿಬೇಕಲ್ಲ. ಕರಿಯೆರಿಯೂದಂದ್ರ ಚುರುಮುರಿಯೊಳಗ ಸುಲಗಾಯಿ, ಗಜ್ಜರಿ, ಕಬ್ಬು, ಚಾಕ್ಲೆಟು, ಮುತ್ತು ಹವಳ, ಬೆಂಡು, ಬತ್ತಾಸು ಎಲ್ಲಾನೂ ಸಣ್ಣ ಚೂರು ಮಾಡಿ ಒಂದು ಸೇರಿನಾಗ ತುಂಬ್ತಾರ. ಸೋದರ ಮಾವ ಅಥವಾ ಸೋದರ ಅತ್ತಿ ಇವರಿಬ್ಬರೊಳಗ ಯಾರಿದ್ದರೂ ನಡೀತದ. ಇಬ್ಬರೂ ಇದ್ರಂತೂ ಅಗ್ದಿ ಪುಣ್ಯದ ಗಳಿಗೆಯದು. ಮುತ್ತಿನುಂಗುರ ಹಾಕ್ಕೊಂಡು, ಹಿಂಗ ಕರಿಯೆರದ್ರ, ಬದುಕಿನಾಗ ಬರುವ ಎಲ್ಲ ಪೀಡೆಗಳೂ ಸಂಕಷ್ಟ ಪರಿಹಾರ ಆಗ್ತಾವ ಅನ್ನೂದು ನಂಬಿಕಿ.

ತಲಿಮ್ಯಾಲೆ ಇವಿಷ್ಟು ಸುರಿಯೂತನಕಾನೂ ಚುಚ್ಚುವ ಕರಿಕಂಬಳಿ ಮ್ಯಾಲೆ ಕೂಡೂದೆ ಸವಾಲಿನ ಕೆಲಸ. ಹೆಣ್ಮಕ್ಕಳು ಬಂದು ಆರತಿ ಎತ್ತಿ ಹಣ್ಣೆರದ ಮ್ಯಾಲೆ ಅವರಿಗೆ ಅರಿಷಿಣ ಕುಂಕುಮ ಮತ್ತು ಬಾಗಿಣ ಕೊಡಬೇಕು. ಸಣ್ಣದೊಂದು ಕವರಿನಾಗ, ಪುಟ್ಟ ಬಾಚಣಕಿ, ಕನ್ನಡಿ, ಕುಂಕುಮ, ಬಳಿ, ಕಾಲುಂಗುರ ಇರುವುದರ ಜೊತಿಗೆ ಸಂಕ್ರಾಂತಿ ಆದೇಶಿಸಿದ ವಸ್ತುವನ್ನೂ ಇಟ್ಟು ಕೊಡ್ತಾರ.

ಅಲ್ಲಿಗೆ ಸಂಕ್ರಾಂತಿ ಮುಗೀತದ. ಮನ್ಯಾಗ ಅಲ್ಲಲ್ಲೆ ಬಿದ್ದ ಎಳ್ಳಿನ ಮೊನೆ ಅಂಗಾಲಿಗೆ ಚುಚ್ಚಿದ್ರೂ ಬಾಯಿಗೆ ಬಿದ್ದ ಎಳ್ಳಿನ ಸವಿ ಭಾಳದಿನ ನೆನಪಿರ್ತದ. ಬದುಕಿನ ಸಿಹಿ ಸವಿಯೂದ್ರೊಳಗ ಕಷ್ಟಗಳು ಎಳ್ಳಿನ ಮೊನೆಯಷ್ಟಾಗಲಿ ಅನ್ನುವ ಆಶಯ ಇದರ ಹಿಂದದ ಅಂತ ಅನ್ಕೊಂಡ್ರ.. ಸಂಕ್ರಮಣ ಬದುಕಿನ ತುಂಬ ಸಿಹಿಯನ್ನೇ ಹಂಚ್ತದ.

ಮತ್ತ ಎಳ್ಳುಬೆಲ್ಲ ತಿಂದು ಒಳ್ಳೊಳ್ಳೆ ಮಾತಾಡೂನು, ಬೆಲ್ಲದ್ದಂಗ ಮಾತಾಡೂನು ಅಂತ್ಹೇಳ್ತೀವಿ.. ಅವು ಮಾತಾಗೂದಿಲ್ಲ, ನಡಿಯಾಗ್ತದ. ಹಂಗಾಗಲಿ ಅನ್ನುವ ಆಶಯದೊಂದಿಗೆ...

ಚಿತ್ರಗಳು: ತಾಜುದ್ದೀನ್ ಆಜಾದ್



ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3qpfL70

ಮಧುಮೇಹಿಗಳಿಗೆ ಮಕ್ಕಳಾಗುವುದಿಲ್ಲವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

● ನನಗೆ 36 ವರ್ಷ. 5 ವರ್ಷದ ಮಗಳಿದ್ದಾಳೆ. ನನಗೂ ನನ್ನ ಪತಿಗೂ ಮತ್ತೊಂದು ಮಗು ಬೇಕೆನಿಸಿದೆ. ಆದರೆ ಈಗ ಶುಗರ್ ಬಂದಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಮಧುಮೇಹವಿದ್ದರೆ ಮಗು ಮಾಡಿಕೊಳ್ಳಲು ತೊಂದರೆಯೇ ?

ವಿದ್ಯಾ, ತುಮಕೂರು

ನಿಮಗೆ ಈಗ ಮಧುಮೇಹ ಆರಂಭವಾಗಿದ್ದರೆ ಅದು ಟೈಪ್-2 ಮಧುಮೇಹ ಇರಬಹುದು. ಅದಕ್ಕೆ ನೀವು ಈಗಾಗಲೇ ತಜ್ಞವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರೆ ಅದನ್ನ ಮುಂದುವರೆಸಿ. ಮಧುಮೇಹ ನಿಯಂತ್ರಣದಲ್ಲಿಡುವಾಗ ಔಷಧದ ಜೊತೆಗೆ ಆಹಾರ ಮತ್ತು ವ್ಯಾಯಾಮವೂ ಕೂಡಾ ಬಹಳ ಮುಖ್ಯವಾಗುತ್ತದೆ. ನೀವು ನೆನಪಿಡಬೇಕಾದ ಮುಖ್ಯ ಸಂಗತಿ ಏನೆಂದರೆ ಮಧುಮೇಹ ನಿಯಂತ್ರಣದಲ್ಲಿದ್ದರೆ, ನೀವು ಆರೋಗ್ಯವಂತ ಮಗುವನ್ನು ಪಡೆಯಬಹುದು. ಗರ್ಭಧಾರಣೆಗೆ 6 ವಾರಗಳ ಮೊದಲೇ ದಿನಾಲೂ 5ಮಿಲಿಗ್ರಾಂ ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ತೆಗೆದುಕೊಳ್ಳಲು ಮರೆಯಬೇಡಿ. ತೂಕ ಹೆಚ್ಚಿದ್ದರೆ ಕಡಿಮೆ ಮಾಡಿಕೊಂಡು ಸಮತೂಕ ಹೊಂದಲು ಪ್ರಯತ್ನಿಸಿ. ಮಧುಮೇಹ ನಿಯಂತ್ರಣದಲ್ಲಿ ಇಲ್ಲದಿದ್ದಾಗ ಮಾತ್ರ ನಿಮಗೂ ಹುಟ್ಟುವ ಮಗುವಿಗೆ ತೊಂದರೆ ಆಗಬಹುದು. ಆದ್ದರಿಂದ ಯಾವಾಗಲೂ ರಕ್ತದಲ್ಲಿ ಸಕ್ಕರೆ ಮಟ್ಟ ಕಾಪಾಡಿಕೊಳ್ಳಲು ಪ್ರಯತ್ನಿಸಿ ತಜ್ಞರ ಸಹಾಯ ಪಡೆದುಕೊಳ್ಳಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.


ಮಕ್ಕಳಿಗೆ ಕೋವಿಡ್ ಲಸಿಕೆ: ಡಾಕ್ಟರ್ ಹೀಗಂತಾರೆ...

ಮಕ್ಕಳಿಗೆ ಕೋವಿಡ್ ಲಸಿಕೆ ಅಗತ್ಯವೇ? ಈ ಲಸಿಕೆ ಪರಿಣಾಮಕಾರಿಯೇ? ಯಾರು ಲಸಿಕೆ ಪಡೆಯಬಹುದು ? ಮುನ್ನೆಚ್ಚರಿಕಾ ಕ್ರಮಗಳೇನು ಎಂಬ ಹಲವು ಪ್ರಶ್ನೆಗಳಿಗೆ ಇತ್ತೀಚೆಗೆ 'ಪ್ರಜಾವಾಣಿ' ನಡೆಸಿದ 'ಡಾಕ್ಟರ್ಸ್ ಲೈವ್' ಕಾರ್ಯಕ್ರಮದಲ್ಲಿ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಪ್ರೀತ್ ಶೆಟ್ಟಿ ಉತ್ತರಿಸಿದ್ದಾರೆ. ಅವರೊಂದಿಗೆ ನಡೆಸಿದ ಮಾತುಕತೆಯ ಸಂಕ್ಷಿಪ್ತ ವಿವರ ಇಲ್ಲಿದೆ.

ದೇಶದಲ್ಲಿ ಕೋವಿಡ್ ಮೂರನೇ ಅಲೆ ಪ್ರಾರಂಭವಾಗುತ್ತಿದೆ. ಈಗಾಗಲೇ ದೊಡ್ಡವರಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ಮಕ್ಕಳನ್ನು ಸೋಂಕಿನಿಂದ ರಕ್ಷಿಸುವ ಸಲುವಾಗಿ ಭಾರತ ಸೇರಿದಂತೆ ಕೆಲವು ದೇಶಗಳಲ್ಲಿ ಮಕ್ಕಳಿಗೆ ಲಸಿಕೆ ಹಾಕುವ ಅಭಿಯಾನ ಆರಂಭವಾಗಿದೆ. ಭಾರತದಾದ್ಯಂತ 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಕೋವಾಕ್ಸಿನ್ ಲಸಿಕೆ ನೀಡಲಾಗುತ್ತಿದೆ. ಲಸಿಕೆ ಹಾಕುವ ಕಾರ್ಯಕ್ರಮ ವೇಗವಾಗಿ ಸಾಗುತ್ತಿದ್ದು, ರಾಜ್ಯದಲ್ಲಿ ಈಗಾಗಲೇ ಶೇ 50ರಷ್ಟು ಮಕ್ಕಳು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ.

ಮಕ್ಕಳಿಗೆ ಲಸಿಕೆ ಏಕೆ?

'ಕೋವಿಡ್-19' ಸಾಂಕ್ರಾಮಿಕ ಕಾಯಿಲೆ. ಇದರ ಸೋಂಕು ವೇಗವಾಗಿ ಹರಡುವ ಮೂಲಕ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಮಕ್ಕಳು ಹೊರಗಡೆ ಓಡಾಡಿ ಬರುವುದರಿಂದ ಮನೆಯಲ್ಲಿರುವ ಹಿರಿಯರಿಗೆ ಸೋಂಕು ಹಬ್ಬುವ ಸಾಧ್ಯತೆ ಇರುತ್ತದೆ. ಆದ್ದರಿಂದ ಲಸಿಕೆ ಪಡೆಯುವುದು ಅವಶ್ಯಕ. ಚಳಿಗಾಲದಲ್ಲಿ ಮಕ್ಕಳಲ್ಲಿ ವೈರಲ್ ಜ್ವರ, ಶೀತ ಜ್ವರ, ನೆಗಡಿ, ಕೆಮ್ಮು ಹರಡುವುದು ಸಾಮಾನ್ಯ. ಈ ಆರೋಗ್ಯ ಸಮಸ್ಯೆ ಇದ್ದ ಮಕ್ಕಳು, ಗುಣಮುಖರಾದ ನಂತರ ಕೋವಿಡ್ ಲಸಿಕೆ ಪಡೆಯಬಹುದು. ಲಸಿಕೆ ಪಡೆಯುವುದರಿಂದ ಆರೋಗ್ಯದಲ್ಲಿ ಯಾವುದೇ ತೊಂದರೆಯಾಗುವುದಿಲ್ಲ. ಸಾಮಾನ್ಯವಾಗಿ ಯಾವುದೇ ವೈರಲ್ ಕಾಯಿಲೆ ಏಳು ದಿನಗಳಲ್ಲಿ ಕಡಿಮೆಯಾಗುತ್ತದೆ.



ಲಸಿಕೆ ಬಗ್ಗೆ ಭಯ ಬೇಡ

ಲಸಿಕೆ ಪಡೆದಾಗ ಜ್ವರ, ಶೀತ, ಕೈ- ಕಾಲು ನೋವು, ತಲೆ ನೋವು ಬರುವುದು ಸಾಮಾನ್ಯ. ಇದು ಒಂದೆರಡು ದಿನಗಳಲ್ಲಿ ಕಡಿಮೆಯಾಗುತ್ತದೆ. ಈ ಬಗ್ಗೆ ಭಯ ಬೇಡ.

ಲಸಿಕೆ ಪಡೆದ ಮೇಲೆ ಇಂಜೆಕ್ಷನ್ ಚುಚ್ಚಿದ ಜಾಗದಲ್ಲಿ ಹೆಚ್ಚು ನೋವು ಕಾಣಿಸಿಕೊಂಡರೆ, ಊತ ಬಂದರೆ ಮಾತ್ರ ಪ್ಯಾರಾಸಿಟಮಾಲ್ ನೀಡಬಹುದು. ಸಣ್ಣ ಪ್ರಮಾಣದ ನೋವಿದ್ದರೆ ಬಿಸಿ ನೀರಿನ ಶಾಖ ತೆಗೆದುಕೊಂಡರೆ ಸಾಕಾಗುತ್ತದೆ. ಆಗ ಪ್ಯಾರಾಸಿಟಮಾಲ್ ಮಾತ್ರೆ ಪಡೆಯುವ ಅಗತ್ಯವೂ ಇರುವುದಿಲ್ಲ.



ಡಾಕ್ಟರ್ಸ್ ಲೈವ್

ಹೆಣ್ಣುಮಕ್ಕಳು ಮುಟ್ಟಿನ (menstruation) ಸಮಯದಲ್ಲಿ ಲಸಿಕೆ ತೆಗೆದುಕೊಂಡರೆ ಯಾವುದೇ ತೊಂದರೆ ಆಗುವುದಿಲ್ಲ. ಈವರೆಗೂ ಯಾವುದೇ ಅಡ್ಡಪರಿಣಾಮಗಳು ಕಂಡುಬಂದಿಲ್ಲ. ಹಾಗಾಗಿ, ಆರೋಗ್ಯ ಸಚಿವಾಲಯ ರೂಪಿಸಿರುವ ಮಾರ್ಗಸೂಚಿಗಳನ್ನು ಸಾರ್ವಜನಿಕರು ತಪ್ಪದೆ ಪಾಲಿಸಬೇಕು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3qoKTUk

ಮುನ್ನೆಚ್ಚರಿಕಾ ಕ್ರಮಗಳು

ಮಕ್ಕಳಿಗೆ ಶಾಲೆಗಳಲ್ಲಿ ಸೋಂಕು ಹರಡುವಿಕೆ ಪ್ರಮಾಣ ಕಡಿಮೆ. ಮನೆಯಲ್ಲಿರುವ ಪೋಷಕರು ಮತ್ತು ಹೊರಗಡೆಯಿಂದ ಬರುವವರಿಂದ ಸೋಂಕು ಹರಡುವ ಸಾಧ್ಯತೆ ಹೆಚ್ಚಿದೆ. ಒಂದು ವೇಳೆ ಪೋಷಕರು ಸೋಂಕಿಗೆ ಒಳಗಾಗಿದ್ದರೆ ಪ್ರತ್ಯೇಕವಾಸದಲ್ಲಿರುವುದು ಸೂಕ್ತ. ಮಕ್ಕಳ ಜೊತೆ ಇರುವ ಸಮಯದಲ್ಲಿ ಪೋಷಕರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಜತೆಗೆ ಮಕ್ಕಳು ಗುಂಪುಗೂಡಿ ಆಟವಾಡುವ ಸಮಯದಲ್ಲಿ ತಪ್ಪದೆ ಮಾಸ್ಕ್ ಧರಿಸಬೇಕು. ಆಗಾಗ್ಗೆ ಸಾಬೂನಿನಿಂದ ಕೈತೊಳೆಯುವುದನ್ನು ಅಭ್ಯಾಸ ಮಾಡಿಸಬೇಕು. ಪದೇ ಪದೇ ಕಣ್ಣು, ಮೂಗು, ಬಾಯಿ ಮುಟ್ಟಿಕೊಳ್ಳದಂತೆ ಅವರಿಗೆ ಅರಿವು ಮೂಡಿಸಬೇಕು.

ನಿರೂಪಣೆ: ದೀಪಕ್ ಗೌಡ

ಕಾಡಾನೆ ದಾಳಿ: ಯುವಕ ಸಾವು

ಸಿದ್ದಾಪುರ (ಕೊಡಗು): ಇಲ್ಲಿನ ಅರೆ ಕಾಡು ರಸ್ತೆಯಲ್ಲಿ ಶುಕ್ರವಾರ ಕಾಡಾನೆ ದಾಳಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದ ನೆಲ್ಯಹುದಿಕೇರಿ ಗ್ರಾಮದ ಆಶಿಕ್ (19) ಜಿಲ್ಲಾಸ್ಪತ್ರೆಯ ಮಾರ್ಗ ಮಧ್ಯೆ ಮೃತಪಟ್ಟರು. ಅವರ ಸ್ನೇಹಿತ ಅಸ್ಮಲ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ.

ಜ.18ರಿಂದ 25ರವರೆಗೆ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ
ಕೌನ್ಸೆಲಿಂಗ್ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಯ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಶುಕ್ರವಾರ ಪ್ರಕಟಿಸಲಾಗಿದೆ.

ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು, ದೈಹಿಕ ಶಿಕ್ಷಕರು, ವಿಶೇಷ ಶಿಕ್ಷಕರ ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಯ ಕೌನ್ಸೆಲಿಂಗ್ ಜ.18ರಿಂದ 25ರವರೆಗೆ ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಶಿಕ್ಷಕರ ಸದನದಲ್ಲಿ ನಡೆಯಲಿದೆ.

ಅಂತಿಮ ಆದ್ಯತಾ ಕೌನ್ಸೆಲಿಂಗ್ ಪಟ್ಟಿಯಲ್ಲಿರುವ ಶಿಕ್ಷಕರು, ನಿಗದಿತ ದಿನಾಂಕ ಹಾಗೂ ಸಮಯಕ್ಕೆ ಮೂಲ ಅರ್ಜಿ ಹಾಗೂ ಕೋರಿಕೆಯ ಆದ್ಯತೆಯ ದಾಖಲೆಗಳೊಂದಿಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಬೇಕು ಎಂದು ಶಿಕ್ಷಣ ಇಲಾಖೆ ಆಯುಕ್ತ ಡಾ. ಆರ್. ವಿಶಾಲ್ ತಿಳಿಸಿದ್ದಾರೆ.

2020ರ ನವೆಂಬರ್ 11ರಂದು ಹೊರಡಿಸಿದ ಅಧಿಸೂಚನೆ ಅನುಸಾರ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಅಂತರ್ ಘಟಕ ವಿಭಾಗ ವ್ಯಾಪ್ತಿಯ ವರ್ಗಾವಣೆ ಕೌನ್ಸೆಲಿಂಗ್ ಇದಾಗಿದೆ.

ಅಂತರ್ ಘಟಕ ವಿಭಾಗದ ಹೊರಗಿನ ಕೋರಿಕೆಯ ಕೌನ್ಸೆಲಿಂಗ್ ಜ.18ರಿಂದ 24ರವರೆಗೆ ಮತ್ತು ಅಂತರ್ ಘಟಕ ವಿಭಾಗದ ಹೊರಗಿನ ಪರಸ್ಪರ ವರ್ಗಾವಣೆಯನ್ನು ಜ.25ರಂದು ನಡೆಯಲಿದೆ.

ಶಿಕ್ಷಕರು ತಮ್ಮ ಭಾವಚಿತ್ರ ಇರುವ ಗುರುತಿನ ಚೀಟಿ ಹಾಗೂ ದಾಖಲಾತಿಗಳೊಂದಿಗೆ ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

‘ಶೇ 40 ಕಮಿಷನ್: ದಾಖಲೆ ಬಿಡುಗಡೆ ಮಾಡಿದರೆ ಸರ್ಕಾರ ಪತನ’

ಒಂದನೇ ಪುಟದಿಂದ...

‘ರಾಜ್ಯದಲ್ಲಿ ಗುತ್ತಿಗೆದಾರರಿಗೆ ಆಗುತ್ತಿರುವ ಅನ್ಯಾಯ ಮತ್ತು ಭ್ರಷ್ಟಾಚಾರದ ಬಗ್ಗೆ ಪ್ರಧಾನಿಗೆ ಪತ್ರ ಬರೆಯಲಾಗಿದೆ. ಮಾರ್ಚ್ 10ರ ನಂತರ ಸಮಯಾವಕಾಶ ದೊರೆತರೆ ಅವರನ್ನು ಭೇಟಿಯಾಗುವ ಸಾಧ್ಯತೆ ಇದೆ. ರಾಜ್ಯದ ಗುತ್ತಿಗೆದಾರರು ಮುಖ್ಯಮಂತ್ರಿಗೆ ಪತ್ರ ಚಳವಳಿ ಹಮ್ಮಿಕೊಳ್ಳಲಿದ್ದಾರೆ. ಮುಖ್ಯಮಂತ್ರಿಯವರ ಭೇಟಿಗಾಗಿ ಹಲವು ಸಲ ಮನವಿ ಸಲ್ಲಿಸಿದರೂ ಅವರು ಅನುಮತಿ ನೀಡಿಲ್ಲ. ನಮ್ಮ ಎಲ್ಲ ಸಮಸ್ಯೆಗಳ ಕಡೆ ಗಮನಹರಿಸಿ ಮಾತುಕತೆಗೆ ಕರೆಯಬೇಕು. ಇಲ್ಲದಿದ್ದರೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಗುವುದು’ ಎಂದು ಕೆಂಪಣ್ಣ ಎಚ್ಚರಿಸಿದರು.

‘ರಾಜ್ಯದಲ್ಲಿ 17 ಸಾವಿರ ಗುತ್ತಿಗೆದಾರರಿದ್ದಾರೆ. ಅದರಲ್ಲಿ ಕೇವಲ 296 ಜನ ಹೊರ ರಾಜ್ಯದ ಗುತ್ತಿಗೆದಾರರಿದ್ದು, ಶೇ 90 ರಷ್ಟು ಕೆಲಸಗಳನ್ನು ಅವರೇ ನಿರ್ವಹಿಸುತ್ತಿದ್ದಾರೆ. ಹಲವು ಕಾಮಗಾರಿ ಒಂದುಗೂಡಿಸುವ ಪ್ಯಾಕೇಜ್ ಪದ್ಧತಿ ತೆಗೆದು ಹಾಕಬೇಕು. ಇದರಿಂದ ಆಯಾ ಪ್ರದೇಶದ ಗುತ್ತಿಗೆದಾರರಿಗೆ ತೊಂದರೆಯಾಗುತ್ತಿದೆ. ಬೇರೆ ಯಾವ ರಾಜ್ಯದಲ್ಲೂ ಇಲ್ಲದ ಪ್ಯಾಕೇಜ್ ಪದ್ಧತಿ ನಮ್ಮ ರಾಜ್ಯದಲ್ಲಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಕೆಆರ್‌ಐಡಿಎಲ್ ಅಡಿ ವಿವಿಧ ಕಾಮಗಾರಿಗಳಿಗಾಗಿ ₹25 ಸಾವಿರ ಕೋಟಿ ಅನುದಾನ ಬಿಡುಗಡೆಯಾಗಿದೆ. ಆದರೆ, ಇದರಲ್ಲಿ ಶೇ 25 ರಷ್ಟೂ ಕೆಲಸವಾಗಿಲ್ಲ. ಗುಣಮಟ್ಟ ಪರೀಕ್ಷೆ ಮಾಡುವವರೇ ಇಲ್ಲ. ಸುಳ್ಳು ದಾಖಲೆ ಪಡೆದು ಟೆಂಡರ್ ನೀಡುವ ಕೆಲಸ ಮಾಡುತ್ತಿದ್ದಾರೆ. ನಿರ್ಮಿತಿ ಕೇಂದ್ರದವರಿಗೆ ಯಾಕೆ ಕೆಲಸ ಕೊಡ್ತಾರೆ? ಅಧಿಕಾರಿಗಳೊಂದಿಗೆ ಕೈಜೋಡಿಸಿ ನಕಲಿ ದಾಖಲೆ ನೀಡಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅಧಿಕಾರಿಗಳು ನಮ್ಮ ಸ್ಥಳೀಯ ಗುತ್ತಿಗೆದಾರರ ಪ್ರತಿಯೊಂದು ಕೆಲಸವನ್ನು ಪರಿಶೀಲಿಸುತ್ತಾರೆ. ಅರ್ಧಂಬರ್ಧ ಕೆಲಸ ಮಾಡಿ ಓಡಿ ಹೋಗಿರುವವರ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ’ ಎಂದು ಪ್ರಶ್ನಿಸಿದರು.

‘ದೊಡ್ಡ ಖಾತೆ ಬೇಕೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲವು ಸಚಿವರು ಎರಡು–ಮೂರು ಖಾತೆಗೆ ಬೇಡಿಕೆ ಇಟ್ಟಿದ್ದಾರೆ. ಕೆಲವರು ನಿರ್ದಿಷ್ಟ ಖಾತೆಗೆ ಪಟ್ಟು ಹಿಡಿದಿದ್ದಾರೆ. ವ್ಯಾಪಾರಕ್ಕಾಗಿ ದೊಡ್ಡ ಸಚಿವ ಸ್ಥಾನ ಬೇಕಾ’ ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಪ್ರಶ್ನಿಸಿದರು.


ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಸಚಿವ ಸ್ಥಾನ ನೀಡುವುದು ಗೌರವಕ್ಕಾಗಿ. ದೊಡ್ಡ ಖಾತೆಯೇ ಏಕೆ ಬೇಕು? ಕೆಲವು ಸಚಿವರು ಬಹಳ ಉದ್ಧಟತನ ಮಾಡುತ್ತಿದ್ದಾರೆ. ಅಂತಹವರಿಂದ ಸರ್ಕಾರದ ವರ್ಚಸ್ಸಿಗೆ ಹಾನಿಯಾಗುತ್ತಿದೆ’ ಎಂದು ತಮ್ಮದೇ ಪಕ್ಷದ ಸರ್ಕಾರದ ಸಚಿವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

‘ಪಕ್ಷಕ್ಕಾಗಿ ಹಮಾಲಿ ಕೆಲಸ ಮಾಡಿದವರು ನಾವು. ನಮ್ಮ ಪೂರ್ವಜರು ತೆಂಗಿನಗಿಡ ನೆಟ್ಟಿದ್ದರು. ಬೇರೆಯವರು ಈಗ ಎಳನೀರು ಕುಡಿಯುತ್ತಿದ್ದಾರೆ. ಪಕ್ಷ ಅಧಿಕಾರಕ್ಕೆ ಬರಬೇಕು ಎಂದು ಸಂಘಟನೆಯಿಂದ ಕೆಲಸ ಮಾಡಲಾಗಿತ್ತು. ಆದರೆ, ಈಗ ಬೇರೆಯವರು ಅಧಿಕಾರ ಅನುಭವಿಸುತ್ತಿದ್ದಾರೆ’ ಎಂದರು.

ಬಿಜೆಪಿಯ ಕೆಲವು ಶಾಸಕರು ಸಭೆ ನಡೆಸಿರುವ ಕುರಿತು ಪ್ರತಿಕ್ರಿಯಿಸಿದ ರೇಣುಕಾಚಾರ್ಯ, ‘ಸಮಾನ ಮನಸ್ಕ ಶಾಸಕರು ಸೇರಿದ್ದೆವು. ನನ್ನ ನೇತೃತ್ವದಲ್ಲಿ ಸಭೆ ನಡೆದಿದೆ ಎಂದೇನೂ ಇಲ್ಲ. ಪಕ್ಷ ಮತ್ತು ಮುಖ್ಯಮಂತ್ರಿಯವರಿಗೆ ಮುಜುಗರ ಆಗಬಾರದು ಎಂಬ ಭಾವನೆ ಹೊಂದಿರುವ ಶಾಸಕರು ಸೇರಿ ಚರ್ಚಿಸಿದ್ದೇವೆ’ ಎಂದು ಹೇಳಿದರು.

ಸಂಪುಟ ಬದಲಾಗಲಿದೆ: ‘ರಾಜ್ಯ ರಾಜಕೀಯದಲ್ಲಿ ಬದಲಾವಣೆ ಆಗಲಿದೆ’ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ಕುರಿತು ಕೇಳಿದಾಗ, ‘ಮುಖ್ಯಮಂತ್ರಿಯವರ ಹೊರತಾಗಿ ಉಳಿದ ಎಲ್ಲ ಸಚಿವರ ಬದಲಾವಣೆಯೂ ನಿಶ್ಚಿತ. ಅದೇ ಮುಖಗಳನ್ನು ಜನರು ಎಷ್ಟು ಬಾರಿ ನೋಡುತ್ತಾರೆ. ಗುಜರಾತ್ ಮಾದರಿಯಲ್ಲಿ ಬದಲಾವಣೆ ಆಗಲಿ’ ಎಂದು ಹೇಳಿದರು.

‘ಕೊಠಡಿ, ಕುರ್ಚಿಗೆ ಸೀಮಿತ’



‘ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹುದ್ದೆಯಲ್ಲಿ ಕೊಠಡಿ ಮತ್ತು ಕುರ್ಚಿ ಬಿಟ್ಟರೆ ಏನೂ ಇಲ್ಲ. ಹೋದ ಪುಟ್ಟ, ಬಂದಾ ಪುಟ್ಟ ಎಂಬಂತಾಗಿದೆ ಈ ಹುದ್ದೆ ಸ್ಥಿತಿ. ನನಗೆ ಈ ಹುದ್ದೆ ಇದ್ದರೂ, ಇಲ್ಲದಿದ್ದರೂ ಒಂದೇ’ ಎಂದು ಎಂ.ಪಿ. ರೇಣುಕಾಚಾರ್ಯ ಅಸಮಾಧಾನ ಹೊರಹಾಕಿದರು.

‘ಸೊಸೆಯ ಆಭರಣ ವಶದಲ್ಲಿಟ್ಟುಕೊಂಡಿರುವುದು ಹಿಂಸೆಯಾಗದು’

ನವದೆಹಲಿ (ಪಿಟಿಐ): ‘ಸೊಸೆಯ ಚಿನ್ನಾಭರಣಗಳನ್ನು ಪತಿಯ ಪೋಷಕರು ತನ್ನ ವಶದಲ್ಲಿ ಇಟ್ಟುಕೊಂಡಿದ್ದಲ್ಲಿ ಅದನ್ನು ಐಪಿಸಿ ಸೆಕ್ಷನ್ 498ಎ ಅನ್ವಯ ಹಿಂಸೆ ಎಂದು ಹೇಳಲಾಗದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಜೆ.ಕೆ.ಮಹೇಶ್ವರಿ ಅವರಿದ್ದ ಪೀಠವು, ಪಂಜಾಬ್‌ನ ವ್ಯಕ್ತಿಯೊಬ್ಬರ ಅರ್ಜಿಯ ವಿಚಾರಣೆಯ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದೆ.



ಸೆಕ್ಷನ್ 498ಎ ಪ್ರಕಾರ, ಪತಿ ಅಥವಾ ಪತಿಯ ಸಂಬಂಧಿಕರು ನೀಡುವುದು ಕಿರುಕುಳ. ಈ ಕುರಿತು ಬಾಧಿತ ಮಹಿಳೆಯು ನೀಡುವ ದೂರು ಈ ಸೆಕ್ಷನ್‌ನ ವ್ಯಾಪ್ತಿಗೆ ಬರಲಿದೆ ಎಂದು ಹೇಳಿದೆ.

‘ಅರ್ಜಿದಾರರು (ಸೊಸೆ) ಅತ್ತೆ ಮತ್ತು ಮೈದುನ ಚಿನ್ನಾಭರಣಗಳನ್ನು ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದ್ದು, ಆಭರಣಗಳ ವಿವರ ನೀಡಿಲ್ಲ. ಎಲ್ಲರೂ ಸೇರಿ ನನ್ನ ಜೀವನ ಹಾಳುಮಾಡಿದ್ದಾರೆ ಎಂಬ ಸಾಮಾನ್ಯ ಆರೋಪವಷ್ಟೇ ಇದೆ’ ಎಂದೂ ಪೀಠವು ಹೇಳಿತು.

‘ಪತ್ನಿ ಸಂಭಾಷಣೆ ರೆಕಾರ್ಡ್, ಖಾಸಗೀತನಕ್ಕೆ ಧಕ್ಕೆ?’

ನವದೆಹಲಿ: ಪತ್ನಿಯ ದೂರವಾಣಿ ಸಂಭಾಷಣೆಯನ್ನು ಆಕೆಗೆ ತಿಳಿಯದಂತೆಯೇ ರೆಕಾರ್ಡ್ ಮಾಡುವುದು ಆಕೆಯ ಖಾಸಗಿತನದ ಉಲ್ಲಂಘನೆ ಆಗಲಿದೆಯೇ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

2021 ಡಿಸೆಂಬರ್ 12ರಂದು ಪಂಜಾಬ್ –ಹರಿಯಾಣ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಮೇಲ್ಮನವಿ ಆಧರಿಸಿ ನ್ಯಾಯಮೂರ್ತಿಗಳಾದ ವಿನೀತ್ ಸರಣ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ನ್ಯಾಯಪೀಠವು ನೋಟಿಸ್ ಜಾರಿ ಮಾಡಿದೆ. ಪತ್ನಿಗೆ ತಿಳಿಯದಂತೆ ಆಕೆಯ ಸಂಭಾಷಣೆ ರೆಕಾರ್ಡ್ ಮಾಡುವುದು ಆಕೆಯ ಖಾಸಗೀತನದ ಸ್ಪಷ್ಟ ಉಲ್ಲಂಘನೆ ಎಂದು ಹೈಕೋರ್ಟ್ ಅದೇಶಿಸಿತ್ತು.

ವ್ಯಕ್ತಿಯು ಪತ್ನಿಯಿಂದ ವಿಚ್ಛೇದನ ಕೋರಿ 2017ರಲ್ಲಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಆಗ ಇಬ್ಬರ ಸಂಭಾಷಣೆಗಳಿದ್ದ ಸಿ.ಡಿ. ಹಾಜರುಪಡಿಸಿದ್ದು, ಧ್ವನಿ ಮಹಿಳೆಯದೇ ಎಂದು ದೃಢಪಡಿಸಲು ಕೌಟುಂಬಿಕ ನ್ಯಾಯಾಲಯ ಅವಕಾಶ ಕಲ್ಪಿಸಿತ್ತು. ಇದನ್ನು ಪ್ರಶ್ನಿಸಿ ಮಹಿಳೆಯು ಹೈಕೋರ್ಟ್‌ನ ಮೆಟ್ಟಿಲೇರಿದ್ದರು.


‘ಷಡ್ಯಂತ್ರ ಬಯಲಿಗೆ ಎಳೆಯಿರಿ: ಸಿಬಿಐಗೆ ಹೈಕೋರ್ಟ್ ತಾಕೀತು

ರಾಂಚಿ (ಪಿಟಿಐ): ಧನ್‌ಬಾದ್ ನ್ಯಾಯಾಧೀಶರ ಸಾವಿನ ಹಿಂದಿನ ಷಡ್ಯಂತ್ರ ಬಯಲಿಗೆ ಎಳೆಯಬೇಕು ಎಂದು ಜಾರ್ಖಂಡ್ ಹೈಕೋರ್ಟ್ ಶುಕ್ರವಾರ ಸಿಬಿಐಗೆ ತಾಕೀತು ಮಾಡಿದೆ.

ತನಿಖೆಯು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ಈ ಸಾವಿನ ಹಿಂದೆ ದೊಡ್ಡ ಸಂಚು ಇದೆ ಎಂದು ಅಭಿಪ್ರಾಯಪಟ್ಟಿತು.

ಧನ್‌ಬಾದ್‌ನ ನ್ಯಾಯಾಧೀಶರಾದ ಉತ್ತಮ್ ಆನಂದ್ ಅವರು ಕಳೆದ ವರ್ಷ ಜುಲೈ ತಿಂಗಳಲ್ಲಿ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು.

ಮಾಜಿ ಸಚಿವ ಅಲೆಕ್ಸಾಂಡರ್ ನಿಧನ



ಜೆ. ಅಲೆಕ್ಸಾಂಡರ್

ಬೆಂಗಳೂರು: ಕರ್ನಾಟಕದ ಸರ್ಕಾರದ ನಿವೃತ್ತ ಮುಖ್ಯಕಾರ್ಯದರ್ಶಿ ಹಾಗೂ ರಾಜ್ಯದಲ್ಲಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದ ಜೆ. ಅಲೆಕ್ಸಾಂಡರ್ (83) ಅವರು ಬೆಂಗಳೂರಿನಲ್ಲಿ ಶುಕ್ರವಾರ ನಿಧನರಾದರು.

ಶುಕ್ರವಾರ ಸಂಜೆ ಹೃದಯಾಘಾತಕ್ಕೆ ಒಳಗಾದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮಾರ್ಗಮಧ್ಯೆಯೇ ಅವರು ಮೃತಪಟ್ಟರು ಎಂದು ಮೂಲಗಳು ಹೇಳಿವೆ. ಮೃತರು ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಬೆಂಗಳೂರಿನಲ್ಲಿ ನಡೆಯಲಿದೆ.

ಕೇರಳ ರಾಜ್ಯದ ಕೊಲ್ಲಂ ಜಿಲ್ಲೆಯವರಾದ ಅಲೆಕ್ಸಾಂಡರ್, ಕರ್ನಾಟಕ ಶ್ರೇಣಿಯ ಐಎಎಸ್ ಅಧಿಕಾರಿಯಾಗಿ ರಾಜ್ಯಕ್ಕೆ ಬಂದಿದ್ದರು. ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿ ಬಳಿಕ ರಾಜಕಾರಣ ಪ್ರವೇಶಿಸಿದ್ದ ಅವರು, 1999ರ ವಿಧಾನಸಭಾ ಚುನಾವಣೆಯಲ್ಲಿ ಭಾರತಿ ನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಸಚಿವರಾಗಿಯೂ ಕೆಲಸ ಮಾಡಿದ್ದರು.

ಬೆಂಗಳೂರಿನ ಯಂಗ್ ಮೆನ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್ (ವೈಎಂಸಿಎ) ಅಧ್ಯಕ್ಷರಾಗಿಯೂ ಅವರು ಕೆಲಸ ಮಾಡುತ್ತಿದ್ದರು.

ಉತ್ತರ ಪ್ರದೇಶ: ಇತರೆ ಹಿಂದುಳಿದ ವರ್ಗಗಳ ಮುಖಂಡರ ಸಾಮೂಹಿಕ ಪಕ್ಷಾಂತರದ ಪರಿಣಾಮ

ಯೋಗಿ ಮೋಡಿ ಮುಕ್ಕಾಗಿಸಿದ ವಲಸೆ

• ಸಂಜಯ್ ಪಾಂಡೆ



ಯೋಗಿ ಆದಿತ್ಯನಾಥ

ಲಖನೌ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು, ರಾಜ್ಯದಲ್ಲಿ ಬಿಜೆಪಿಯ ಅತ್ಯಂತ ಜನಪ್ರಿಯ ನಾಯಕ ಮತ್ತು ಜನರನ್ನು ಸೆಳೆಯಬಲ್ಲ ವ್ಯಕ್ತಿ ಎಂದು ತೀರಾ ಇತ್ತೀಚಿನವರೆಗೆ ಹೇಳಲಾಗುತ್ತಿತ್ತು. ಬಿಜೆಪಿಯ ಅತ್ಯುನ್ನತ ನಾಯಕರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರತಿಸ್ಪರ್ಧಿಯಾಗಬಲ್ಲ ನಾಯಕ ಎಂದೂ ಯೋಗಿ ಅವರನ್ನು ಬಿಂಬಿಸಲಾಗುತ್ತಿತ್ತು. ಯೋಗಿ ಆದಿತ್ಯನಾಥ ಅವರದ್ದು ಉಗ್ರ ಹಿಂದುತ್ವದ ಪ್ರತಿಪಾದನೆ. ಅವರು ತಮ್ಮ ಧಾರ್ಮಿಕ ಧ್ರುವೀಕರಣ ಉದ್ದೇಶದ ಉಗ್ರ ಭಾಷಣದ ಮೂಲಕ ಸಾರ್ವಜನಿಕ ಸ್ಥಳಗಳಲ್ಲಿ ಜನರನ್ನು ಒಗ್ಗೂಡಿಸಿ, ಚುನಾವಣೆ ಗೆಲುವಿಗೆ ನೆರವಾಗುತ್ತಿದ್ದರು ಎಂದು ಹೇಳಲಾಗುತ್ತಿತ್ತು. ಆದರೆ ಕಳೆದ ನಾಲ್ಕು ದಿನಗಳಲ್ಲಿ ಇದು ಬದಲಾಗಿದೆ.

ರಾಜ್ಯದ ಹಿಂದುಳಿದ ವರ್ಗಗಳ ಅತ್ಯಂತ ಪ್ರಭಾವಶಾಲಿ ನಾಯಕರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಆರಂಭವಾದ ನಂತರ, ಯೋಗಿ ಆದಿತ್ಯನಾಥ ಅವರ ಬಗ್ಗೆ ಇದ್ದ ಈ ಚಿತ್ರಣ ಬದಲಾಗುತ್ತಿದೆ. ಹಿಂದುಳಿದ ವರ್ಗಗಳು, ದಲಿತ ಮತ್ತು ಬ್ರಾಹ್ಮಣ ಸಮುದಾಯದ ಪ್ರಭಾವಿ ನಾಯಕರು ಒಂದು ವಾರ ಅಥವಾ ಅದಕ್ಕಿಂತ ಹಿಂದಿನ ಕೆಲ ದಿನಗಳಲ್ಲಿ ಸಂಪುಟ ಮತ್ತು ಬಿಜೆಪಿಯನ್ನೂ ತೊರೆದಿದ್ದಾರೆ. ಬಿಜೆಪಿಯ ಪ್ರಬಲ ಎದುರಾಳಿ ಸಮಾಜವಾದಿ ಪಕ್ಷ ಸೇರುತ್ತಿದ್ದಾರೆ. ಈ ಬೆಳವಣಿಗೆಯ ನಂತರ ಯೋಗಿ ಆದಿತ್ಯನಾಥ ಅವರು ಬಿಜೆಪಿಗೆ ಮಾರಕ ಎಂಬರ್ಥದ ಮಾತುಗಳನ್ನು ಪಕ್ಷದ ನಾಯಕರು ಪಿಸುಗುಡುತ್ತಿದ್ದಾರೆ.

ನಾಲ್ಕೇ ದಿನದಲ್ಲಿ ಮೂವರು ಸಚಿವರೂ ಸೇರಿ 11 ಬಿಜೆಪಿ ಶಾಸಕರು ಪಕ್ಷವನ್ನು ತೊರೆದಿದ್ದಾರೆ. ಪಕ್ಷ ತೊರೆದವರೆಲ್ಲರೂ ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯದವರು. 2017ರ ವಿಧಾನಸಭಾ ಚುನಾವಣೆಯಲ್ಲಿ ಯಾದವರನ್ನು ಹೊರತುಪಡಿಸಿ ಬೇರೆ ಹಿಂದುಳಿದ ವರ್ಗಗಳ ಮತಗಳು ಮತ್ತು ಜಾಟವರನ್ನು ಹೊರತುಪಡಿಸಿ ಬೇರೆ ದಲಿತ ಸಮುದಾಯಗಳ ಮತಗಳು ಬಿಜೆಪಿಗೆ ಬೀಳುವಂತೆ ಮಾಡುವಲ್ಲಿ ಈ ನಾಯಕರೆಲ್ಲರೂ ಮಹತ್ವದ ಪಾತ್ರ ವಹಿಸಿದ್ದರು. ಈ ಕಾರಣದಿಂದಲೇ ಆ ಚುನಾವಣೆಯಲ್ಲಿ ಶೇ 40ಕ್ಕಿಂತಲೂ ಹೆಚ್ಚು ಮತಗಳನ್ನು ಪಡೆಯಲು ಸಾಧ್ಯವಾಗಿತ್ತು.

ಈಗ ಬಿಜೆಪಿ ತೊರೆದ ಆ ನಾಯಕರೆಲ್ಲರೂ ಯೋಗಿ ಆದಿತ್ಯನಾಥ ಅವರತ್ತಲೇ ಬೊಟ್ಟುಮಾಡುತ್ತಿದ್ದಾರೆ. ಯೋಗಿ ಅವರ ವರ್ತನೆಯ ಕಾರಣದಿಂದಲೇ ಪಕ್ಷ ಬಿಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಸ್ವಾಮಿ ಪ್ರಸಾದ್ ಮೌರ್ಯ ಅವರಂತೂ ಈ ವಿಚಾರದಲ್ಲಿ ಅತ್ಯಂತ ಮೊನಚಾದ ಮಾತುಗಳನ್ನಾಡಿದ್ದಾರೆ. 'ಕೆಳ ಜಾತಿಯ ನಾಯಕರನ್ನು, ಉಪಮುಖ್ಯಮಂತ್ರಿಯಾಗಿರುವ ಕೇಶವ್ ಪ್ರಸಾದ್ ಮೌರ್ಯ ಅವರನ್ನು ಸಹ ಯೋಗಿ ಆದಿತ್ಯನಾಥ ಅವರ ಎದುರಲ್ಲಿ ಸ್ಟೂಲಿನ ಮೇಲೆ ಕೂರಿಸಲಾಗುತ್ತಿತ್ತು' ಎಂದು ತೀವ್ರ ಬೇಸರ ಮತ್ತು ಆಕ್ರೋಶ ವ್ಯಕ್ತಪಡಿಸಿದ್ದರು.

ಈ ಎಲ್ಲಾ ಬೆಳವಣಿಗೆಗಳ ನಂತರ ಯೋಗಿ ಆದಿತ್ಯನಾಥ ದುರ್ಬಲ ನಾಯಕ ಮತ್ತು ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಿ ಗೆಲ್ಲಲು, ಹೋರಾಟ ನಡೆಸಲು ಸಾಧ್ಯವಿಲ್ಲದ ವ್ಯಕ್ತಿ ಎಂದು ಬಿಂಬಿಸಲಾಗುತ್ತಿದೆ. ಮುಖಂಡರು ಪಕ್ಷ ತೊರೆಯುತ್ತಿರುವ ರೀತಿಯು, ಬಿಜೆಪಿ ತನ್ನ ಚುನಾವಣಾ ತಂತ್ರವನ್ನೇ ಬದಲಾಯಿಸುವಂತಹ ಒತ್ತಡ ಸೃಷ್ಟಿಸಿದೆ. 'ಇದು ಯೋಗಿ ಆದಿತ್ಯನಾಥ ಅವರ ಜನಪ್ರಿಯತೆಯನ್ನೂ ಮುಕ್ಕಾಗಿಸಿದೆ. ಬಹುಶಃ ಯೋಗಿ ಅವರ ಬದಲಿಗೆ ಪ್ರಧಾನಿ ನರೇಂದ್ರ ಮೋದಿ ಅವರೇ ಚುನಾವಣೆಯನ್ನು ಮುನ್ನಡೆಸುವ ಸಾಧ್ಯತೆ ಇದೆ' ಎಂಬ ಪಿಸುಮಾತುಗಳು ಬಿಜೆಪಿ ಪಾಳಯದಲ್ಲಿ ಕೇಳುತ್ತಿವೆ.

ಆದರೆ, ಬಿಜೆಪಿಯ ಉತ್ತರ ಪ್ರದೇಶದ ಯಾವ ಮುಖಂಡನೂ ಈ ಮಾತನ್ನು ಬಹಿರಂಗವಾಗಿ ಹೇಳುತ್ತಿಲ್ಲ. 'ಈ ಹೋರಾಟವನ್ನು ಮುನ್ನಡೆಸಲು ಯೋಗಿಜೀ ಅವರಿಂದ ಸಾಧ್ಯವಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ. ಅವರು ಈಗ ಪಕ್ಷದ ಮುಂಚೂಣಿಯ ನಾಯಕರಾಗಲು ಸಾಧ್ಯವಿಲ್ಲ. ಈಗ ಮೋದಿಜೀ ಅವರೇ ರಾಜ್ಯ ಚುನಾವಣೆಯ ಮುಂದಾಳತ್ವವನ್ನು ವಹಿಸಿಕೊಳ್ಳಬೇಕಾದ್ದದ್ದು ಅನಿವಾರ್ಯ' ಎಂದು ತಮ್ಮ ಹೆಸರು ಹೇಳಲಿಚ್ಛಿಸದ, ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

'ಈ ಚುನಾವಣೆಯಲ್ಲಿ ಸಮಾಜವಾದಿ ಪಕ್ಷವು ಭಾರಿ ಪೈಪೋಟಿ ನೀಡಲಿದೆ. ನಾವು ಮತ್ತೆ ಅಧಿಕಾರಕ್ಕೆ ಬರಬೇಕಿದ್ದರೆ, ಮೋದಿಜೀ ಅವರೇ ಮತ್ತಷ್ಟು ರ್‍ಯಾಲಿಗಳನ್ನು ನಡೆಸಬೇಕಾಗುತ್ತದೆ' ಎಂದೂ ಆ ನಾಯಕ ಹೇಳಿದ್ದಾರೆ.

ಹಲವು ಮುಖಂಡರು ಪಕ್ಷ ತೊರೆದಿರುವುದು ಉತ್ತರ ಪ್ರದೇಶದ ಬಿಜೆಪಿ ನಾಯಕತ್ವವನ್ನು ಅಲ್ಲಾಡಿಸಿದೆ. ಸ್ವತಃ ಆದಿತ್ಯನಾಥ ಅವರು ಇದರಿಂದ ಧೃತಿಗೆಟ್ಟಿದ್ದಾರೆ. ಇದರಿಂದಲೇ ಅವರು ಪಕ್ಷ ತೊರೆದಿರುವ ಸಚಿವರು ಮತ್ತು ಶಾಸಕರ ಹೆಸರು ಹೇಳಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. 'ಕುಟುಂಬ ರಾಜಕಾರಣದಲ್ಲಿ ನಂಬಿಕೆ ಇಟ್ಟವರು ನಿಜವಾಗಿಯೂ ಹಿಂದುಳಿದವರ ಮತ್ತು ದಲಿತರ ಹಿತೈಷಿಗಳಾಗಲು ಸಾಧ್ಯವಿಲ್ಲ' ಎಂದು ಶುಕ್ರವಾರ ಗೋರಖಪುರದಲ್ಲಿ ನಡೆದ ಸಭೆಯಲ್ಲಿ ಯೋಗಿ ಹೇಳಿದ್ದಾರೆ. ಜತೆಗೆ ಈ ವರ್ಗಗಳ ಕಲ್ಯಾಣಕ್ಕಾಗಿ ತಮ್ಮ ಸರ್ಕಾರ ಏನೆಲ್ಲಾ ಮಾಡಿದೆ ಎಂಬುದನ್ನೂ ಯೋಗಿ ಪಟ್ಟಿ ಮಾಡಿದ್ದಾರೆ.

ಎಸ್‌ಪಿಗೆ ಮೌರ್ಯ, ಸೈನಿ ಅಧಿಕೃತ ಸೇರ್ಪಡೆ

ಸಮಾಜವಾದಿ ಪಕ್ಷ ಸೇರಿದ ಬಿಜೆಪಿಯ ಇನ್ನೂ 5 ಶಾಸಕರು

ಪ್ರಜಾವಾಣಿ ವಾರ್ತೆ



ಸ್ವಾಮಿ ಪ್ರಸಾದ್ ಮೌರ್ಯ ಅವರಿಗೆ ಪೇಟ ತೊಡಿಸಿ, ಪಕ್ಷಕ್ಕೆ ಬರಮಾಡಿಕೊಂಡ ಅಖಿಲೇಶ್ ಯಾದವ್ –ಪಿಟಿಐ ಚಿತ್ರ

ಲಖನೌ: ಯೋಗಿ ಆದಿತ್ಯನಾಥ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಹಿಂದುಳಿದ ವರ್ಗಗಳ ನಾಯಕರಾದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ಧರಂ ಸಿಂಗ್ ಸೈನಿ ಅವರು ಶುಕ್ರವಾರ ಸಮಾಜವಾದಿ ಪಕ್ಷ ಸೇರಿದರು. ಅವರ ಜತೆಯಲ್ಲಿ ಇನ್ನೂ ಐವರು ಬಿಜೆಪಿ ಶಾಸಕರು ಸಮಾಜವಾದಿ ಪಕ್ಷ ಸೇರಿದ್ದಾರೆ.

ಇಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಈ ನಾಯಕರನ್ನು ತಮ್ಮ ಪಕ್ಷಕ್ಕೆ ಬರಮಾಡಿಕೊಂಡರು. ಈ ಶಾಸಕರ ಜತೆಯಲ್ಲಿ ಬಿಜೆಪಿಯ ಇನ್ನೂ ಹಲವು ಮುಖಂಡರು ಎಸ್‌ಪಿ ಸೇರಿದ್ದಾರೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ದಾರಾ ಸಿಂಗ್ ಚೌಹಾಣ್ ಇನ್ನೂ ಸಮಾಜವಾದಿ ಪಕ್ಷ ಸೇರಿಲ್ಲ. ಈ ಬಗ್ಗೆ ಅವರಿನ್ನೂ ಯಾವುದೇ ಮಾಹಿತಿ ನೀಡಿಲ್ಲ.

ಬಿಜೆಪಿ ಶಾಸಕರಾಗಿದ್ದ ರೋಷನ್ ಲಾಲ್ ವರ್ಮಾ, ಬ್ರಿಜೇಶ್ ಪ್ರಜಾಪತಿ, ಮುಖೇಶ್ ವರ್ಮಾ, ವಿನಯ್ ಶಾಖ್ಯ ಮತ್ತು ಭಗವತಿ ಸಾಗರ್ ಅವರು ಸಮಾಜವಾದಿ ಪಕ್ಷ ಸೇರಿದರು. ಮತ್ತೊಬ್ಬ ಬಿಜೆಪಿ ಶಾಸಕ ಚೌಧರಿ ಅಮರ್ ಸಿಂಗ್ ಅವರು ಸಮಾಜವಾದಿ ಪಕ್ಷದ ಮಿತ್ರಪಕ್ಷವಾದ ಆರ್‌ಎಲ್‌ಡಿ ಸೇರಿದರು.

ಬಿಜೆಪಿಗೆ ರಾಜೀನಾಮೆ ನೀಡಿರುವ 11 ಶಾಸಕರಲ್ಲಿ ಇನ್ನೂ ಹಲವರು ಸಮಾಜವಾದಿ ಪಕ್ಷ ಸೇರಲಿದ್ದಾರೆ ಎನ್ನಲಾಗಿದೆ.

'ಇದೆಲ್ಲಾ ಇಷ್ಟಕ್ಕೇ ನಿಲ್ಲುವುದಿಲ್ಲ. ಇನ್ನೂ ಹತ್ತಾರು ನಾಯಕರು ಬಿಜೆಪಿ ತೊರೆಯಲಿದ್ದಾರೆ. ದೆಹಲಿಯಲ್ಲಿ ಇರುವವರು ಸಹ ಬಾಬಾ ಆದಿತ್ಯನಾಥ ಅವರನ್ನು ರಕ್ಷಿಸಲು ಸಾಧ್ಯವಿಲ್ಲ' ಎಂದು ಸ್ವಾಮಿ ಪ್ರಸಾದ್ ಮೌರ್ಯ ಹೇಳಿದ್ದಾರೆ.

'ಇಂದು ಬಿಜೆಪಿಯ ಅಂತ್ಯಕ್ಕೆ ನಾಂದಿ ಹಾಡಲಾಗಿದೆ. ದೇಶದ ಜನರನ್ನು ಬಿಜೆಪಿ ಹಾದಿತಪ್ಪಿಸಿದೆ. ಜನರ ಕಣ್ಣಿಗೆ ಮಣ್ಣೆರಚಿ, ಅವರನ್ನು ಲೂಟಿ ಮಾಡಿದೆ. ಈಗ ಬಿಜೆಪಿಯನ್ನು ಕಿತ್ತೊಗೆಯುವ ಸಮಯ ಬಂದಿದೆ. ಬಿಜೆಪಿಯ ವಸೂಲಿಬಾಜಿಯಿಂದ ಉತ್ತರ ಪ್ರದೇಶವನ್ನು ಮುಕ್ತಗೊಳಿಸುವ ಸಮಯವಿದು' ಎಂದು ಹೇಳಿದ್ದಾರೆ.

'ಈಗ ಸ್ಪರ್ಧೆ 85 ವರ್ಸಸ್ 15'

'ನಾವು ಬಿಜೆಪಿ ತೊರೆದಿದ್ದೇವೆ. ಯೋಗಿ ಆದಿತ್ಯನಾಥ ಅವರು ಹೇಳಿದ್ದಂತೆ ಸ್ಪರ್ಧೆ 80 ವರ್ಸಸ್ 20ರ (ಹಿಂದೂ ವರ್ಸಸ್ ಮುಸ್ಲಿಂ) ಮಧ್ಯೆ ನಡೆಯುವುದಿಲ್ಲ. ಈಗ ಸ್ಪರ್ಧೆ ನಡೆಯುವುದು 85 ವರ್ಸಸ್ 15ರ ಮಧ್ಯೆ (ದಲಿತರು, ಹಿಂದುಳಿದವರು, ಮುಸ್ಲಿಮರು ವರ್ಸಸ್ ಉಳಿದವರ ಮಧ್ಯೆ)' ಎಂದು ಸ್ವಾಮಿ ಪ್ರಸಾದ್ ಮೌರ್ಯ ಅವರು ಯೋಗಿ ಆದಿತ್ಯನಾಥ ಅವರ ವಿರುದ್ಧ ಹರಿಹಾಯ್ದಿದ್ದಾರೆ.

'ಆದಿತ್ಯನಾಥ ಅವರ ದೃಷ್ಟಿಯಲ್ಲಿ ಮೇಲ್ಜಾತಿಯ ಜನರಷ್ಟೇ ಹಿಂದೂಗಳು. ಯೋಗಿ ಅವರೇ ನಿಮ್ಮ ದೃಷ್ಟಿಯಲ್ಲಿ ದಲಿತರು ಹಿಂದೂಗಳಲ್ಲವೇ? ಅವರ ದೃಷ್ಟಿಯಲ್ಲಿ ದಲಿತರು ಮತ್ತು ಹಿಂದುಳಿದವರು ಹಿಂದೂಗಳಲ್ಲ. ಹೀಗಾಗಿಯೇ ಶಿಕ್ಷಕರ ನೇಮಕಾತಿಯಲ್ಲಿ ಈ ವರ್ಗಗಳಿಗೆ ಅವರು ಮೀಸಲಾತಿ ನೀಡಿಲ್ಲ. ಯೋಗಿ ಅವರೇ ಈಗ ನೀವು ಏನು ಮಾಡುತ್ತೀರಿ ಅಂದರೆ, ಹೇಗಿದ್ದರೂ ಚುನಾವಣೆ ಸೋಲುತ್ತೀರಿ. ಹೀಗಾಗಿ ನಿಮ್ಮ ಗಂಟನ್ನು ಕಟ್ಟಿಕೊಂಡು ಹೊರಡಿ' ಎಂದು ಮೌರ್ಯ ಲೇವಡಿ ಮಾಡಿದ್ದಾರೆ.

'ಬಿಜೆಪಿ ಸಹ ಹಿಂದುಳಿದ ವರ್ಗಗಳಿಗೆ ಮೋಸ ಮಾಡಿದೆ. ಹಿಂದುಳಿದ ವರ್ಗಗಳ ನಾಯಕರಾದ ಕೇಶವ್ ಪ್ರಸಾದ್ ಮೌರ್ಯ ಅವರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ಬಿಜೆಪಿ ಆಮಿಷ ಒಡ್ಡಿತ್ತು. ನನಗೂ ಆ ಆಮಿಷ ಒಡ್ಡಿತ್ತು. ಆದರೆ ನಮ್ಮನ್ನೆಲ್ಲಾ ಕಡೆಗಣಿಸಿ ಯೋಗಿ ಆದಿತ್ಯನಾಥ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಿತು. ಯೋಗಿ ಅವರು ನಮ್ಮನ್ನು ಮನುಷ್ಯರ ರೀತಿಯಲ್ಲಿ ನೋಡಿಕೊಳ್ಳಲೇ ಇಲ್ಲ. ಆದರೆ ಅಖಿಲೇಶ್ ಅವರು ನಮ್ಮನ್ನು ಸಮಾನರಾಗಿ ನೋಡುತ್ತಾರೆ' ಎಂದು ಅವರು ಹೇಳಿದ್ದಾರೆ.

ಪ್ರಿಯಾಂಕಾ 'ಆಯ್ಕೆಯ ರಾಜಕಾರಣ': ಬಿಜೆಪಿ ಟೀಕೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು 'ಆಯ್ಕೆಯ ರಾಜಕಾರಣ' ಮಾಡುತ್ತಿದ್ದಾರೆ. ಮಹಿಳೆಯರ ವಿರುದ್ಧದ ದೌರ್ಜನ್ಯವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ಶುಕ್ರವಾರ ಟೀಕಿಸಿದೆ.

'ಉತ್ತರ ಪ್ರದೇಶದಲ್ಲಿ ಮಹಿಳೆಯರ ಹಕ್ಕುಗಳ ರಕ್ಷಕಿ ಎಂದು ಪ್ರಿಯಾಂಕಾ ಅವರು ತಮ್ಮನ್ನು ಬಿಂಬಿಸುತ್ತಿದ್ದಾರೆ. 'ನಾವು ಹುಡುಗಿಯರು, ಹೋರಾಡಬಲ್ಲೆವು' ಎಂದು ಘೋಷಿಸಿದ್ದಾರೆ. ಆದರೆ, ಕಾಂಗ್ರೆಸ್ ಆಳ್ವಿಕೆ ಇರುವ ರಾಜಸ್ಥಾನದಲ್ಲಿ 'ಹುಡುಗಿಯರಾಗಿದ್ದರೆ ಹೋರಾಡುವಂತಿಲ್ಲ' ಎನ್ನುತ್ತಿದ್ದಾರೆ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಹೇಳಿದ್ದಾರೆ. ರಾಜಸ್ಥಾನದಲ್ಲಿ ಬುದ್ಧಿಮಾಂದ್ಯ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಆಗಿದೆ ಎಂಬ ಆರೋಪವನ್ನು ಮುಂದಿರಿಸಿಕೊಂಡು ಪಾತ್ರಾ ಹೀಗೆ ಹೇಳಿದ್ದಾರೆ.

'ವಾಸ್ತವದಲ್ಲಿ ನೀವೊಬ್ಬ ಕಾಂಗ್ರೆಸ್ ರಾಜಕಾರಣಿ. ಹಾಗಾಗಿ, ಇಂತಹ ರಾಜಕಾರಣ ಮಾಡುವುದಷ್ಟೇ ನಿಮಗೆ ಸಾಧ್ಯ' ಎಂದು ಪಾತ್ರಾ ಟೀಕಿಸಿದ್ದಾರೆ.

ಮಹಿಳೆಯರಿಗೆ ನ್ಯಾಯ ಸಿಗುವುದರ ಪರವಾಗಿ ಎಲ್ಲರೂ ಮಾತನಾಡಬೇಕು. ಮಹಿಳೆಯರ ವಿರುದ್ಧದ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಬೇಕು. ಪ್ರಿಯಾಂಕಾ ಮತ್ತು ರಾಹುಲ್ ಗಾಂಧಿ ಅವರು ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗಾಗಿ ಆಯ್ಕೆಯ ರಾಜಕೀಯ ಮಾಡುತ್ತಿದ್ದಾರೆ. ಹಾಗಾಗಿ, ಇದು ಅಕ್ಷಮ್ಯ ಎಂದು ಪಾತ್ರ ಹೇಳಿದ್ದಾರೆ.

ಅತ್ಯಾಚಾರಕ್ಕೆ ಒಳಗಾಗಿದ್ದಾಳೆ ಎನ್ನಲಾದ ಬಾಲಕಿಯು ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟದಲ್ಲಿದ್ದಾಳೆ. ಪ್ರಿಯಾಂಕಾ ಆಗಲಿ ರಾಹುಲ್ ಆಗಲಿ ಆ ಹುಡುಗಿಯನ್ನು ಭೇಟಿ ಆಗಿಲ್ಲ. ಆದರೆ, ಕಾಂಗ್ರೆಸ್ ಆಳ್ವಿಕೆಯಲ್ಲಿ ಇಲ್ಲದ ರಾಜ್ಯದಲ್ಲಿ ಇಂತಹುದು ನಡೆದಿದ್ದರೆ ಭೇಟಿ ಮಾಡುತ್ತಿದ್ದರು. ಸಂತ್ರಸ್ತೆಯ ಕುಟುಂಬದ ಜತೆಗೆ ಇರುವ ಫೋಟೊಗಳನ್ನು ಪ್ರಕಟಿಸುತ್ತಿದ್ದರು. ಆದರೆ, ರಾಜಸ್ಥಾನದ ಹುಡುಗಿಯನ್ನು ಅವರು ಭೇಟಿ ಮಾಡಿಲ್ಲ ಎಂದು ಪಾತ್ರಾ ಹೇಳಿದ್ದಾರೆ.

ನುಡಿ–ಕಿಡಿ



'80ರ ವಿರುದ್ಧ 20' ಎಂದು ಯೋಗಿ ಆದಿತ್ಯನಾಥ ಹೇಳಿದ್ದಾರೆ. ಅಂದರೆ, ಶೇ 20ರಷ್ಟು ಜನರು ಮಾತ್ರ ಬಿಜೆಪಿಗೆ ಬೆಂಬಲ ನೀಡುತ್ತಾರೆ. ಉಳಿದವರು ಎಸ್‌ಪಿಗೆ ಮತ ಹಾಕುತ್ತಾರೆ. ನಾಲ್ಕನೇ ಮೂರರಷ್ಟು ಕ್ಷೇತ್ರಗಳಲ್ಲಿ ಗೆಲುವು ಸಿಗಲಿದೆ ಎಂದು ಬಿಜೆಪಿ ಹೇಳುತ್ತಿದೆ. ಅದರ ಅರ್ಥ, 3–4 ಕ್ಷೇತ್ರಗಳಲ್ಲಿ ಗೆಲುವು ಸಾಧ್ಯ ಎಂದು ಮಾತ್ರ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ಎಸ್‌ಪಿ ಆಳ್ವಿಕೆ ಇದ್ದಾಗ ಸಾಮಾಜಿಕ ಶೋಷಣೆ ಇತ್ತೇ ವಿನಾ ಸಾಮಾಜಿಕ ನ್ಯಾಯ ಇರಲಿಲ್ಲ. ವಂಶಾಡಳಿತ ನಡೆಸುವವರು ಯಾವುದೇ ವರ್ಗಕ್ಕೂ ಸಾಮಾಜಿಕ ನ್ಯಾಯ ನೀಡಲು ಸಾಧ್ಯವಿಲ್ಲ. ಸಮಾಜವಾದಿ ಪಕ್ಷದ ಸರ್ಕಾರವು ದಲಿತರು ಮತ್ತು ಬಡವರ ಹಕ್ಕುಗಳ ದರೋಡೆ ನಡೆಸಿತ್ತು

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ದಲಿತರ ಮನೆಯಲ್ಲಿ ಯೋಗಿ ಊಟ

ಗೋರಖಪುರ (ಪಿಟಿಐ): ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ದಲಿತರ ಮನೆಯಲ್ಲಿ ಶುಕ್ರವಾರ ಊಟ ಮಾಡಿದ್ದಾರೆ. ಸಮಾಜವಾದಿ ಪಕ್ಷದ ಆಳ್ವಿಕೆ ಇದ್ದಾಗ ಸಾಮಾಜಿಕ ನ್ಯಾಯ ಇರಲಿಲ್ಲ, ಬದಲಿಗೆ ಸಾಮಾಜಿಕ ಶೋಷಣೆ ಇತ್ತು. ಆದರೆ, ಬಿಜೆಪಿ ಸರ್ಕಾರವು ಯಾವುದೇ ತಾರತಮ್ಯ ಇಲ್ಲದೆ ಎಲ್ಲ ವರ್ಗಗಳ ಅಭಿವೃದ್ಧಿಗೆ ಕೆಲಸ ಮಾಡಿದೆ ಎಂದು ಯೋಗಿ ಹೇಳಿದ್ದಾರೆ.

ಬಿಜೆಪಿ ಮುಖಂಡರಾದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ಧರಂ ಸಿಂಗ್ ಸೈನಿ ಅವರು ಸಮಾಜವಾದಿ ಪಕ್ಷವನ್ನು ಅಧಿಕೃತವಾಗಿ ಸೇರುವುದಕ್ಕೆ ಅಲ್ಪ ಮುನ್ನ ಯೋಗಿ ಹೀಗೆ ಹೇಳಿದ್ದಾರೆ. ಸರ್ಕಾರವು ದಲಿತ ವಿರೋಧಿ ಎಂದು ಆರೋಪಿಸಿ ಈ ಎಲ್ಲರೂ ಬಿಜೆಪಿ ತೊರೆದಿದ್ದರು.

ಅಮೃತಲಾಲ್ ಭಾರ್ತಿ ಅವರ ಮನೆಗೆ ಮಕರ ಸಂಕ್ರಾಂತಿಯ ಅಂಗವಾಗಿ ಯೋಗಿ ಅವರು ಭೇಟಿ ಕೊಟ್ಟರು.

ಅಖಿಲೇಶ್ ಯಾದವ್ ಅವರು ಮುಖ್ಯಮಂತ್ರಿಯಾಗಿದ್ದ ಐದು ವರ್ಷ ಅವಧಿಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 18 ಸಾವಿರ ಮನೆಗಳ ಹಂಚಿಕೆ ಮಾತ್ರ ಆಗಿತ್ತು. ಆದರೆ, ಈಗಿನ ಸರ್ಕಾರದ ಅವಧಿಯಲ್ಲಿ 45 ಲಕ್ಷ ಮನೆಗಳನ್ನು ಬಡವರು ಮತ್ತು ಅನಾಥರಿಗೆ ನೀಡಲಾಗಿದೆ ಎಂದು ಯೋಗಿ ಹೇಳಿದ್ದಾರೆ.

ಯೋಗಿ ನೇತೃತ್ವದ ಸರ್ಕಾರವು ದಲಿತರು ಮತ್ತು ಹಿಂದುಳಿದವರನ್ನು ನಿರ್ಲಕ್ಷಿಸಿದೆ ಎಂದು ಮೌರ್ಯ, ಚೌಹಾಣ್ ಮತ್ತು ಸೈನಿ ಅವರಲ್ಲದೆ, ಪಕ್ಷ ತೊರೆದ ಇತರ ಹಲವು ಶಾಸಕರು ಮತ್ತು ಮಾಜಿ ಶಾಸಕರು ಕೂಡ ಆರೋಪಿಸಿದ್ದಾರೆ.

ಕಾಂಗ್ರೆಸ್ ತೊರೆದ ಜೋಗಿಂದರ್

ಫಗ್ವಾಡ (ಪಿಟಿಐ): ಕಾಂಗ್ರೆಸ್ ಹಿರಿಯ ಮುಖಂಡ, ಪಂಜಾಬ್ ಮಾಜಿ ಸಚಿವ ಜೋಗಿಂದರ್ ಸಿಂಗ್ ಮಾನ್ ಅವರು ಶುಕ್ರವಾರ ಕಾಂಗ್ರೆಸ್‌ನಿಂದ ಹೊರಬಂದರು.

ಪರಿಶಿಷ್ಟ ಜಾತಿ (ಎಸ್‌ಸಿ) ಪ್ರಬಲ ನಾಯಕರಾದ ಅವರು ಪಕ್ಷದ ಜೊತೆಗಿನ 50 ವರ್ಷಗಳ ಸಹಯೋಗವನ್ನು ಕೊನೆಗಾಣಿಸಿದರು.

ಪರಿಶಿಷ್ಟ ಜಾತಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಬಹುಕೋಟಿ ಹಗರಣ ಮತ್ತು ಫಗ್ವಾಡ ಪಟ್ಟಣಕ್ಕೆ ಜಿಲ್ಲೆಯ ಸ್ಥಾನಮಾನಗಳನ್ನು ನೀಡುವ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಕಾರಣ ಅವರು ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ. ಪಕ್ಷದ ಸದಸ್ಯತ್ವ ಮತ್ತು ಪಂಜಾಬ್ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ಅಧ್ಯಕ್ಷ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿದರು.

'ನಾನು ಕಾಂಗ್ರೆಸ್ ಸದಸ್ಯನಾಗಿಯೇ ಸಾಯಬೇಕು ಎಂಬ ಕನಸು ಕಂಡಿದ್ದೆ. ಆದರೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಹಗರಣದ ತಪ್ಪಿತಸ್ಥರನ್ನು ಕಾಂಗ್ರೆಸ್ ಪೋಷಿಸುತ್ತಿರುವುದನ್ನು ನೋಡಿದ ಬಳಿಕ ಪಕ್ಷದಲ್ಲೇ ಉಳಿಯಲು ನನ್ನ ಆತ್ಮಸಾಕ್ಷಿ ಬಿಡುತ್ತಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ತಮ್ಮ ರಾಜೀನಾಮೆ ಕುರಿತು ಮಾನ್ ಪತ್ರ ಬರೆದಿದ್ದಾರೆ.

ಚುನಾವಣಾ ಕಣದಲ್ಲಿ...



ಲಖನೌನಲ್ಲಿ ಸಮಾಜವಾದಿ ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಸೇರಿದ್ದರು

- **ಭಾರಿ ಜನ, ದೂರು ದಾಖಲು:** ಬಿಜೆಪಿ ತೊರೆದ ಮುಖಂಡರು ಎಸ್‌ಪಿ ಸೇರುವುದಕ್ಕಾಗಿ ಎಸ್‌ಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು. ಇದು ಕೋವಿಡ್ ಮಾರ್ಗಸೂಚಿಯ ಉಲ್ಲಂಘನೆ ಎಂಬ ಆರೋಪದಲ್ಲಿ ಚುನಾವಣಾ ಆಯೋಗದ ನಿರ್ದೇಶನದಂತೆ ಎಫ್‌ಐಆರ್ ದಾಖಲಾಗಿದೆ. ನಿಷೇಧಾಜ್ಞೆ ಉಲ್ಲಂಘನೆ ಮತ್ತು ಸಾಂಕ್ರಾಮಿಕ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 2,500 ಅಪರಿಚಿತರ ಮೇಲೆ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- **'ವೀಕ್ಷಕರೇ, ಕಾಣಿಸಿಕೊಳ್ಳಿ':** ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ವೀಕ್ಷಕರಾಗಿ ನೇಮಕವಾದವರು ಜನರಿಗೆ ಕಾಣಿಸಿಕೊಳ್ಳಬೇಕು, ಲಭ್ಯ ಇರಬೇಕು, ತಟಸ್ಥವಾಗಿರಬೇಕು ಮತ್ತು ತಮ್ಮ ಕಾರ್ಯನಿರ್ವಹಣೆಯಲ್ಲಿ ನೈತಿಕವಾಗಿರಬೇಕು ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಹೇಳಿದ್ದಾರೆ. ವೆಚ್ಚ ವೀಕ್ಷಕರು ತಮ್ಮ ಕೌಶಲವನ್ನು ಹರಿತಗೊಳಿಸಿಕೊಂಡು, ಮತದಾರರಿಗೆ ಆಮಿಷ ಒಡ್ಡುವ ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿಯಬೇಕು ಎಂದಿದ್ದಾರೆ. ಸಾಮಾನ್ಯ, ಪೊಲೀಸ್ ಮತ್ತು ವೆಚ್ಚ ವೀಕ್ಷಕರನ್ನು ಉದ್ದೇಶಿಸಿ ಸುಶೀಲ್ ಚಂದ್ರ ಮಾತನಾಡಿದ್ದಾರೆ
- **'ರ್‍ಯಾಲಿಗೆ ಅವಕಾಶ ಕೊಡಿ':** ಭೌತಿಕ ರ್‍ಯಾಲಿಗಳು ಮತ್ತು ರೋಡ್‌ಶೋಗಳಿಗೆ ಇದೇ 15ರವರೆಗೆ ಇರುವ ನಿಷೇಧವನ್ನು ಮರು ಪರಿಶೀಲಿಸಬೇಕು ಎಂದು ಶಿರೋಮಣಿ ಅಕಾಲಿ ದಳವು ಚುನಾವಣಾ ಆಯೋಗವನ್ನು ಕೋರಿದೆ. ಪ್ರಚಾರದ ಸಣ್ಣ ಸಣ್ಣ ಸಭೆಗಳು ಸಮಾಜದ ಎಲ್ಲ ವರ್ಗಗಳನ್ನು ತಲುಪಲು ಅಭ್ಯರ್ಥಿಗಳಿಗೆ ಅಗತ್ಯ ಎಂದು ಪಕ್ಷವು ಪ್ರತಿಪಾದಿಸಿದೆ. ಪ್ರಚಾರ ನಿಷೇಧವು ಎಲ್ಲ ಪಕ್ಷಗಳ ಅಭ್ಯರ್ಥಿಗಳನ್ನೂ ಸಂಕಷ್ಟಕ್ಕೆ ತಳ್ಳಿದೆ ಎಂದೂ ಆಯೋಗಕ್ಕೆ ಬರೆದ ಪತ್ರದಲ್ಲಿ ಪಕ್ಷವು ಹೇಳಿದೆ
- **ಕಾಂಗ್ರೆಸ್‌ಗೆ ಬಿಜೆಪಿ ಟೀಕೆ:** ಬದರೀನಾಥ–ಕೇದಾರನಾಥ ದೇವಾಲಯ ಸಮಿತಿಯನ್ನು ಮಾದರಿ ನೀತಿ ಸಂಹಿತೆ ಜಾರಿಯಲ್ಲಿ ಇದ್ದಾಗಲೇ ಪುನರ್‌ರಚಿಸಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಇದಕ್ಕೆ ಬಿಜೆಪಿ ತಿರುಗೇಟು ಕೊಟ್ಟಿದೆ. ಈ ವಿಚಾರವನ್ನು ಕೆದಕುವ ಮೂಲಕ, ಕಾಂಗ್ರೆಸ್ ಪಕ್ಷವು 'ಹಿಂದೂ ವಿರೋಧಿ' ಎಂಬುದನ್ನು ಸಾಬೀತುಪಡಿಸಿದೆ ಎಂದು ಬಿಜೆಪಿ ಹೇಳಿದೆ. 'ಸನಾತನ ಧರ್ಮ'ದ ವಿರುದ್ಧ ಇರುವ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ಚಾರ್ ಧಾಮ ಯಾತ್ರೆಯು ಸುಗಮವಾಗಿ ನಡೆಯುವುದು ಬೇಕಿಲ್ಲ ಎಂದು ಬಿಜೆಪಿ ವಕ್ತಾರ ಸುರೇಶ್ ಜೋಶಿ ಅವರು ಆರೋಪಿಸಿದ್ದಾರೆ.
- ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರಚಾರ ಮಾಡುವ ಬಗ್ಗೆ ತೆಲಂಗಾಣ ರಾಷ್ಟ್ರ ಸಮಿತಿಯ (ಟಿಆರ್‌ಎಸ್) ನಾಯಕರು ಯೋಚಿಸುತ್ತಿದ್ದಾರೆ. ಕೇಂದ್ರದ ವಿರುದ್ಧ ಟಿಆರ್‌ಎಸ್ ಹಲವು ವಿಚಾರಗಳಲ್ಲಿ ಸಂಘರ್ಷಕ್ಕೆ ಇಳಿದಿದೆ. ಸದ್ಯದ ಪರಿಸ್ಥಿತಿ ನೋಡಿದರೆ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷಕ್ಕೆ ಅನುಕೂಲಕರ ವಾತಾವರಣ ಕಾಣಿಸುತ್ತಿದೆ ಎಂದು ತೆಲಂಗಾಣ ಸಚಿವ ಕೆ.ಟಿ. ರಾಮರಾವ್ ಹೇಳಿದ್ದಾರೆ

ಆರ್‌ಎಲ್‌ಡಿಯಿಂದ ವಿದ್ಯಾವಂತರು, ಎಸ್‌ಪಿಯಿಂದ ಗೆಲ್ಲುವ ಸಾಮರ್ಥ್ಯದ ಅಭ್ಯರ್ಥಿಗಳ ಆಯ್ಕೆ

ಅಭ್ಯರ್ಥಿ ಆಯ್ಕೆ: ಮಿತ್ರ ಪಕ್ಷಗಳ ಭಿನ್ನ ಮಾನದಂಡ

ನೊಯ್ಡಾ (ಪಿಟಿಐ): ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಉತ್ತರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ) ಬಿಡುಗಡೆ ಮಾಡಿವೆ. ಅಭ್ಯರ್ಥಿಗಳ ಆಯ್ಕೆಗೆ ಎರಡು ಪಕ್ಷಗಳು ಭಿನ್ನ ಮಾನದಂಡ ಅನುಸರಿಸಿವೆ.

'ಅಭ್ಯರ್ಥಿಗಳ ಹಿನ್ನೆಲೆಯನ್ನು ಮಾನದಂಡವಾಗಿ ಇರಿಸಿಕೊಂಡು ಟಿಕೆಟ್ ಹಂಚಲಾಗಿದೆ. ಆರ್‌ಎಲ್‌ಡಿ ಘೋಷಿಸಿರುವ ಅಭ್ಯರ್ಥಿಗಳಲ್ಲಿ ಯಾರಿಗೂ ಅಪರಾಧ ಹಿನ್ನೆಲೆ ಇಲ್ಲ. ಅವರೆಲ್ಲರೂ ವಿದ್ಯಾವಂತರು. ನಮ್ಮ ಅಭ್ಯರ್ಥಿಗಳಲ್ಲಿ ಯಾರೂ ಹೊರಗಿನಿಂದ ಬಂದವರಿಲ್ಲ. ಎಲ್ಲರೂ ಅವರು ಸ್ಪರ್ಧಿಸುತ್ತಿರುವ ಕ್ಷೇತ್ರಗಳ ನಿವಾಸಿಗಳೇ ಆಗಿದ್ದಾರೆ' ಎಂದು ಆರ್‌ಎಲ್‌ಡಿ ವಕ್ತಾರ ಸಂದೀಪ್ ಚೌಧರಿ ಹೇಳಿದ್ದಾರೆ.

'ಇತ್ತೀಚಿನ ತಿಂಗಳುಗಳಲ್ಲಿ ಪಕ್ಷದ ನಾಯಕರು ಸಮಾವೇಶಗಳನ್ನು ಮತ್ತು ಪಂಚಾಯತಿಗಳನ್ನು ನಡೆಸಿದ್ದಾರೆ. ಆ ಸಂದರ್ಭಗಳಲ್ಲಿ ಜನರಿಂದ ದೊರಕಿರುವ ಸಲಹೆಗಳ ಆಧಾರದ ಮೇಲೂ ಅಭ್ಯರ್ಥಿಗಳ ಕುರಿತು ಪಕ್ಷ ನಿರ್ಧಾರ ತೆಗೆದುಕೊಂಡಿದೆ. ರೈತರು ಬಿಜೆಪಿ ಕುರಿತು ಖುಷಿಯಾಗಿಲ್ಲ. ಮುಸ್ಲಿಂ ಸಮುದಾಯ ಕೂಡಾ ಬಿಜೆಪಿ ಕುರಿತು ಖುಷಿ ಆಗಿಲ್ಲ. ಕಳೆದ ಬಾರಿ ಬಿಜೆಪಿಯು ಹುಸಿ ಕನಸುಗಳು ಮತ್ತು ಭರವಸೆಯನ್ನು ಬಿತ್ತಿತ್ತು ಎಂದು ಜನರು ಅರ್ಥ ಮಾಡಿಕೊಂಡಿದ್ದಾರೆ' ಎಂದು ಹೇಳಿದ್ದಾರೆ.

ಗೆಲ್ಲುವ ಸಾಮರ್ಥ್ಯವೇ ಮಾನದಂಡ: 'ಎಸ್‌ಪಿ ಮತ್ತು ಆರ್‌ಎಲ್‌ಡಿ ನಡುವಣ ಮೈತ್ರಿಯು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಖಚಿತವಾಗಿ ಪ್ರಭಾವ ಬೀರಲಿದೆ. ಈ ಭಾಗದಲ್ಲಿ ಬಿಜೆಪಿಗೆ ಪ್ರತಿಕೂಲ ವಾತಾವರಣ ಇದೆ. ಅಭ್ಯರ್ಥಿಗಳ ಗೆಲ್ಲುವ ಸಾಮರ್ಥ್ಯವೇ ಟಿಕೆಟ್ ಹಂಚುವ ವಿಚಾರದಲ್ಲಿ ಮೈತ್ರಿಕೂಟ ಹೊಂದಿದ್ದ ಮೊದಲ ಮಾನದಂಡವಾಗಿತ್ತು' ಎಂದು ಎಸ್‌ಪಿ ವಕ್ತಾರ ಅಬ್ಬಾಸ್ ಹೈದರ್ ತಿಳಿಸಿದರು.

2017ರ ಚುನಾವಣೆಯಲ್ಲಿ ಕೈರಾನಾ ಕ್ಷೇತ್ರದಿಂದ ನಾಹಿದ್ ಹಸನ್ ಮತ್ತು ಮೀರಠ್ ಕ್ಷೇತ್ರದಿಂದ ರಫೀಕ್ ಅನ್ಸಾರಿ ಅವರು ಎಸ್‌ಪಿ ಟಿಕೆಟ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು. ಈ ಬಾರಿಯೂ ಆ ಕ್ಷೇತ್ರಗಳಲ್ಲಿ ಅವರನ್ನೇ ಕಣಕ್ಕಿಳಿಸಲಾಗಿದೆ. ಘೋಷಣೆ ಮಾಡಲಾಗಿರುವ 29 ಅಭ್ಯರ್ಥಿಗಳಲ್ಲಿ ಆರ್‌ಎಲ್‌ಡಿಯ ಬಬಿತಾ ದೇವಿ ಏಕೈಕ ಮಹಿಳಾ ಅಭ್ಯರ್ಥಿ ಆಗಿದ್ದಾರೆ. ಅವರು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದ ಬಲ್ದೇವ್‌ನಿಂದ ಸ್ಪರ್ಧಿಸುತ್ತಿದ್ದಾರೆ.

ಗೋವಾ: 40 ಕ್ಷೇತ್ರಗಳಲ್ಲಿ 38ರಲ್ಲಿ ಬಿಜೆಪಿ ಸ್ಪರ್ಧೆ

ಪಣಜಿ (ಪಿಟಿಐ): ಗೋವಾ ವಿಧಾನಸಭೆಯ 40 ಕ್ಷೇತ್ರಗಳ ಪೈಕಿ 38ರಲ್ಲಿ ಬಿಜೆಪಿ ಸ್ಪರ್ಧಿಸಲಿದೆ. ಪಕ್ಷದ ಸಂಸದೀಯ ಸಮಿತಿಯು ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸಿದ ನಂತರ ಇದೇ 16ರ (ಭಾನುವಾರ) ಬಳಿಕ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಶುಕ್ರವಾರ ಹೇಳಿದ್ದಾರೆ.

ಕ್ರಿಶ್ಚಿಯನ್ ಸಮುದಾಯದ ಪ್ರಾಬಲ್ಯ ಇರುವ ಬೆನೌಲಿಂ ಮತ್ತು ನುವೆಂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಮತದಾರರು ಆಯ್ಕೆ ಮಾಡುತ್ತಿಲ್ಲ. ಹಾಗಾಗಿ ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಬಿಜೆಪಿ ಚಿಹ್ನೆಯಡಿ ಸ್ಪರ್ಧಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಲು ಬಿಜೆಪಿ ಸಭೆ ನಡೆಸಿದೆ. ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ, ಗೋವಾ ಚುನಾವಣೆಯ ಉಸ್ತುವಾರಿ ದೇವೇಂದ್ರ ಫಡಣವೀಸ್ ನೇತೃತ್ವದಲ್ಲಿ ಸಭೆ ನಡೆಸಲಾಗುತ್ತಿದೆ. ಗೋವಾ ಬಿಜೆಪಿ ಘಟಕದ ಅಧ್ಯಕ್ಷ ಸದಾನಂದ್ ಶೇಟ್ ತಾನವಾಡೆ, ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಇತರ ಪ್ರಮುಖ ನಾಯಕರು ಈ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಬಿಜೆಪಿ ಮುಖಂಡರ ತಂಡ ಶನಿವಾರ ದೆಹಲಿಗೆ ತೆರಳಿ ಪಕ್ಷದ ಪ್ರಮುಖ ನಾಯಕರ ಜೊತೆ ಸಭೆ ನಡೆಸಲಿದೆ. ಅದರ ಮರುದಿನ ಪಕ್ಷದ ಸಂಸದೀಯ ಮಂಡಳಿಯು ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಿದೆ ಎಂದು ಪ್ರಮೋದ್ ಸಾವಂತ್ ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದ್ದರು.

ಚುನಾವಣೆ ಹತ್ತಿರವಾಗುತ್ತಲೇ ನಾಲ್ವರು ಶಾಸಕರು ಬಿಜೆಪಿ ತೊರೆದಿದ್ದಾರೆ. ಸದ್ಯ ಗೋವಾದ ಆಡಳಿತಾರೂಢ ಬಿಜೆಪಿಯಲ್ಲಿ 23 ಶಾಸಕರಿದ್ದಾರೆ.

2017ರ ಚುನಾವಣೆಯಲ್ಲಿ ಬೆನೌಲಿಂ ಕ್ಷೇತ್ರದಿಂದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದಿಂದ (ಎನ್‌ಸಿಪಿ) ಚರ್ಚಿಲ್ ಅಲೆಮಾವೊ ಶಾಸಕರಾಗಿ ಆಯ್ಕೆ ಆಗಿದ್ದರು. ಕಳೆದ ತಿಂಗಳು ಅವರು ಎನ್‌ಸಿಪಿ ತೊರೆದು ಟಿಎಂಸಿಗೆ ಸೇರ್ಪಡೆ ಆದರು. ನುವೆಂ ಶಾಸಕ ವಿಲ್‌ಫ್ರೆಡ್ ಡೇಸಾ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ಆಯ್ಕೆ ಆಗಿದ್ದರು. ಬಳಿಕ ಬಿಜೆಪಿಗೆ ಸೇರಿದ್ದರು.

ಈ ಬಾರಿ ಚುನಾವಣಾ ಕಣದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಹೊರತುಪಡಿಸಿ ಇತರ ಪಕ್ಷಗಳಾದ ಟಿಎಂಸಿ, ಎಎಪಿ, ಪಕ್ಷಗಳೂ ಇವೆ.

ಪಂಜಾಬ್: 'ಕೈ' ಅಭ್ಯರ್ಥಿಗಳ ಪಟ್ಟಿ ಅಂತಿಮ

ನವದೆಹಲಿ (ಪಿಟಿಐ): ಪಂಜಾಬ್ ವಿಧಾನಸಭೆ ಚುನಾವಣೆಗೆ ತನ್ನ ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಗುರುವಾರವೇ ಸಿದ್ಧಗೊಳಿಸಿದೆ. ಕಾಂಗ್ರೆಸ್ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸುಮಾರು ಐದು ಕ್ಷೇತ್ರಗಳ ಅಭ್ಯರ್ಥಿಗಳ ಕುರಿತು ಸಭೆಯಲ್ಲಿ ಒಮ್ಮತ ಮೂಡದ ಕಾರಣ ಗುರುವಾರವೇ ಅಭ್ಯರ್ಥಿಗಳ ಪಟ್ಟಿಯನ್ನು ಬಹಿರಂಗಪಡಿಸಲಿಲ್ಲ. ಅಂತಿಮ ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿ ಸಮಿತಿಯು ಶುಕ್ರವಾರವೂ ಸಭೆ ನಡೆಸಿದೆ. ಮುಂದಿನ ಒಂದೆರಡು ದಿನಗಳಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಹೇಳಿವೆ.

ಫೆಬ್ರುವರಿ 1ರಂದು ಕೇಂದ್ರ ಬಜೆಟ್

ನವದೆಹಲಿ (ಪಿಟಿಐ): ಸಂಸತ್ತಿನ ಬಜೆಟ್ ಅಧಿವೇಶನವು ಜನವರಿ 31ರಂದು ಆರಂಭವಾಗಲಿದ್ದು, ಏಪ್ರಿಲ್ 8ರವರೆಗೂ ನಡೆಯಲಿದೆ. ಮೊದಲ ದಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಷಣ ಮಾಡುವರು.

ಫೆಬ್ರುವರಿ 1ರಂದು ಕೇಂದ್ರ ಬಜೆಟ್ ಮಂಡನೆಯಾಗಲಿದೆ. ರಾಷ್ಟ್ರಪತಿ ಭಾಷಣದ ನಂತರ ಮೊದಲ ದಿನವೇ ಆರ್ಥಿಕ ಸಮೀಕ್ಷೆಯನ್ನು ಸರ್ಕಾರ ಮಂಡಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಸಂಸದೀಯ ವ್ಯವಹಾರಗಳ ಕುರಿತ ಸಂಪುಟ ಸಮಿತಿ ಶಿಫಾರಸು ಉಲ್ಲೇಖಿಸಿ ಮೂಲಗಳು ಈ ಮಾಹಿತಿ ನೀಡಿವೆ. ಅಧಿವೇಶನದ ಮೊದಲ ಭಾಗ ಫೆಬ್ರುವರಿ 11ರಂದು ಅಂತ್ಯಗೊಳ್ಳಲಿದೆ.

ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ, ಪಂಜಾಬ್ ಮತ್ತು ಮಣಿಪುರ ವಿಧಾನಸಭಾ ಚುನಾವಣೆಯ ಫಲಿತಾಂಶ ಮಾರ್ಚ್ 10ರಂದು ಪ್ರಕಟಗೊಳ್ಳಲಿದೆ. ಇದಾದ ನಂತರ ಅಂದರೆ ಮಾರ್ಚ್ 14ರಂದು ಮುಂದುವರಿದ ಅಧಿವೇಶನ ಆರಂಭವಾಗಲಿದ್ದು, ಏಪ್ರಿಲ್ 8ರಂದು ಮುಕ್ತಾಯವಾಗಲಿದೆ.

ಕೋವಿಡ್ ಸೋಂಕು ಪ್ರಕರಣಗಳ ತೀವ್ರ ಏರಿಕೆ ಹಿನ್ನೆಲೆಯಲ್ಲಿ ಸಂಸದರು ಮತ್ತು ಸಂಸತ್ತಿಗೆ ಪ್ರವೇಶ ಪಡೆಯುವ ಇತರರು ಕಡ್ಡಾಯವಾಗಿ ಆರ್‌ಟಿಪಿಸಿಆರ್ ವರದಿ ಹೊಂದಿರಬೇಕು ಹಾಗೂ ಲಸಿಕೆ ಪಡೆದಿರಬೇಕು ಎಂದು ಹೇಳಿವೆ.

ಸಕಾಲಿಕ ಕ್ರಮ: ಬಾಂಬ್ ನಿಷ್ಕ್ರಿಯಗೊಳಿಸಿದ ಪೊಲೀಸರು

ದೆಹಲಿ: ಆರ್‌ಡಿಎಕ್ಸ್ ಲೇಪಿತ ಐಇಡಿ ಪತ್ತೆ



ದೆಹಲಿಯ ಘಜಿಪುರ್‌ನಲ್ಲಿ ಬ್ಯಾಗ್‌ನಲ್ಲಿ ಪತ್ತೆಯಾಗಿದ್ದ ಸುಧಾರಿತ ಸ್ಫೋಟಕ ಸಾಧನ ನಿಷ್ಕ್ರಿಯಗೊಳಿಸಲಾಯಿತು – ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಇಲ್ಲಿನ ಘಾಜಿಪುರ್‌ನ ಹೂವಿನ ಮಾರುಕಟ್ಟೆಯಲ್ಲಿ, ಆರ್‌ಡಿಎಕ್ಸ್ ಲೇಪಿತವಾಗಿದ್ದ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಇದ್ದ ಬ್ಯಾಗ್ ಪತ್ತೆಯಾಗಿದೆ. ಬಳಿಕ ಅದನ್ನು ನಿಷ್ಕ್ರಿಯಗೊಳಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐರನ್ ಬಾಕ್ಸ್‌ನಲ್ಲಿ ಅಳವಡಿಸಿದ್ದ ಈ ಐಇಡಿ ಅನ್ನು ಕಪ್ಪು ಬಣ್ಣದ ಬ್ಯಾಗ್‌ನಲ್ಲಿ ಇಡಲಾಗಿತ್ತು. ರಾಷ್ಟ್ರ ರಾಜಧಾನಿಯಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಸಿದ್ಧತೆ ನಡೆದಿರುವಾಗಲೇ ಈ ಬೆಳವಣಿಗೆ ನಡೆದಿದೆ. ಇದರ ಬೆನ್ನಲ್ಲೇ ಭದ್ರತೆಯನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ.

ಮೇಲ್ನೋಟಕ್ಕೆ ಇದು ಆರ್‌ಡಿಎಕ್ಸ್ ಮತ್ತು ಅಮೋನಿಯಂ ನೈಟ್ರೇಟ್ ಮಿಶ್ರಣ ಮಾಡಿದಂತಿದೆ. ಇದು, ಒಟ್ಟು 3. ಕೆ.ಜಿ ತೂಕವಿತ್ತು ಎಂದು ಎನ್‌ಎಸ್‌ಜಿ ಡಿಜಿ ಎಂ.ಎ.ಗಣಪತಿ ತಿಳಿಸಿದರು.

ಶಂಕಾಸ್ಪದ ಪರಿಕರಗಳ ಬ್ಯಾಗ್ ಇರುವ ಬಗ್ಗೆ ಮಾಹಿತಿ ಬಂದಿತು. ಬಾಂಬ್ ಪತ್ತೆ ತಜ್ಞರ ಜೊತೆಗೂಡಿ ಸ್ಥಳಕ್ಕೆ ಧಾವಿಸಿದ್ದೆವು. ಅಗ್ನಿಶಾಮಕ ಸೇವೆಯ ಸಿಬ್ಬಂದಿ ಧಾವಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪತ್ತೆಯಾದ ಐಇಡಿ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ಹೂವಿನ ಮಾರುಕಟ್ಟೆಯ ಮುಖ್ಯದ್ವಾರದ ಬಳಿ ಈ ಬಾಂಬ್ ಅನ್ನು ಇಡಲಾಗಿತ್ತು. ಬಹುಶಃ ಟೈಮ್ ಹೊಂದಿಸಿರುವ ಶಂಕೆ ಇದೆ ಎಂದು ತಿಳಿಸಿದರು.

ಸ್ಫೋಟಕ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಸಮೀಪದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಗಳನ್ನು ಆಧರಿಸಿ ಆರೋಪಿ ಪತ್ತೆಗೆ ಕ್ರಮವಹಿಸಲಾಗಿದೆ ಎಂದರು.

5 ಕೆ.ಜಿ ತೂಕದ ಐಇಡಿ ವಶಕ್ಕೆ

ಅಮೃತಸರ/ಚಂಡಿಗಡ (ಪಿಟಿಐ): ಪಾಕಿಸ್ತಾನದಿಂದ ಭಾರತಕ್ಕೆ ಕಳ್ಳಸಾಗಣೆ ಮಾಡಲಾಗಿದ್ದ ಐದು ಕೆ.ಜಿ. ತೂಕದ ಸುಧಾರಿತ ಸ್ಫೋಟಕ ಸಾಧನವಿದ್ದ (ಐಇಡಿ) ಬ್ಯಾಗ್ ಗಡಿಭಾಗಕ್ಕೆ ಹೊಂದಿಕೊಂಡ ಗ್ರಾಮದ ಬಳಿ ಪತ್ತೆಯಾಗಿದೆ.

ಅಲ್ಲದೆ, ₹ 1 ಲಕ್ಷ ನಗದು ಅನ್ನು ಸುತ್ತಿಡಲಾಗಿತ್ತು. ಇವುಗಳಿದ್ದ ಬ್ಯಾಗ್ ಅಟ್ಟರಿ–ಬಚಿವಿಂಡ್ ರಸ್ತೆಯಲ್ಲಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಂಜಾಬ್ ಪೊಲೀಸ್‌ನ ವಿಶೇಷ ಕಾರ್ಯಪಡೆಯ ಸಿಬ್ಬಂದಿ ಬ್ಯಾಗ್ ಜಪ್ತಿ ಮಾಡಿದ್ದು, ಲಭ್ಯ ಮಾಹಿತಿ ಆಧರಿಸಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಅತ್ಯಾಚಾರ ಪ್ರಕರಣ: ಬಿಷಪ್ ಫ್ರಾಂಕೊ ಮುಳಯ್ಕಲ್ ಖುಲಾಸೆ

ತಿರುವನಂತಪುರ: ಕ್ರೈಸ್ತ ಸನ್ಯಾಸಿನಿ ಮೇಲಿನ ಅತ್ಯಾಚಾರ ಪ್ರಕರಣದಿಂದ ಬಿಷಪ್ ಫ್ರಾಂಕೊ ಮುಳಯ್ಕಲ್ ಅವರನ್ನು ಕೇರಳದ ಕೋಟ್ಟಯಂನ ನ್ಯಾಯಾಲಯ ಶುಕ್ರವಾರ ಖುಲಾಸೆಗೊಳಿಸಿದೆ.

2014-16ರ ಅವಧಿಯಲ್ಲಿ ಬಿಷಪ್ ತನ್ನ ಮೇಲೆ 13 ಬಾರಿ ಅತ್ಯಾಚಾರ ಎಸಗಿದ್ದಾರೆ ಎಂದು ಕ್ರೈಸ್ತ ಸನ್ಯಾಸಿನಿಯೊಬ್ಬರು ಆರೋಪಿಸಿ ದೂರು ನೀಡಿದ್ದರು.

ಕೋಟ್ಟಯಂ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಮುಳಯ್ಕಲ್ (57) ಅವರನ್ನು ಈ ಪ್ರಕರಣದಿಂದ ಖುಲಾಸೆಗೊಳಿಸಿತು. ನ್ಯಾಯಾಲಯದ ಕೊಠಡಿಯಲ್ಲಿ ಹಾಜರಿದ್ದ ಮುಳಯ್ಕಲ್ ಭಾವುಕರಾಗಿ ತನ್ನ ಪರ ವಕೀಲರನ್ನು ಅಪ್ಪಿಕೊಂಡರು. ನ್ಯಾಯಾಲಯದ ಆವರಣದಲ್ಲಿ ಸಿಹಿ ಹಂಚಿ ಸಂಭ್ರಮಿಸಿದ ಮುಳಯ್ಕಲ್ ಅವರ ಬೆಂಬಲಿಗರು, ಇದೊಂದು ಹುಸಿ ಪ್ರಕರಣವಾಗಿದ್ದು, ಸಾಕ್ಷ್ಯಾಧಾರಗಳಿಲ್ಲ ಎಂದು ದೂರಿದರು.

'ನ್ಯಾಯಕ್ಕಾಗಿ ಸಾಯುವವರೆಗೂ ಹೋರಾಡುತ್ತೇವೆ': 'ನ್ಯಾಯಾಲಯದ ಈ ತೀರ್ಪು ನಂಬಲಾಗುತ್ತಿಲ್ಲ. ನಮ್ಮ ಸಹವರ್ತಿ ಸನ್ಯಾಸಿನಿಗೆ ಸಿಗಬೇಕಾದ ನ್ಯಾಯಕ್ಕಾಗಿ ನಾವು ಸಾಯುವವರೆಗೂ ಹೋರಾಟ ಕೈಬಿಡುವುದಿಲ್ಲ' ಎಂದು ಕೇರಳದ ಕ್ರೈಸ್ತ ಸನ್ಯಾಸಿನಿ ಅನುಪಮಾ ಹೇಳಿದ್ದಾರೆ. ಅವರಿಗೆ ಕೇರಳದ ಸನ್ಯಾಸಿನಿಯರು ಬೆಂಬಲ ಸೂಚಿಸಿದ್ದಾರೆ.

ಸಂತ್ರಸ್ತೆಗೆ ಎನ್‌ಸಿಡಬ್ಲ್ಯು ಸಲಹೆ: ಈ ಆದೇಶದ ವಿರುದ್ಧ ಸಂತ್ರಸ್ತ ಮಹಿಳೆಯು ಹೈಕೋರ್ಟ್ ಮೊರೆ ಹೋಗಬೇಕು ಎಂದು ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮಾ ಹೇಳಿದ್ದಾರೆ.

ಕವಿ ಚೆನ್ನವೀರ ಕಣವಿಗೆ ಕೋವಿಡ್



ಧಾರವಾಡ: ಹಿರಿಯ ಕವಿ ಡಾ. ಚೆನ್ನವೀರ ಕಣವಿ ಅವರಿಗೆ ಕೋವಿಡ್ ದೃಢಪಟ್ಟಿದೆ.

ಜ್ವರದಿಂದ ಬಳಲುತ್ತಿದ್ದ ಅವರನ್ನು ಇಲ್ಲಿನ ಎಸ್‌ಡಿಎಂ ಆಸ್ಪತ್ರೆಗೆ ಬುಧವಾರ ದಾಖಲಿಸಲಾಗಿತ್ತು. ಗುರುವಾರ ಅವರಿಗೆ ಕೋವಿಡ್ ತಪಾಸಣೆ ನಡೆಸಲಾಗಿತ್ತು. ಸೋಂಕು ಇರುವುದು ದೃಢಪಟ್ಟಿದೆ.

'ಸಾಮಾನ್ಯ ತಪಾಸಣೆಗಾಗಿ ಆಸ್ಪತ್ರೆಗೆ ಬಂದಿದ್ದೆವು. ಅವರ ಆರೋಗ್ಯದಲ್ಲಿ ಅಂತಹ ವ್ಯತ್ಯಾಸವೇನು ಕಂಡುಬಂದಿಲ್ಲ. ವೈದ್ಯರು ನಿಗಾ ವಹಿಸಿದ್ದಾರೆ' ಎಂದು ಅವರ ಪುತ್ರ ಪ್ರಿಯದರ್ಶನ ಕಣವಿ ತಿಳಿಸಿದರು.

ಪಿಎಸ್‌ಐಗೆ ಜಾಮೀನು: ಸಂಭ್ರಮಾಚರಣೆ

ಹೊಸಪೇಟೆ (ವಿಜಯನಗರ): 'ಲಂಚ ಪ್ರಕರಣದಲ್ಲಿ ಜೈಲು ಸೇರಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಕ್ಕೆ ಸಂಭ್ರಮಿಸಿ ಕೋವಿಡ್ ನಿಯಮ ಉಲ್ಲಂಘಿಸಿದ ಪಿಎಸ್‌ಐ ನಾಗಪ್ಪ ಸೇರಿದಂತೆ 13 ಜನರ ವಿರುದ್ಧ ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ತಿಳಿಸಿದ್ದಾರೆ.

'ಡಿ.13ರಂದು ಅಕ್ರಮ ಮರಳು ಸಾಗಾಟ ಪ್ರಕರಣ ಕೈಬಿಡಲು ಕೂಡ್ಲಿಗಿ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ. ವೆಂಕಟೇಶ ನಾಯ್ಕ ಅವರಿಂದ ₹2.5 ಲಕ್ಷ ಲಂಚ ಪಡೆಯುತ್ತಿದ್ದಾಗ ಕೊಟ್ಟೂರು ಪೊಲೀಸ್ ಠಾಣೆಯ ಸಿಪಿಐ, ಪಿಎಸ್‌ಐ ನಾಗಪ್ಪ ಹಾಗೂ ನಾಲ್ವರು ಸಿಬ್ಬಂದಿ ಎಸಿಬಿ ಬಲೆಗೆ ಬಿದ್ದಿದ್ದರು. ಬಳಿಕ ನಾಗಪ್ಪ ಜೈಲು ಸೇರಿದ್ದರು. ಇಲಾಖೆ ಅವರನ್ನು ಕೆಲಸದಿಂದ ಅಮಾನತುಗೊಳಿಸಿತ್ತು. ಜಾಮೀನಿನ ಮೇಲೆ ಹೊರಬಂದ ನಾಗಪ್ಪ ಮತ್ತು ಅವರ ಬೆಂಬಲಿಗರು ಕೊಟ್ಟೂರು ಪಟ್ಟಣದಲ್ಲಿ ಗುರುವಾರ ರಾತ್ರಿ ಕರ್ಫ್ಯೂ ಉಲ್ಲಂಘಿಸಿ, ಡೋಲು ಬಾರಿಸಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದ್ದರು. ಯಾರೊಬ್ಬರೂ ಮಾಸ್ಕ್ ಧರಿಸಿರಲಿಲ್ಲ. ಅಂತರ ಕಾಯ್ದುಕೊಂಡಿರಲಿಲ್ಲ' ಎಂದು ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ಹಂಚಿಕೊಂಡರು.


ರಾಜ್ಯದಲ್ಲಿ ಸಕ್ರಿಯ ಪ್ರಕರಣ: 1.41 ಲಕ್ಷಕ್ಕೆ ಏರಿಕೆ

28,723 ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. ಬೆಂಗಳೂರಿನಲ್ಲಿ 20,121 ಮಂದಿ ಸೇರಿದಂತೆ ರಾಜ್ಯದಲ್ಲಿ 28,723 ಮಂದಿ ಕೊರೊನಾ ಸೋಂಕಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 2.21 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ ಒಂದು ದಿನದ ಅವಧಿಯಲ್ಲಿ ನಡೆಸಲಾದ ಗರಿಷ್ಠ ಪರೀಕ್ಷೆಗಳು ಇವಾಗಿವೆ ಸೋಂಕು ದೃಢ ಪ್ರಮಾಣ ಶೇ 12.98 ರಷ್ಟು ವರದಿಯಾಗಿದೆ.



ಈ ತಿಂಗಳು 14 ದಿನಗಳಲ್ಲಿ 1,45,901 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 31.53 ಲಕ್ಷಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳು ಎಂಟು ತಿಂಗಳ ಬಳಿಕ 20 ಸಾವಿರ ದಾಟಿದೆ. 25 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿಗೆ ತಲುಪಿದೆ. ಮೈಸೂರಿನಲ್ಲಿ 803, ತುಮಕೂರಿನಲ್ಲಿ 796, ದಕ್ಷಿಣ ಕನ್ನಡದಲ್ಲಿ 639, ಮಂಡ್ಯದಲ್ಲಿ 554 ಹಾಗೂ ಕೋಲಾರದಲ್ಲಿ 502 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.41 ಲಕ್ಷ) ಮುಟ್ಟಿದೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ 1.09 ಲಕ್ಷಕ್ಕೆ ತಲುಪಿದೆ. ಸೋಂಕಿತರಲ್ಲಿ ಶೇ 93 ರಷ್ಟು ಮಂದಿ ಮನೆ ಆರೈಕೆಗೆ ಒಳಗಾದರೆ, ಶೇ 6 ರಷ್ಟು ಮಂದಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಶೇ 1 ರಷ್ಟು ಮಂದಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಪ್ರತ್ಯೇಕವಾಸಕ್ಕೆ ಒಳಗಾಗುತ್ತಿದ್ದಾರೆ.

ಸೋಂಕಿತರಲ್ಲಿ 3,105 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.73 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಏಳು ಮಂದಿ, ಬೆಂಗಳೂರು ಗ್ರಾಮಾಂತರದಲ್ಲಿ ಮೂವರು, ಮೈಸೂರಿನಲ್ಲಿ ಇಬ್ಬರು, ಮಂಡ್ಯ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.04 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,411ಕ್ಕೆ ಏರಿಕೆಯಾಗಿದೆ.

ರಾಜ್ಯದ ವಿವಿಧೆಡೆ ಕೋವಿಡ್

- ಮೇಕೆದಾಟು ಪಾದಯಾತ್ರೆಯ ಬಂದೋಬಸ್ತ್‌ಗೆ ತೆರಳಿದ್ದ ಕೋಲಾರ ಜಿಲ್ಲೆಯ ಆರು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಸೇರಿದಂತೆ 25 ಪೊಲೀಸರಿಗೆ ಶುಕ್ರವಾರ ಕೋವಿಡ್ ದೃಢಪಟ್ಟಿದೆ.
- ಕಲಬುರಗಿಯ ಕೋಟನೂರ (ಡಿ) ಬಳಿ ಇರುವ ಕೇಂದ್ರೀಯ ವಿದ್ಯಾಲಯದ ಏಳು ಶಿಕ್ಷಕರು ಹಾಗೂ ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ.
- ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ 15 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ಇರುವುದು ಗುರುವಾರ ರಾತ್ರಿ ದೃಢಪಟ್ಟಿದೆ.
- ಚಿತ್ರದುರ್ಗದ ವಿವೇಕಾನಂದ ಸ್ಕೂಲ್ ಆಫ್ ನರ್ಸಿಂಗ್ ಹಾಸ್ಟೆಲ್‌ನ 22 ವಿದ್ಯಾರ್ಥಿಗಳಲ್ಲಿ ಹಾಗೂ ಅಂಚೆ ಇಲಾಖೆಯ ಪ್ರಧಾನ ಕಚೇರಿಯ 9 ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ.
- ವಿಜಯನಗರ ಜಿಲ್ಲೆಯ ಹೊಸಪೇಟೆ ಹೊರವಲಯದ ಕಿತ್ತೂರು ರಾಣಿ ಚನ್ನಮ್ಮ ಶಾಲೆಯ 22 ವಿದ್ಯಾರ್ಥಿಗಳು, 6 ಜನ ಶಿಕ್ಷಕರಿಗೆ ಕೋವಿಡ್ ದೃಢಪಟ್ಟಿದ್ದು, ಶಾಲೆಯನ್ನು ಸೀಲ್‌ಡೌನ್ ಮಾಡಲಾಗಿದೆ.

ಕಾರ್ಮಿಕ ಕುಟುಂಬ ಅತಂತ್ರ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಕೊಡಗು): 'ಸಮೀಪದ ಪಾಲಿಬೆಟ್ಟದ ಖಾಸಗಿ ಕಾಫಿ ಎಸ್ಟೇಟ್‌ವೊಂದರ ಕಾರ್ಮಿಕ ಕುಟುಂಬವು ವಾಸಿಸುತ್ತಿರುವ ಮನೆ ಸುತ್ತಲೂ ಅದೇ ತೋಟದ ಮಾಲೀಕರು ಕಂದಕ ತೆಗೆದು ತೊಂದರೆ ನೀಡುತ್ತಿದ್ದಾರೆ' ಎಂಬ ಆರೋಪ ಕೇಳಿಬಂದಿದೆ.

ತೊಂದರೆಗೆ ಒಳಗಾಗಿರುವ ಸುಬ್ರಮಣಿ ಅವರು 25 ವರ್ಷದಿಂದ ಎಸ್ಟೇಟ್‌ನಲ್ಲಿ ವಾಹನ ಚಾಲಕರಾಗಿದ್ದರು ಎನ್ನಲಾಗಿದೆ.

'ನಾನು ಹಾಗೂ ಪತ್ನಿ ಅಮುದಾ, ಪುತ್ರಿ ಅನಿತಾ ಮನೆಯಲ್ಲಿದ್ದಾಗ ರಾತ್ರಿ ವೇಳೆ ಮಾಲೀಕರು ಮನೆಗೆ ಬೀಗ ಹಾಕಿ ಕಂದಕ ತೆಗೆದಿದ್ದಾರೆ. ಏಣಿ ಸಹಾಯದಿಂದ ಓಡಾಡುತ್ತಿದ್ದೇವೆ. ಮಣ್ಣು ತೆಗೆದಿರುವುದರಿಂದ ಮನೆ ಬೀಳುವ ಸ್ಥಿತಿಯಲ್ಲಿದೆ. ಅನಾರೋಗ್ಯ ಪೀಡಿತ ಪತ್ನಿಗೂ ಹೊರಗೆ ಬರಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಮಗಳೊಂದಿಗೆ ತಮ್ಮನ್ನೂ ಕೆಲಸದಿಂದ ವಜಾಗೊಳಿಸಿದ ಕಾರಣಕ್ಕೆ ಅವರು, 'ಸೇವೆಯನ್ನು ಪರಿಗಣಿಸಿ ಮಾಲೀಕರು, ಭದ್ರತಾ ಹಣ, ಇತರೆ ಸೌಲಭ್ಯ ಕಲ್ಪಿಸಿಲ್ಲ' ಎಂದು ನ್ಯಾಯಾಲಯದ ಮೊರೆ ಹೋಗಿದ್ದಾರೆ. 'ಅದೇ ಕಾರಣದಿಂದ ಮನೆಯ ಸುತ್ತ ಕಂದಕ ಕೊರೆದು ಮಾಲೀಕರು ನೀರು, ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ' ಎಂದು ದೂರಿದ್ದಾರೆ.

'ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಹೆಚ್ಚಿನ ವಿವರ ನೀಡಲು ಸಾಧ್ಯವಿಲ್ಲ. ಆದರೆ, ರಸ್ತೆ, ವಿದ್ಯುತ್ ಹಾಗೂ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಮಾಲೀಕರಿಗೆ ಸೂಚಿಸಿ ನೋಟಿಸ್ ನೀಡಲಾಗಿದೆ' ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಅನಿಲ್ ಬಾಲಚಂದ್ರ ಬಗಟಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.




ಮನೆಯ ಸುತ್ತ ಕಂದಕ ತೆಗೆದಿರುವುದನ್ನು ತೋರಿಸುತ್ತಿರುವ ಕಾರ್ಮಿಕರ ಕುಟುಂಬ

> ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಮನೆಯ ವಿಸ್ತರಣೆಗೆ ಕಂದಕ ತೆಗೆಯಲಾಗಿದೆ ಎಂದು ಮಾಲೀಕರು ಹೇಳಿದ್ದಾರೆ. ಕಾರ್ಮಿಕ ಕುಟುಂಬಕ್ಕೆ ತಕ್ಷಣವೇ ಮೂಲಸೌಲಭ್ಯ ಕಲ್ಪಿಸಲು ಸೂಚಿಸಿದ್ದೇನೆ
>
> **ಅನಿಲ್ ಬಾಲಚಂದ್ರ ಬಗಟಿ,** ಜಿಲ್ಲಾ ಕಾರ್ಮಿಕ ಅಧಿಕಾರಿ

ಸಂಕ್ರಾಂತಿ: ಆತ್ಮದರ್ಶನದ ಕ್ರಾಂತಿ

• ಎಸ್. ಸೂರ್ಯಪ್ರಕಾಶ ಪಂಡಿತ್



ಸೂರ್ಯ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವುದನ್ನೇ 'ಸಂಕ್ರಾಂತಿ' ಎಂದು ಕರೆಯುವುದು. ಈ ಎಣಿಕೆಯಂತೆ ಹನ್ನೆರಡು ಸಂಕ್ರಾಂತಿಗಳು ಒಂದು ವರ್ಷದಲ್ಲಿ ಉಂಟಾಗುತ್ತವೆ. ಆದರೆ ಮಕರಸಂಕ್ರಾಂತಿಯನ್ನೇ ವಿಶೇಷವಾಗಿ ಆಚರಿಸಲು ಕಾರಣ ಎಂದರೆ ಸೂರ್ಯನು ತನ್ನ ಸಂಚಾರವನ್ನು ದಕ್ಷಿಣದಿಕ್ಕಿನಿಂದ ಉತ್ತರದ ಕಡೆಗೆ ತಿರುಗಿಸಿಕೊಳ್ಳುತ್ತಾನೆ ಎನ್ನುವುದು.

ಸೂರ್ಯ ನಮ್ಮ ಜೀವನವನ್ನು ಪ್ರಭಾವಿಸುವ ಪ್ರತ್ಯಕ್ಷ ದೈವ. ಹೀಗಾಗಿಯೇ ಅವನ ಆರಾಧನೆಯನ್ನು ನಮ್ಮ ಸಂಸ್ಕೃತಿಯೂ ರೂಢಿಸಿಕೊಂಡಿತು. ನಮಗೆ ಒಳಿತು ಮಾಡುವವರನ್ನು ಆರಾಧಿಸುವುದು, ಅವರ ಇರುವಿಕೆಯನ್ನೇ ಸಂಭ್ರಮಿಸುವುದು – ಇಂಥವೆಲ್ಲ ಸಂಸ್ಕೃತಿಯ ರೂಢಿಗಳೇ ಅಲ್ಲವೆ? ಹೆಚ್ಚು ಕಡಿಮೆ ಎಲ್ಲ ಪ್ರಾಚೀನ ಸಂಸ್ಕೃತಿಗಳೂ ಸೂರ್ಯನನ್ನು ಆರಾಧಿಸುತ್ತ ಬಂದಿವೆ.

ವೇದಗಳಲ್ಲಿರುವ ಸೂರ್ಯನ ಕಲ್ಪನೆಯ ವಿವರಗಳು ಸೂರ್ಯತತ್ತ್ವದ ಹಲವು ಆಯಾಮಗಳನ್ನು ಸೂಚಿಸುತ್ತವೆ. ಸೂರ್ಯನ ಹೆಸರುಗಳಲ್ಲೂ ಈ ತತ್ತ್ವದ ಮಹತ್ವ ಎದ್ದುಕಾಣುವುದು. ಸೂರ್ಯನಿಗೆ ಮೊದಲಿಗೆ ಇಬ್ಬರು ಹೆಂಡತಿಯರಿದ್ದರಂತೆ; ಉಷಸ್ಸು ಮತ್ತು ಶರಣ್ಯು. ಸೂರ್ಯೋದಯದ ಪೂರ್ವಕಾಲವೇ ಉಷಸ್ಸು. ಇವಳನ್ನು ಪ್ರೇಮಿಯಾಗಿ ಸೂರ್ಯ ಹಿಂಬಾಲಿಸಿ ಬರುತ್ತಾನಂತೆ; ವೇದಗಳಲ್ಲಿಯ ಉಷಸ್ಸಿನ ವರ್ಣನೆಯ ಈ ಭಾಗಗಳು ತುಂಬ ಕಾವ್ಯಮಯವಾಗಿವೆ. ಶರಣ್ಯು – ಇವಳೇ ದ್ವೌ, ಸಂಜ್ಞಾ, ರಾಜ್ಞಿ; ಆಕಾಶಸ್ವರೂಪಿಯಾದವಳು. ನಿಕ್ಷುಭಾ ಎಂಬುವಳು ಸೂರ್ಯನಿಗೆ ಮೂರನೆಯ ಹೆಂಡತಿಯಾದಳು; ಇವಳೇ 'ಛಾಯಾ' ಎಂಬ ಹೆಸರನ್ನು ಪಡೆದಳು. ಇವಳು ಭೂಮಿಗೂ ಸಂಕೇತ; ಅನ್ನ, ಅಮೃತ, ಔಷಧಗಳನ್ನು ಸೃಜಿಸುವವಳು ಇವಳೇ.

ಸೂರ್ಯನ ರಥಕ್ಕೆ ಒಂದೇ ಕುದುರೆ ಎಂದೂ ವರ್ಣನೆಯಿದೆ. ಇದು ಬೆಳಕು, ಎಂದರೆ ಜ್ಞಾನದ ಅದ್ವೈತವನ್ನು ಸೂಚಿಸುವಂತಿದೆ. ಬ್ರಾಹ್ಮಣಗಳಲ್ಲಿ, ಉಪನಿಷತ್ತುಗಳಲ್ಲಿ ಆದಿತ್ಯನನ್ನು ಬ್ರಹ್ಮ ಎನ್ನಲಾಗಿದೆ. ಆದಿತ್ಯ ಎಂಬುದು ಸೂರ್ಯನ ಇನ್ನೊಂದು ಹೆಸರು ಅಲ್ಲವೆ? ಸೂರ್ಯನ ರಥಕ್ಕೆ ಏಳು ಕುದುರೆಗಳು ಎಂಬ ಕಲ್ಪನೆಯೂ ಇದೆ. ಏಳು ಎಂಬುದು ಕಿರಣಗಳ ಸಂಕೇತ; ವಾರಗಳಿಗೂ ಸಂಕೇತ; ರಥದ ಚಕ್ರಗಳಿಗಿರುವ ಹನ್ನೆರಡು ಅರಗಳು ಸಂವತ್ಸರವನ್ನು ಪ್ರತಿನಿಧಿಸುತ್ತವೆ. ಸೂರ್ಯ ಎಂದರೆ ಕಾಲ, ಎಂದರೆ ಸೃಷ್ಟಿಯ ಯಾನವನ್ನು ಸಂಕೇತಿಸುವ ದೇವತೆ. ಏಳು ಕುದುರೆಗಳು ಏಳು ಛಂದಸ್ಸುಗಳನ್ನು ಸೂಚಿಸುತ್ತದೆ ಎಂದೂ ಅರ್ಥಮಾಡುತ್ತಾರೆ. ಏಳು ಛಂದಸ್ಸುಗಳಲ್ಲಿಯೇ ವೇದ, ಎಂದರೆ ಅರಿವು ಹರಡಿಕೊಂಡಿರುವುದು. ಸೂರ್ಯನ ಎಡ–ಬಲಭಾಗದಲ್ಲಿ ಇಬ್ಬರು ಪರಿವಾರದೇವತೆಗಳಿದ್ದಾರೆ. ಬಲಭಾಗದಲ್ಲಿರುವವನು ಲೇಖನಿಯನ್ನೂ ಮಸಿಕುಡಿಕೆಯನ್ನೂ ಹಿಡಿದಿರುವಂತೆಯೂ, ಎಡಭಾಗದಲ್ಲಿರುವವನು ಖಡ್ಗವನ್ನು ಹಿಡಿದಿರುವಂತೆಯೂ ತೋರಿಸಲಾಗುತ್ತದೆ. ಜ್ಞಾನ ಮತ್ತು ಬಲ, ಬುದ್ಧಿ ಮತ್ತು ಕ್ರಿಯಾಶೀಲತೆಯ ಸಮನ್ವಯವನ್ನು ಇಲ್ಲಿ ಕಾಣಬಹುದು. ಒಟ್ಟಿನಲ್ಲಿ, ಸೂರ್ಯನಿರದ ನಮ್ಮ ಜೀವನವನ್ನು ಊಹಿಸಿಕೊಳ್ಳುವುದೂ ಅಸಾಧ್ಯ.

ಸೂರ್ಯನನ್ನು ವೇದಗಳಲ್ಲಿ ಒಬ್ಬ ವೈದ್ಯನಂತೆಯೂ ಸ್ತುತಿಸಲಾಗಿದೆ; ಎಲ್ಲ ರೋಗಗಳನ್ನೂ ಪರಿಹರಿಸಬಲ್ಲವನು ಎಂದು ಕೊಂಡಾಡಿದ್ದಾರೆ. ಸೂರ್ಯನ ಬೆಳಕು ಇಲ್ಲದಿದ್ದರೆ ನಮ್ಮ ಅಸ್ತಿತ್ವವೇ ಇರದು ಎಂಬ ವಾಸ್ತವವನ್ನು ಗ್ರಹಿಸಿದರೂ ವೇದಗಳ ಈ ಸಾಂಕೇತಿಕತೆ ಮನವರಿಕೆಯಾದೀತು. ನಮಗೆ ಇಂದು ಸೂರ್ಯ ಮುಖ್ಯವಾಗಿ ಒದಗಬೇಕಾದದ್ದು ಸರ್ವರೋಗನಿವಾರಕನ ಸ್ವರೂಪದಲ್ಲಿಯೇ ಹೌದಲ್ಲವೆ? ಗಾಯತ್ರೀಮಂತ್ರದ ಉದ್ದೇಶವೇ ಸೂರ್ಯನ ಪ್ರಾರ್ಥನೆ; ಒಳ್ಳೆಯ ಬುದ್ಧಿಯನ್ನು ನಮ್ಮಲ್ಲಿ ಪ್ರಚೋದಿಸು – ಎಂಬುದು ಅದರ ತಾತ್ಪರ್ಯ. ಇಂದು ನಮಗೆ ಒದಗಿರುವ ಸಂಕಷ್ಟದಿಂದ ಪಾರಾಗಲು ನಮ್ಮ ಮನಸ್ಸು–ಬುದ್ಧಿ–ದೇಹಗಳು ಸರಿಯಾದ ಕ್ರಮದಲ್ಲಿ ಕೆಲಸಮಾಡಬೇಕು; ಈ ತಿಳಿವಳಿಕೆ ಹರಳುಗಟ್ಟುವುದೇ ಸೂರ್ಯನ ಅನುಗ್ರಹದಿಂದ. ಉತ್ತರದಿಕ್ಕಿನ ಕಡೆಗೆ ಸೂರ್ಯನ ಪಯಣ ಎಂದರೆ ದೇವಯಾನದ ಕಡೆಗೆ ಪಯಣ. ದೈವತ್ವ ಎಂದರೆ ನಮ್ಮ ಬಲವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದಷ್ಟೆ. ವ್ಯಷ್ಟಿ–ಸಮಷ್ಟಿಗಳ ಆರೋಗ್ಯ–ಆನಂದಗಳು ನಮ್ಮ ಭಾವ–ಬುದ್ಧಿಗಳ ಬೆಳಕಿನಲ್ಲಿ ಸೃಷ್ಟಿಯಾಗುವಂಥ ಆತ್ಮತತ್ತ್ವಗಳು ಎಂಬ ಮಹಾದರ್ಶನವನ್ನು ಇಂದಿನ ಸಂಕ್ರಾಂತಿ ನಮಗೆ ಒದಗಿಸುವ ಕ್ರಾಂತದರ್ಶನವಾಗಲಿ. ಎಳ್ಳು–ಬೆಲ್ಲವನ್ನು ತಿಂದು ಒಳ್ಳೆಯ ಮಾತನ್ನು ಆಡೋಣ. ಮಾತು ನಮ್ಮ ಜೀವನದ ಮಹಾಪಥವೇ ಹೌದಲ್ಲವೆ? ದಾರಿ ಚೆನ್ನಾಗಿದ್ದರೆ – ಪ್ರಯಾಣವೂ ಸೊಗಸು, ಗುರಿಯೂ ಸುಲಭ.

ರಾಜಕೀಯ ಸಮಾವೇಶ, ರ್‍ಯಾಲಿಗೆ ಹೈಕೋರ್ಟ್ ಅಂಕುಶ

ಒಂದನೇ ಪುಟದಿಂದ

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆರ್. ಸುಬ್ರಹ್ಮಣ್ಯ, 'ರಾಜ್ಯದಲ್ಲಿ ಎಲ್ಲಾ ಧರಣಿ, ರ್‍ಯಾಲಿ, ಪ್ರತಿಭಟನೆ ನಿಷೇಧಿಸಿ ಇದೇ 4ರಂದು ಆದೇಶ ಹೊರಡಿಸಲಾಗಿದೆ. ಜೊತೆಗೆ, ಇದೇ 12ರಂದು ಹೈಕೋರ್ಟ್ ಆದೇಶ ನೀಡಿದ ನಂತರ ಕೆಪಿಸಿಸಿ ಪಾದಯಾತ್ರೆಯನ್ನೂ ನಿಷೇಧಿಸಲಾಗಿದೆ. ರಾಮನಗರ ಜಿಲ್ಲೆಯೂ ಸೇರಿದಂತೆ ಅಂತರ್ ಜಿಲ್ಲೆಗಳಲ್ಲಿ ಪಾದಯಾತ್ರೆ ಅಥವಾ ಮೆರವಣಿಗೆಗೆ ಅವಕಾಶ ಕಲ್ಪಿಸದಂತೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ' ಎಂದು ವಿವರಿಸಿದರು.

ಇಬ್ಬರ ಹೇಳಿಕೆಯನ್ನೂ ಪರಿಗಣಿಸಿದ ನ್ಯಾಯಪೀಠ, 'ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಕೆಪಿಸಿಸಿ ಸ್ವಯಂಪ್ರೇರಿತವಾಗಿ ಪಾದಯಾತ್ರೆ ಅಮಾನತುಗೊಳಿಸಿರುವ ಕಾರಣ, ಅರ್ಜಿ ವಿಚಾರಣೆ ಮುಂದುವರಿಸುವ ಅಗತ್ಯವಿಲ್ಲ' ಎಂದು ಅಭಿಪ್ರಾಯಪಟ್ಟು ವಿಲೇವಾರಿ ಮಾಡಿತು.


ಕಳೆದ ವಿಚಾರಣೆ ವೇಳೆ ಕೆಪಿಸಿಸಿ ನಡೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದ ನ್ಯಾಯಪೀಠ, 'ನೀವು ಪಾದಯಾತ್ರೆಗೆ ಯಾರಿಂದ ಅನುಮತಿ ಪಡೆದಿದ್ದೀರಿ, ಕೋವಿಡ್ ಮಾರ್ಗಸೂಚಿಯನ್ನು ಯಾಕೆ ಪಾಲನೆ ಮಾಡಿಲ್ಲ' ಎಂದು ಪ್ರಶ್ನಿಸಿತ್ತು. 'ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಪಾದಯಾತ್ರೆಗೆ ಹೇಗೆ ಅನುಮತಿ ನೀಡಿದಿರಿ' ಎಂದು ಸರ್ಕಾರವನ್ನೂ ತರಾಟೆಗೆ ತೆಗೆದುಕೊಂಡಿದ್ದ ನ್ಯಾಯಪೀಠ, 'ಇಂತಹ ವಿಷಯಗಳಲ್ಲಿ ನಿಮಗೆ ನ್ಯಾಯಾಂಗದ ಆದೇಶಗಳು ಬಂದ ಮೇಲೆಯೇ ಕ್ರಮ ಕೈಗೊಳ್ಳಬೇಕು ಎಂಬ ಇರಾದೆಯಿದೆಯೇ' ಎಂದು ಅತೃಪ್ತಿ ಹೊರಹಾಕಿತ್ತು.

ತಿಂಗಳಾಂತ್ಯದವರೆಗೆ ಯಥಾಸ್ಥಿತಿ: ಸಚಿವ ಸುಧಾಕರ್

ಬೆಂಗಳೂರು: ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳಲ್ಲಿ ಈ ತಿಂಗಳ ಅಂತ್ಯದವರೆಗೆ ಯಾವುದೇ ಬದಲಾವಣೆ ಇರುವುದಿಲ್ಲ. ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಯಥಾಸ್ಥಿತಿಯಲ್ಲಿ ಮುಂದುವರಿಯಲಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಲಾಕ್‌ಡೌನ್‌ನಂತಹ ಕ್ರಮಗಳಿಂದ ಸೋಂಕು ನಿಯಂತ್ರಿಸಲು ಸಾಧ್ಯವಿಲ್ಲ. ಆದ್ದರಿಂದ ಸದ್ಯಕ್ಕೆ ನಿರ್ಬಂಧ ಕ್ರಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ' ಎಂದರು. ಲಾಕ್‌ಡೌನ್‌ನಂತಹ ನಿಯಮಗಳ ಬದಲಿಗೆ ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಕೆಲವೆಡೆ ಕಠಿಣ ಕ್ರಮ ಅನಿವಾರ್ಯವಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಫೆಬ್ರುವರಿ ಮೊದಲ ವಾರ ಕೋವಿಡ್ ಮೂರನೇ ಅಲೆ ಗರಿಷ್ಠ ಮಟ್ಟ ತಲುಪಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಮೂರು ಮತ್ತು ನಾಲ್ಕನೇ ವಾರದ ವೇಳೆಗೆ ಸೋಂಕಿನ ಪ್ರಮಾಣ ತಗ್ಗಬಹುದು ಎಂದೂ ಹೇಳಿದ್ದಾರೆ. ವಾರಾಂತ್ಯದ ಕರ್ಫ್ಯೂ ಕಾರಣದಿಂದ ಮುಂದಿನ ವಾರದ ವೇಳೆಗೆ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಬಹುದು ಎಂದು ಸುಧಾಕರ್ ತಿಳಿಸಿದರು. ಈಗ ಸೋಂಕು ತಗುಲಿದವರಲ್ಲಿ ಶೇಕಡ 5ರಿಂದ 6ರಷ್ಟು ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ವೈದ್ಯರು ಮತ್ತು ಶುಶ್ರೂಷಕರಿಗೂ ಕೋವಿಡ್ ತಗುಲುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಬೂಸ್ಟರ್ ಡೋಸ್‌ಗೆ ಅರ್ಹರಾಗಿರುವ ಎಲ್ಲರೂ ತಡಮಾಡದೆ ಪಡೆಯಬೇಕು ಎಂದು ಸಚಿವರು ಮನವಿ ಮಾಡಿದರು.



ಸುಭಾಷಿತ

ಜ್ಞಾನ ಮತ್ತು ಅಹಂ ಎರಡಕ್ಕೂ ನೇರವಾದ ಸಂಬಂಧ ಇರುತ್ತದೆ. ಜ್ಞಾನ ಕಡಿಮೆ ಇದ್ದಷ್ಟೂ ಅಹಂ ಹೆಚ್ಚಾಗಿ ಇರುತ್ತದೆ. -ಆಲ್ಬರ್ಟ್ ಐನ್‌ಸ್ಟೀನ್

ರಾಜಕಾರಣದಲ್ಲಿ ಮಹಿಳಾ ಪ್ರಾತಿನಿಧ್ಯ ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ಮಾದರಿ ನಡೆ

ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಶೇಕಡ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡುವ ಕಾಂಗ್ರೆಸ್ ಪಕ್ಷದ ನಿರ್ಧಾರವು ರಾಜಕಾರಣದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರೇರಣೆ ನೀಡುವಂತಹದ್ದು. 125 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿದ್ದು, ಅದರಲ್ಲಿ 50 ಮಂದಿ ಮಹಿಳೆಯರಿದ್ದಾರೆ. ಈ ಪಟ್ಟಿಯಲ್ಲಿ ಮಹಿಳಾ ಹಕ್ಕುಗಳ ಹೋರಾಟಗಾರರು ಹಾಗೂ ವಿವಿಧ ಅಪರಾಧ ಕೃತ್ಯಗಳ ಸಂತ್ರಸ್ತರು ಸೇರಿದ್ದಾರೆ. ಉನ್ನಾವ್ ಅತ್ಯಾಚಾರ ಸಂತ್ರಸ್ತೆಯ ತಾಯಿ, ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿ ಹೋರಾಟಗಾರ್ತಿ ಹಾಗೂ ಆಶಾ ಕಾರ್ಯಕರ್ತೆಗೆ ಟಿಕೆಟ್ ನೀಡಿರುವುದು, ಮಹಿಳಾ ಪ್ರಾತಿನಿಧ್ಯದ ಬಗ್ಗೆ ಉತ್ತರಪ್ರದೇಶ ಕಾಂಗ್ರೆಸ್ ಘಟಕವು ಗಂಭೀರವಾಗಿರುವುದನ್ನು ಸೂಚಿಸುವಂತಿದೆ. ಶೇ 40ರಷ್ಟು ಯುವಜನರಿಗೆ ಟಿಕೆಟ್ ನೀಡುವುದಾಗಿಯೂ ಪಕ್ಷ ಪ್ರಕಟಿಸಿದೆ. ಮಹಿಳಾಶಕ್ತಿ ಮತ್ತು ಯುವಶಕ್ತಿ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವುದು ಪ್ರಜಾತಂತ್ರದ ಚಲನಶೀಲತೆಯನ್ನು ಹೆಚ್ಚಿಸುವ ಪ್ರಯತ್ನವಾಗಿದೆ. ಅನ್ಯಾಯಕ್ಕೆ ಒಳಗಾದವರ ಹಾಗೂ ತಮ್ಮ ಹಕ್ಕುಗಳ ಬಗ್ಗೆ ದನಿಯೆತ್ತುವ ರಾಜಕೀಯ ವೇದಿಕೆ ಕಲ್ಪಿಸಿಕೊಡುವುದಾಗಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ. 'ರಾಜಕೀಯಕ್ಕೆ ಬನ್ನಿ, ಅಧಿಕಾರಕ್ಕೆ ಬನ್ನಿ, ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳಿ' ಎನ್ನುವ ಕಾಂಗ್ರೆಸ್‌ನ ಘೋಷಣೆ ಆಕರ್ಷಕವಾಗಿದೆ ಹಾಗೂ ರಾಜಕಾರಣಕ್ಕೆ ಹೊಸ ಬದಲಾವಣೆ ತರುವ ನಿಟ್ಟಿನಲ್ಲಿ ಅನಿವಾರ್ಯವಾದ ನಡೆಯಾಗಿದೆ. ಈವರೆಗೂ [illegible] ರೂಪದಲ್ಲಷ್ಟೇ ಮಹಿಳೆಯರನ್ನು ನೋಡಲಾಗಿದೆ. ಧನಬಲ, ತೋಳ್ಬಲ ಹಾಗೂ ಕುಟುಂಬದ ಹೆಸರಿನಲ್ಲಿ ಚುನಾವಣೆ ಗೆಲ್ಲುವುದು ಸಾಧ್ಯವಿಲ್ಲವೆನ್ನುವ ಕಾರಣಗಳನ್ನು ನೀಡಿ ಅಧಿಕಾರ ಕೇಂದ್ರಗಳಿಂದ ಹೆಣ್ಣುಮಕ್ಕಳನ್ನು ಆದಷ್ಟೂ ದೂರವಿಡುವ ಪರಿಪಾಟಕ್ಕೆ ವಿರುದ್ಧವಾದ ಚಲನೆ ಉತ್ತರ ಪ್ರದೇಶದ ಚುನಾವಣೆಯಲ್ಲಿ ವ್ಯಕ್ತವಾಗುತ್ತಿದೆ. ಮಹಿಳಾ ಪ್ರಾತಿನಿಧ್ಯದಿಂದಾಗಿ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯ ಸಾಧಿಸುತ್ತದೆಯೇ ಇಲ್ಲವೋ ಎನ್ನುವುದು ಕಾಲಕ್ಕೆ ಬಿಟ್ಟ ಪ್ರಶ್ನೆ. ಆದರೆ, ಚುನಾವಣೆಯ ಯಶಸ್ಸು ಹಾಗೂ ಅಧಿಕಾರದ ಲೆಕ್ಕಾಚಾರಗಳನ್ನು ಮೀರಿದ ಮಹತ್ವವು ಕಾಂಗ್ರೆಸ್ ಆರಂಭಿಸಿರುವ ಮಹಿಳಾ ಪ್ರಾತಿನಿಧ್ಯಕ್ಕಿದೆ. ಲೋಕಸಭೆ ಹಾಗೂ ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಅವಕಾಶ ಕಲ್ಪಿಸುವ ಉದ್ದೇಶದ ಮಸೂದೆ [illegible] ವರ್ಷಗಳ ನಂತರವೂ ಸಂಸತ್ತಿನ ಅನುಮೋದನೆ ಪಡೆಯುವುದು ಸಾಧ್ಯವಾಗಿಲ್ಲ. 1996ರಲ್ಲಿ ಸಂಸತ್ತಿನ ಮುಂದೆ ಬಂದ ಮಸೂದೆಯ ಅಂಗೀಕಾರ [illegible] ದೂರದಲ್ಲೇ ಇರುವುದರಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪಾತ್ರವೂ ಇದೆ. ಕೆಲವೇ ಕೆಲವು ಮಹಿಳೆಯರು ಶಾಸನಸಭೆಗಳನ್ನು ಪ್ರವೇಶಿಸಿದರೂ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ದೊರೆಯುವುದು ಸುಲಭವಲ್ಲ. ಸದ್ಯದ ಮಹಿಳಾ ಪ್ರಾತಿನಿಧ್ಯವು ಅಲಂಕಾರಿಕ ಉದ್ದೇಶದ ರೂಪದಲ್ಲಷ್ಟೇ ಇದೆ.



ನೀತಿ- ನಿಯಮ ರೂಪಿಸುವ ರಾಜಕೀಯ ಅಧಿಕಾರದ ಸ್ಥಾನಗಳಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿ ಇಲ್ಲದೆ ಹೋದರೆ ಸಮಾನತೆ ಎನ್ನುವುದಕ್ಕೆ ಅರ್ಥ ಇಲ್ಲ

ರಾಜಕಾರಣದಲ್ಲಿ ಲಿಂಗಸಮಾನತೆಯ ಆದರ್ಶ ಕಾರ್ಯರೂಪಕ್ಕೆ ಬರಬೇಕಾದರೆ, ಪಕ್ಷಗಳ ಟಿಕೆಟ್ ಹಂಚಿಕೆಯ ಹಂತದಲ್ಲೇ ಪ್ರಾತಿನಿಧ್ಯ ಸಾಧ್ಯವಾಗಬೇಕು. ಮಹಿಳಾ ಮೀಸಲಾತಿ ಕಾಯ್ದೆ ಕಾಯದೆ ಸ್ವಯಂ ಪ್ರೇರಣೆಯಿಂದ ಪ್ರಾತಿನಿಧ್ಯ ನೀಡಲು ರಾಜಕೀಯ ಪಕ್ಷಗಳು ಮುಂದಾಗಬೇಕು. ಅಂಥದೊಂದು ದಿಟ್ಟತನವನ್ನು ಕಾಂಗ್ರೆಸ್ ಪ್ರದರ್ಶಿಸಿದೆ. ಕಾಂಗ್ರೆಸ್‌ನ ಈ ಮಾದರಿಯನ್ನು ಉಳಿದ ಪಕ್ಷಗಳೂ ಅನುಸರಿಸಬೇಕು. ಶೇ 40ರಷ್ಟು ಅಲ್ಲದಿದ್ದರೂ ಗಣನೀಯ ಪ್ರಮಾಣದ ಟಿಕೆಟ್‌ಗಳನ್ನು ಮಹಿಳೆಯರಿಗೆ ಮೀಸಲಿಡಬೇಕು. ಸಮಾಜದ ಅರ್ಧ ಭಾಗದಷ್ಟಿರುವ ಮಹಿಳೆಯರಿಗೆ ಚುನಾವಣಾ ರಾಜಕಾರಣದಲ್ಲಿ ನ್ಯಾಯ ದೊರೆಯುತ್ತಿಲ್ಲ ಎನ್ನುವ ಕಟುವಾಸ್ತವವು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ರಾಜಕಾರಣದಲ್ಲಿನ ವಿರೋಧಾಭಾಸದಂತಿದೆ. ಸಮಾಜದ ಎಲ್ಲ ಹಂತಗಳಲ್ಲಿ ಮಹಿಳಾ ಸಮಾನತೆ ನಿಜವಾದ ಅರ್ಥದಲ್ಲಿ ಕಾರ್ಯರೂಪಕ್ಕೆ ಬರಬೇಕಾದಲ್ಲಿ ಮೊದಲು ಶಾಸನಸಭೆಗಳಲ್ಲಿ ಸಮಾನತೆ ಸಾಧ್ಯವಾಗಬೇಕು. ಶಾಸನಸಭೆ ಮತ್ತು ಸಚಿವ ಸಂಪುಟಗಳಿಂದ ಮಹಿಳೆಯರನ್ನು ದೂರವಿಟ್ಟು ಮಹಿಳೆಯರ ಹಿತಾಸಕ್ತಿಯ ಬಗ್ಗೆ ಮಾತನಾಡುವ ಕಪಟ ರಾಜಕಾರಣದಿಂದ ರಾಜಕೀಯ ಪಕ್ಷಗಳು ಇನ್ನಾದರೂ ಹೊರಬರಬೇಕು. ಅಧಿಕಾರದ ಸ್ಥಾನಗಳಿಂದ ಮಹಿಳೆಯರನ್ನು ದೂರವಿಟ್ಟು ನಡೆಸುವ ರಾಜಕಾರಣವು ಪ್ರಜಾಪ್ರಭುತ್ವದ ಘನತೆ ಹೆಚ್ಚಿಸುವಂತಹದ್ದಲ್ಲ. ನೀತಿ ನಿಯಮಗಳನ್ನು ರೂಪಿಸುವ ರಾಜಕೀಯ ಅಧಿಕಾರದ ಸ್ಥಾನಗಳಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿ ಇಲ್ಲದೆ ಹೋದರೆ ಸಮಾನತೆ ಎನ್ನುವುದಕ್ಕೆ ಅರ್ಥವೂ ಇಲ್ಲ. ಲಿಂಗತಾರತಮ್ಯವನ್ನು ತೊಡೆದುಹಾಕುವ ಪ್ರಯತ್ನ ಸಕ್ರಿಯ ರಾಜಕಾರಣದಿಂದಲೇ ಆರಂಭವಾಗಬೇಕು. ಚುನಾವಣಾ ರಾಜಕಾರಣ ಮತ್ತು ಅಧಿಕಾರ ರಾಜಕಾರಣದಿಂದ ಮಹಿಳೆಯರನ್ನು ದೂರವಿಡುವಲ್ಲಿ ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳದೂ ಸಮಾನ ಪಾತ್ರವಿದೆ. ಈಗ ತನ್ನ ತಪ್ಪನ್ನು ತಿದ್ದಿಕೊಳ್ಳುವ ದಿಸೆಯಲ್ಲಿ ಕಾಂಗ್ರೆಸ್ ತಡವಾಗಿಯಾದರೂ ಸರಿಯಾದ ನಿರ್ಧಾರ ಕೈಗೊಂಡಿದೆ. ದೇಶದ ಅತಿ ದೊಡ್ಡ ಚುನಾವಣಾ ಕಣದಲ್ಲಿ ನಡೆಯುತ್ತಿರುವ ಈ ಪ್ರಯೋಗವನ್ನು ಉಳಿದ ರಾಜ್ಯಗಳಿಗೂ ಕಾಂಗ್ರೆಸ್ ವಿಸ್ತರಿಸಬೇಕು. ಉಳಿದ ರಾಜಕೀಯ ಪಕ್ಷಗಳೂ ಮಹಿಳಾ ಕಾಳಜಿಯ ಕುರಿತು ಮಾತಿನ ರೂಪದಲ್ಲೇ ಉಳಿದಿರುವ ತಮ್ಮ ಬದ್ಧತೆಯನ್ನು ಕೃತಿ ರೂಪಕ್ಕೆ ತರುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಚುನಾವಣೆಯಲ್ಲಿ ಹಾಗೂ ಸರ್ಕಾರ ರಚನೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶವನ್ನು ಕಲ್ಪಿಸುವುದು ಅವರಿಗೆ ಮಾಡುವ ಉಪಕಾರವಾಗಿರದೆ, ತಪ್ಪು ತಿದ್ದಿಕೊಳ್ಳುವ ಪ್ರಾಂಜಲ ಪ್ರಯತ್ನವಾಗಿದೆ ಎನ್ನುವುದನ್ನು ರಾಜಕೀಯ ಪಕ್ಷಗಳು ಅರ್ಥ ಮಾಡಿಕೊಳ್ಳಬೇಕು.

ದಿನದ ಟ್ವೀಟ್


ಜಗತ್ತನ್ನು ಪ್ರೇರೇಪಿಸೋಣ



ದೇಶದಲ್ಲಿ ಮರ ಮತ್ತು ಅರಣ್ಯ ಪ್ರದೇಶದ ವ್ಯಾಪ್ತಿ ಹೆಚ್ಚಳವಾಗಿರುವುದನ್ನು ತಿಳಿದು ಸಂತೋಷವಾಗಿದೆ. ಈ ವಿಷಯದಲ್ಲಿ ನಾವೆಲ್ಲರೂ ಇನ್ನಷ್ಟು ಕೆಲಸ ಮಾಡೋಣ, ಎಲ್ಲ ರಾಜ್ಯಗಳೂ ಈ ದಿಸೆಯಲ್ಲಿ ಗಮನಹರಿಸಬೇಕಾಗಿದೆ. ಉತ್ತಮ, ಸ್ವಚ್ಛ ಹಾಗೂ ಹಸಿರು ಭಾರತವನ್ನು ನಿರ್ಮಿಸೋಣ ಮತ್ತು ಈ ವಿಷಯದಲ್ಲಿ ಜಗತ್ತನ್ನು ಪ್ರೇರೇಪಿಸೋಣ.

ನೀಲಾ ಮಾಧವ್ ಪಾಂಡ, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ಕೆಲವು ಮುಖ್ಯಮಂತ್ರಿಗಳು ಅಧಿಕೃತ ಸಭೆಗಳಲ್ಲಿ ಅನುಚಿತವಾಗಿ ಮಾತನಾಡುವುದು, ಅಸಡ್ಡೆಯಿಂದ ವರ್ತಿಸುವುದು ಅಥವಾ ಗೈರುಹಾಜರಾಗುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ವಿಜಯ ಸಾಧಿಸಿದಂತೆ ಭಾವಿಸುತ್ತಾರೆ. ಇದು ತಪ್ಪು ಕಲ್ಪನೆ. ಈ ಮೂಲಕ ಅವರು ತಮ್ಮ ವರ್ಚಸ್ಸನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ತಾವು ಬೇಜವಾಬ್ದಾರಿ ಆಡಳಿತಗಾರರು ಎಂಬುದನ್ನು ಸಾಬೀತು ಮಾಡುತ್ತಿದ್ದಾರೆ.

ಬಿ.ಎಲ್.ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ
ಬುಧವಾರ 15-1-1997

• ಕಾಲೇಜಿನಲ್ಲಿ ಸಿನಿಮಾ ರಸಗ್ರಹಣಕ್ಕೆ ಆಗ್ರಹ

ತಿರುವನಂತಪುರ, ಜ.14– ರಾಷ್ಟ್ರೀಯ ಚಲನಚಿತ್ರಕ್ಕೆ ಸಂಬಂಧಿಸಿದ ಡಾ. ಶಿವರಾಮ ಕಾರಂತ ನೇತೃತ್ವದ ಸಮಿತಿ ಸಲಹೆ ಮಾಡಿದಂತೆ, ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಚಲನಚಿತ್ರ ರಸಗ್ರಹಣ ತರಬೇತಿಯನ್ನು ಅಳವಡಿಸಬೇಕು ಎಂದು ಇಲ್ಲಿ ಸಮಾವೇಶಗೊಂಡ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಆಗ್ರಹಪಡಿಸಲಾಯಿತು.

28ನೇ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ, ಚಿತ್ರರಂಗದ ಹಲವು ಸಮಸ್ಯೆಗಳನ್ನು ಚರ್ಚಿಸಲಾಯಿತು.

'ನಗರ ಪ್ರದೇಶಗಳಲ್ಲಿ ಚಿತ್ರಮಂದಿರಗಳು ವಾಣಿಜ್ಯ ಸಮುಚ್ಚಯಗಳಾಗಿ ಪರಿವರ್ತನೆ ಆಗುವುದನ್ನು ಸರ್ಕಾರ ತಡೆಯಬೇಕು. ಸಣ್ಣ ಪ್ರಮಾಣದ ಚಿತ್ರಮಂದಿರಗಳ ನಿರ್ಮಾಣಕ್ಕೆ ಉತ್ತೇಜನ ನೀಡಬೇಕು. ಮನರಂಜನಾ ತೆರಿಗೆ ವಿನಾಯಿತಿಯ ಲಾಭ ನಿರ್ಮಾಪಕನಿಗೆ ಸಿಗುವಂತೆ ನಿಯಮಗಳಲ್ಲಿ ಬದಲಾವಣೆ ತರಬೇಕು' ಎಂದು ನಿರ್ದೇಶಕ ಅಡೂರು ಗೋಪಾಲಕೃಷ್ಣನ್ ಹೇಳಿದರು.

50 ವರ್ಷಗಳ ಹಿಂದೆ
ಶನಿವಾರ, 15-1-1972

• 'ಬಾಂಗ್ಲಾದಲ್ಲಿ ಸಮತಾವಾದಿ ಸಮಾಜ'

ಢಾಕಾ, ಜ. 14– ಬಾಂಗ್ಲಾದಲ್ಲಿ ಪ್ರಜಾಸತ್ತಾತ್ಮಕ ಸಮಾಜವಾದಿ ವ್ಯವಸ್ಥೆಯನ್ನು ರೂಪಿಸಲು ಯೋಜಿಸಲಾಗಿದೆಯೆಂದೂ, ಆರ್ಥಿಕ ರಂಗವನ್ನು ಪುನರ್‌ರಚಿಸುವ ಈ ವ್ಯವಸ್ಥೆಯಿಂದ ಈ ದೇಶವು 'ಪೂರ್ವದ ಸ್ವಿಟ್ಜರ್ಲೆಂಡ್' ಎನಿಸಿಕೊಳ್ಳುವುದೆಂದೂ ಪ್ರಧಾನಿ ಷೇಖ್ ಮುಜೀಬುರ್ ರೆಹಮಾನ್ ಆಶಿಸಿದ್ದಾರೆ. ಉತ್ಪಾದನೆ ಏರಿಕೆಗೆ ಧಕ್ಕೆ ಬಾರದಂತೆ ದೇಶದಲ್ಲಿ ಸಮಾಜವಾದಿ ಸಮಾಜ ಸ್ಥಾಪಿಸಿ, ತೆರಿಗೆ ವಿಧಾನಗಳ ಪುನರ್‌ರಚನೆಗೆ ಸರ್ಕಾರ ಪರಿಶೀಲಿಸುತ್ತಿದೆ.

• ಸಕ್ಕರೆ ಬೆಲೆ ಏರಿಕೆಗೆ ರಾಜ್ಯ ಸರ್ಕಾರಗಳೇ ಕಾರಣ: ಆರೋಪ

ನವದೆಹಲಿ, ಜ.14– ಸಕ್ಕರೆ ಬೆಲೆ ಇತ್ತೀಚೆಗೆ ತೀವ್ರವಾಗಿ ಏರಿರುವುದಕ್ಕೆ ರಾಜ್ಯ ಸರ್ಕಾರಗಳೇ ಕಾರಣವೆಂದು ಸಕ್ಕರೆ ಕಾರ್ಖಾನೆಗಳ ಸಂಘ ಆರೋಪಿಸಿದೆ.

ತಮ್ಮ ಹತ್ಯೆಗೆ ಸಂಚು ನಡೆದಿತ್ತು ಎಂಬ ಪ್ರಧಾನಿ ಆರೋಪ ನಾನಾ ಪ್ರಶ್ನೆಗಳಿಗೆ ಎಡೆಮಾಡಿದೆ

ಪಂಜಾಬಿನಲ್ಲಿ ಮೋದಿ ಸತ್ಯಪರೀಕ್ಷೆ



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಭಾರತದ ಮಹಾನ್ ಸಂವಿಧಾನ ನಿರ್ಮಾತೃಗಳ ಅಗಾಧ ಪ್ರಜ್ಞಾವಂತಿಕೆಯ ಎದುರು ನಾವು ನಿಜವಾಗಿಯೂ ತಲೆಬಾಗಬೇಕು. ಅವರು ನಮ್ಮ ದೇಶದ ಧ್ಯೇಯೋಕ್ತಿಯಾಗಿ ಸ್ವೀಕರಿಸಿದ್ದು ಮುಂಡಕ ಉಪನಿಷತ್ತಿನಲ್ಲಿಯ 'ಸತ್ಯಮೇವ ಜಯತೆ' (ನಾನೃತಮ್) ಎಂಬ ಮಂತ್ರವನ್ನು. 'ಸತ್ಯಕ್ಕೆ ಮಾತ್ರ ಜಯ' ಎಂಬ ಈ ಮಂತ್ರದ ಮಥಿತಾರ್ಥವನ್ನು 'ನಾನೃತಮ್' (ಸುಳ್ಳಿಗೆ ಎಂದಿಗೂ ಜಯವಿಲ್ಲ) ಎಂಬ ಶಬ್ದವು ಮತ್ತಷ್ಟು ಎತ್ತಿ ತೋರಿಸುತ್ತದೆ. ಈ ಮಂತ್ರವನ್ನು ನಮ್ಮ ದೇಶದ ನಾಲ್ಕು ಸಿಂಹಗಳ ಲಾಂಛನದ ಕೆಳಗೆ ದಾಖಲಿಸಿರುವುದರಿಂದ ಅದರ ಮಹತ್ವ ಇನ್ನಷ್ಟು ಮೇಲೇರಿದೆ. ಈ ಲಾಂಛನದಲ್ಲಿ ಹಾಗೂ ಭಾರತದ ರಾಷ್ಟ್ರಧ್ವಜದಲ್ಲಿ ಸಾಮ್ರಾಟ ಅಶೋಕನ ಧರ್ಮಚಕ್ರವೂ ಇದೆ. ಸತ್ಯ ಮತ್ತು ಧರ್ಮ ಬೇರೆಯಲ್ಲ ಎಂದು ಸಾರಿದವರು ರಾಷ್ಟ್ರಪಿತ ಮಹಾತ್ಮ ಗಾಂಧಿ. ಆದ್ದರಿಂದ ಸತ್ಯ, ಧರ್ಮ ಎಂಬುದು ರಾಷ್ಟ್ರದ ಅಡಿಪಾಯ. ಈ ಅಡಿಪಾಯವನ್ನು ದುರ್ಬಲಗೊಳಿಸುವುದೆಂದರೆ ರಾಷ್ಟ್ರವನ್ನು ಬಲಹೀನಗೊಳಿಸಿದಂತೆಯೇ.

ಭಾರತಕ್ಕೆ ಇಷ್ಟೊಂದು ಉದಾತ್ತವಾದ ನೈತಿಕ ಪರಂಪರೆಯಿರುವಾಗ, ಈ ಪರಂಪರೆಗೆ ನಮ್ಮ ದೇಶದ ಪ್ರಧಾನಿಯವರೇ ಧಕ್ಕೆ ತರುತ್ತಿದ್ದಾರೆಯೇ ಎಂಬ ಸಂದೇಹ ಇತ್ತೀಚಿನ ಘಟನೆಗಳಿಂದ ಮೂಡುತ್ತದೆ. ಜನವರಿ 5ರಂದು ತಮ್ಮ ಪಂಜಾಬ್ ಪ್ರವಾಸದ ಸಮಯದಲ್ಲಿ ಬಟಿಂಡಾದಿಂದ ಫಿರೋಜ್‌ಪುರಕ್ಕೆ ಕಾರಿನಲ್ಲಿ ಹೋಗುವಾಗ ಮಧ್ಯದಲ್ಲಿ ನರೇಂದ್ರ ಮೋದಿ ಅವರು 15-20 ನಿಮಿಷಗಳವರೆಗೆ ನಿಲ್ಲಬೇಕಾಯಿತು ಹಾಗೂ ನಂತರ ಬಟಿಂಡಾಕ್ಕೆ ವಾಪಸ್ ಹೋಗಬೇಕಾಯಿತು. ಕಾರಣ ಮುಂದೆ ಸ್ವಲ್ಪ ದೂರದಲ್ಲಿ– ಪಂಜಾಬ್ ಮುಖ್ಯಮಂತ್ರಿ ಚರಣಜಿತ್ ಸಿಂಗ್ ಚೆನ್ನಿ ಅವರ ಹೇಳಿಕೆಯಂತೆ ಒಂದು ಕಿಲೊ ಮೀಟರ್ ದೂರದಲ್ಲಿ– ಪ್ರದರ್ಶನಕಾರರ ಗುಂಪೊಂದು ನಿಂತಿತ್ತು. ಇದರಿಂದ ಕ್ರೋಧಗೊಂಡ ಮೋದಿಯವರು 'ನಾನು ಜೀವಂತವಾಗಿ ಮರಳಿ ಬಂದಿದ್ದಕ್ಕಾಗಿ ಮುಖ್ಯಮಂತ್ರಿಯವರಿಗೆ ಧನ್ಯವಾದಗಳು' ಎಂದು ವ್ಯಂಗ್ಯವಾಗಿ ಹೇಳಿದರು.

ನಿಜವಾಗಿಯೂ ಅವರ ಹತ್ಯೆಗೆ ಪಿತೂರಿ ನಡೆದಿದ್ದರೆ ಇದೊಂದು ಅತ್ಯಂತ ಗಂಭೀರವಾದ ವಿಷಯ. ಇದರ ಸತ್ಯಾಸತ್ಯತೆಯ ತನಿಖೆ ಆಗಲೇಬೇಕು. ಈ ಹಿಂದೆ ಭಾರತದ ಇಬ್ಬರು ಪ್ರಧಾನಿಗಳು ಕೊಲೆಯ ಕುತಂತ್ರಕ್ಕೆ ಬಲಿಯಾಗಿದ್ದಾರೆ ಎಂಬುದನ್ನು ನಾವು ಮರೆಯಲೇಕೂಡದು. ಆದರೆ ಈ ತನಿಖೆಯ ಮುಖ್ಯ ವಿಷಯ ತಾಂತ್ರಿಕ ಲೋಪಗಳಿಗಷ್ಟೇ ಸೀಮಿತವಾಗಿರಬಾರದು. ಪ್ರಧಾನಿಯವರ ಜೀವಕ್ಕೆ ಧಕ್ಕೆ ತರುವಂಥ ಕುತಂತ್ರವಿತ್ತೋ ಇಲ್ಲವೋ ಎಂಬುದೇ ತನಿಖೆಯ ಕೇಂದ್ರಬಿಂದುವಾಗಿರಬೇಕು. ಏಕೆಂದರೆ ಮೋದಿಯವರ ಆರೋಪ ಸೂಚಿಸುವುದು ಇದನ್ನೇ.

ಹೀಗೆ ಹೇಳುವುದರ ಹಿಂದೆ ಕಾರಣವಿದೆ. ಪ್ರಧಾನಿಯವರ ಸುರಕ್ಷಾ ವ್ಯವಸ್ಥೆಯಲ್ಲಿ ಈ ಮೊದಲು ಕೂಡ ಉಲ್ಲಂಘನೆಯಾಗಿದೆ. ಕೆಲವು ಬಾರಿ ಮೋದಿಯವರೇ ಸ್ಪೆಷಲ್ ಪ್ರೊಟೆಕ್ಷನ್ ಗ್ರೂಪ್‌ನ (ಎಸ್‌ಪಿಜಿ) ನಿಯಮ, ನಿರ್ಬಂಧಗಳನ್ನು ಪಾಲಿಸಿಲ್ಲ. ಆಗ ಪ್ರಧಾನಿಯವರಾಗಲೀ, ಗೃಹ ಸಚಿವ ಅಮಿತ್ ಶಾ ಅವರಾಗಲೀ ಅಥವಾ ಬಿಜೆಪಿಯ ಯಾವ ಮುಖಂಡರೇ ಆಗಲಿ ಅವರ ಜೀವ ಗಂಡಾಂತರದಲ್ಲಿತ್ತು ಎಂದು ಆಪಾದಿಸಲಿಲ್ಲ ಹಾಗೂ ಸಂಬಂಧಿಸಿದ ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಳ್ಳಲಿಲ್ಲ. ಉದಾಹರಣೆಗೆ, ಲೋಕಸಭೆಯಲ್ಲಿ ತಾವು ಪ್ರತಿನಿಧಿಸುತ್ತಿರುವ ಕ್ಷೇತ್ರವಾದ ವಾರಾಣಸಿಗೆ ಡಿಸೆಂಬರ್‌ನಲ್ಲಿ ಭೇಟಿ ನೀಡಿದಾಗ ಮೋದಿ ಅವರು ಶಹರದ ಅತ್ಯಂತ ಕಿರಿದಾದ ಓಣಿಗಳಲ್ಲಿ ರೋಡ್‌ಷೋ ಮಾಡಿದರು. ರಸ್ತೆಯ ಎರಡೂ ಮಗ್ಗುಲಿನ ಮೂರು-ನಾಲ್ಕು ಮಜಲಿನ ಮನೆಗಳಿಂದ ನೂರಾರು ಜನ ಅವರ ಮೇಲೆ ಪುಷ್ಪವೃಷ್ಟಿ ಸುರಿಸಿದರು. ಒಂದು ಕಡೆಯಂತೂ ಮೋದಿಯವರೇ ಕಾರನ್ನು ನಿಲ್ಲಿಸಿ, ತಮ್ಮ ಪ್ರಶಂಸಕರನ್ನು ಭೇಟಿಯಾದರಷ್ಟೇ ಅಲ್ಲ ಅವರಿಂದ ಪೇಟ ಮತ್ತು ಕೊರಳು ಅಲಂಕರಿಸುವ ವಸ್ತ್ರವನ್ನೂ ಸ್ವೀಕರಿಸಿದರು. ಪ್ರಧಾನಿಯವರಿಗೆ ಇಷ್ಟೊಂದು ಸಮೀಪದಲ್ಲಿ, ನೂರಾರು ಜನರ ಉಪಸ್ಥಿತಿಯಲ್ಲಿ ಸುರಕ್ಷಾ ವ್ಯವಸ್ಥೆಯ ಸ್ಪಷ್ಟ ಉಲ್ಲಂಘನೆಯಾದರೂ 'ನಾನು ಜೀವಂತವಾಗಿ ವಾಪಸ್ ಬಂದೆ' ಎಂದು ಅವರು ದೂರಲಿಲ್ಲ. ಆದರೆ ಪಂಜಾಬಿನಲ್ಲಿ ಮಾತ್ರ ಆ ರೀತಿ ಆರೋಪಿಸಿದರು. ಮೋದಿ ಅವರ ಬೆಂಬಲಿಗರಂತೂ ರಾಜಧಾನಿ ದೆಹಲಿಯ ಬಳಿ ನಡೆದ ಸುದೀರ್ಘ ಹಾಗೂ ಶಾಂತಿಯುತ ರೈತ ಆಂದೋಲನದ ಸಮಯದಲ್ಲೂ ಪಂಜಾಬ್ ಮತ್ತು ಸಿಖ್ ಸಮುದಾಯದ ವಿರುದ್ಧ 'ಇವರು ಖಲಿಸ್ತಾನಿ ಸಮರ್ಥಕರು, ಮೋದಿ ನೇತೃತ್ವದ ಸರ್ಕಾರವನ್ನು ಅಸ್ಥಿರಗೊಳಿಸಲು ಕುತಂತ್ರ ನಡೆಸಿದ್ದಾರೆ' ಎಂದು ಪ್ರಚಾರ ನಡೆಸಿದ್ದರು. ಆದ್ದರಿಂದ ಇದು ಹಲವು ಗಂಭೀರ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ.

ಪ್ರಶ್ನೆ ಒಂದು: ವಾರಾಣಸಿಯಲ್ಲಿ ಸುರಕ್ಷಾ ವ್ಯವಸ್ಥೆಯನ್ನು ತಾವೇ ಉಲ್ಲಂಘಿಸಿ ತಮ್ಮ ಅಭಿಮಾನಿಗಳನ್ನು ಹತ್ತಿರ ಬರಮಾಡಿಕೊಂಡ ಪ್ರಧಾನಿ, ಪಂಜಾಬಿನಲ್ಲಿ ಪ್ರದರ್ಶನಕಾರರ ಬಳಿ ಏಕೆ ಹೋಗಲಿಲ್ಲ? ಕನಿಷ್ಠಪಕ್ಷ ಅವರ ಕೆಲವು ಪ್ರನಿನಿಧಿಗಳನ್ನು ಭದ್ರತಾ ತಪಾಸಣೆ ನಂತರ ತಮ್ಮ ಬಳಿ ಕರೆಸಿಕೊಂಡು ಅವರ ಮಾತು ಕೇಳಿ ಶಾಂತಗೊಳಿಸಬಹುದಿತ್ತಲ್ಲ? ಹಾಗೆ ಮಾಡಿದ್ದರೆ ಪಂಜಾಬ್ ಮತ್ತು ದೇಶದಾದ್ಯಂತ ಅವರನ್ನು ಜನ ಮೆಚ್ಚುತ್ತಿರಲಿಲ್ಲವೇ?

ಪ್ರಶ್ನೆ ಎರಡು: ತಾವು ದೇಶದ 'ಪ್ರಧಾನ ಸೇವಕ' ಎಂದು ಮೋದಿಯವರೇ ಹೇಳಿಕೊಳ್ಳುತ್ತಾರೆ. ಹೀಗಿರುವಾಗ ಪ್ರಜಾಪ್ರಭುತ್ವದಲ್ಲಿ ಪ್ರಧಾನಿ ತಮ್ಮ ಪ್ರಶಂಸಕರನ್ನು ಮಾತ್ರ ಹತ್ತಿರ ಕರೆಯುವುದು ಹಾಗೂ ವಿರೋಧಿಗಳನ್ನು ದೂರ ಇಡುವುದು ಸರಿಯೇ? ಈ ರೀತಿಯ ಭೇದಭಾವ 'ರಾಜಧರ್ಮ'ದ ಉಲ್ಲಂಘನೆಯಲ್ಲವೇ?



ದೆಹಲಿಯ ಬಳಿ ಲಕ್ಷಾಂತರ ರೈತರು ಒಂದು ವರ್ಷಕ್ಕೂ ಹೆಚ್ಚು ಕಾಲ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದರು. ಸುಮಾರು 700 ಜನ ಸಾವಿಗೀಡಾದರು. ಆದರೆ ಒಂದು ಸಲ ಕೂಡ ಮೋದಿಯವರು ಆ ಸ್ಥಳಕ್ಕೆ ಹೋಗಿ ಪ್ರತಿಭಟನಾಕಾರರನ್ನು ಭೇಟಿಯಾಗಲಿಲ್ಲ ಅಥವಾ ಅವರ ಪ್ರತಿನಿಧಿಗಳನ್ನು ತಮ್ಮ ಕಚೇರಿಗೆ ಆಮಂತ್ರಿಸಿ ಮಾತನಾಡಲಿಲ್ಲ. ಇದು ಅಹಂಕಾರದ, ಅಸಂವೇದನಾಶೀಲ, ಪ್ರಧಾನಿ ಪದಕ್ಕೆ ಶೋಭೆ ತಾರದ ನಡೆಯಲ್ಲವೇ?

ಪ್ರಶ್ನೆ ಮೂರು: ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಪ್ರತಿಭಟನೆಯ ಅಧಿಕಾರವಿಲ್ಲವೇ? ತಮ್ಮ ಬೇಡಿಕೆ-ಬೇಗುದಿಗಳನ್ನು ವ್ಯಕ್ತಪಡಿಸುವ ಹಕ್ಕಿಲ್ಲವೇ? ಅಥವಾ ತಮ್ಮ ವಿರುದ್ಧದ ಎಲ್ಲ ಪ್ರತಿಭಟನಾಕಾರರೂ ವಿಶೇಷವಾಗಿ ಪಂಜಾಬಿಗಳು ತಮ್ಮ ಜೀವಕ್ಕೆ ಅಪಾಯಕಾರಿ ಎಂದು ಮೋದಿಯವರು ನಂಬಿದ್ದಾರೆಯೇ?

ಪ್ರಶ್ನೆ ನಾಲ್ಕು: ಪಂಜಾಬಿನ ಘಟನೆಗೆ ಮುಖ್ಯಮಂತ್ರಿ ಚೆನ್ನಿಯವರಷ್ಟೇ ಜವಾಬ್ದಾರರೇ? ಬಟಿಂಡಾದಿಂದ ಫಿರೋಜ್‌ಪುರಕ್ಕೆ ಹೆಲಿಕಾಪ್ಟರ್ ಮೂಲಕ ಹೋಗುವ ಯೋಜನೆ ಮೊದಲಿತ್ತು. ಕೊನೆಯ ಕ್ಷಣದಲ್ಲಿ ಅದನ್ನು ಬದಲಿಸಿ 110 ಕಿಲೊ ಮೀಟರ್ ದೂರವನ್ನು ಕಾರಿನಲ್ಲಿ ಪ್ರಯಾಣಿಸುವ ನಿರ್ಣಯ ಮಾಡಿದವರು ಪ್ರಧಾನಿಯವರಲ್ಲವೇ?

ಪ್ರಶ್ನೆ ಐದು: ಇದು ಮೋದಿ ಸಮರ್ಥಕರಿಗೆ– ವಿಶೇಷವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ನೇತಾರರಿಗೆ– ಕೇಳಲಾದ ಪ್ರಶ್ನೆ. ಸತತವಾಗಿ ಪಂಜಾಬ್ ಮತ್ತು ಸಿಖ್ ಸಮುದಾಯವನ್ನು ಈ ರೀತಿ ಸಂಶಯದ ದೃಷ್ಟಿಯಿಂದ ನೋಡುವುದರ ದೂರಗಾಮಿ ಪರಿಣಾಮಗಳ ಬಗ್ಗೆ ಅವರು ಚಿಂತಿಸಿದ್ದಾರೆಯೇ? ಯಾವಾಗಲೂ 'ದೇಶದ ಆಂತರಿಕ ಶತ್ರುಗಳು' ಎಂಬ ರೀತಿಯಲ್ಲಿ ಮುಸಲ್ಮಾನರು, ಕ್ರೈಸ್ತರು ಹಾಗೂ ಸಿಖ್ಖರ ಕಡೆಗೆ ನೋಡಿದರೆ, ಅವರ ದೇಶಭಕ್ತಿಯನ್ನು ಪ್ರಶ್ನಿಸಿದರೆ, ಅವರ ಸಾಂವಿಧಾನಿಕ ಅಧಿಕಾರಗಳನ್ನು ತಿರಸ್ಕರಿಸಿದರೆ, ಭಾರತವು ಕೇವಲ ಅಥವಾ ಮುಖ್ಯವಾಗಿ ಹಿಂದೂಗಳದು ಎಂದು ಸಾರಿದರೆ ನಮ್ಮ ದೇಶದ ಏಕತೆ ಉಳಿದೀತೇ?

ಭಾರತದ ಪ್ರಧಾನಿಯವರ ಜೀವ ಬಹುಮೂಲ್ಯ. ಅವರು ಯಾವ ಪಕ್ಷದವರೇ ಆಗಿರಲಿ, ಅವರ ಸುರಕ್ಷಾ ವ್ಯವಸ್ಥೆ ಎಲ್ಲರ ಜವಾಬ್ದಾರಿ. ಆದರೆ ಪಂಜಾಬಿನ ಘಟನೆಯಲ್ಲಿ ಮೋದಿ ಅವರ ಹತ್ಯೆಯ ಸಂಚಿತ್ತು ಎಂಬುದನ್ನು ಸಾಬೀತುಪಡಿಸುವ, ಆ ಆಪಾದನೆಯ ಸತ್ಯವನ್ನು ಬಹಿರಂಗಗೊಳಿಸುವ ಜವಾಬ್ದಾರಿ ಅವರ ನೇತೃತ್ವದ ಸರ್ಕಾರದ್ದು. ಅವರು ಹಾಗೆ ಮಾಡಿದರೆ ಈ ವಿವಾದ ನಿಲ್ಲುತ್ತದೆ. ಇಲ್ಲವಾದರೆ ಮೋದಿಯವರು ತಮ್ಮ ರಾಜಕೀಯ ಲಾಭಕ್ಕಾಗಿ ನಾಟಕೀಯವಾಗಿ ವರ್ತಿಸಿದರು, ಸತ್ಯಕ್ಕೆ ಅಪಮಾನ ಮಾಡಿದರು ಎಂದಾಗುತ್ತದೆ. ಹೀಗಾದರೆ ಜನ ಅವರನ್ನು ಯಾವ ದೃಷ್ಟಿಯಿಂದ ನೋಡಿಯಾರು, ಅವರ ರಾಜಕೀಯ ಜೀವನದ ಮೇಲೆ ಅದರಿಂದ ಏನು ಪರಿಣಾಮವಾದೀತು, ಇತಿಹಾಸವು ಅವರ ಯೋಗ್ಯತೆಯ ಬಗ್ಗೆ ಏನು ತೀರ್ಮಾನ ಕೊಟ್ಟೀತು, ಇದು ಒಂದು ವಿಷಯ. ಆದರೆ ಇದಕ್ಕೂ ಮಹತ್ವದ್ದೆಂದರೆ, ಮುಖಂಡರೇ ಅಸತ್ಯದ ಹಾದಿ ಹಿಡಿದರೆ ನಮ್ಮ ಸಮಾಜದ, ಪ್ರಜಾಪ್ರಭುತ್ವದ ಗತಿ ಏನಾದೀತು ಎಂಬುದು. ಇದರ ಬಗ್ಗೆ ಎಲ್ಲರೂ ಚಿಂತಿಸಬೇಕಲ್ಲವೇ?

ಚುರುಮುರಿ



ಮೇಕೆ ಪಾದಯಾತ್ರೆ!

• ಬಿ.ಎನ್.ಮಲ್ಲೇಶ್

ಕೊಟ್ಟಿಗೆಯಲ್ಲಿ ಕುರಿ, ಟಗರು, ಹೋತ ಎಲ್ಲ ಸೇರಿ ಮೇಕೆಯನ್ನು ಕಟಕಟೆಯಲ್ಲಿ ನಿಲ್ಲಿಸಿದ್ದವು.

'ಏನಲೆ, ದಿನಬೆಳಗಾದ್ರೆ ಟಿ.ವಿ., ಪೇಪರ್ ತುಂಬ ಬರೀ ನಿಂದೇ ಸುದ್ದಿ... ಮೇಕೆದಾಟು, ಮೇಕೆದಾಟು. ಅದೆಲ್ಲಿ ಏನು ದಾಟಿ ಬಂದಿದ್ದಿ ಬೊಗಳು' ಎಂದಿತು ಟಗರು.

'ಕಂಡ ಕಂಡ ಸೊಪ್ಪೆಲ್ಲ ತಿನ್ನಾಕೆ ಹೋಗ್ತಾನೆ. ಎಲ್ಲೋ ಏನೋ ದಾಟಿ ಬಂದಿರಬೇಕು. ಇಲ್ಲಾಂದ್ರೆ ಅಟಾಕಂದು ಜನ ಯಾಕೆ ಸೇರ್ತಿದ್ರು?' ಕುರಿಯೂ ಆಕ್ಷೇಪಿಸಿತು.

'ನಂದೇನೂ ತಪ್ಪಿಲ್ಲ... ನಾನು ತಿಂದ್ರೆ ಬೇಲಿ ಮ್ಯಾಗಿನ ಸೊಪ್ಪು ತಿಂತೀನಿ. ಈ ರಾಜಕಾರಣಿಗಳ ತರ ಸಿಕ್ಕಿದ್ದೆಲ್ಲ ತಿಂತೀನಾ?' ಮೇಕೆ ಕಣ್ಣೀರು ಹಾಕಿತು.

'ಲೇಯ್, ಅವರೇನು ಸುಂಸುಮ್ನೆ ಪಾದಯಾತ್ರೆ ಮಾಡ್ತಾರಾ? ತೀರ ಗಂಡಸ್ತನದ ಮಾತಾಡ್ತಾರೆ ಅಂದ್ರೆ ಏನರ್ಥ? ನಿನ್ನಿಂದಲೇ ಅದೆಲ್ಲ ಆಗಿರೋದು' ಹೋತ ನೇರ ಆರೋಪ ಮಾಡಿತು.

'ನಂಗೇನೂ ಗೊತ್ತಿಲ್ಲ, ನಂಗೂ ಅದ್ಕೂ ಸಂಬಂಧ ಇಲ್ಲ' ಮೇಕೆ ವಾದಿಸಿತು.

ಅಷ್ಟರಲ್ಲಿ ಕೊಟ್ಟಿಗೆಯಲ್ಲಿದ್ದ ಹಸುವೊಂದು 'ಲೇಯ್ ತೆಪರಗಳಾ... ಮೇಕೆದಾಟು ಅಂದ್ರೆ ಅದು ಮೇಕೆ ದಾಟಿದ್ದಲ್ಲ. ಅದರ ಹೆಸರಲ್ಲಿ ಜನರಿಗೆ ನೀರು ಕುಡಿಸೋದು. ಮುಂದೆ ಎಲೆಕ್ಷನ್ ಬಂದಾಗ ಮುಖ್ಯಮಂತ್ರಿ ಆಗೋದು...'

'ಅಲ್ಲ ಜನರಿಗೆ ಗುಂಡು ಕೊಡಿಸಿ ಎಲೆಕ್ಷನ್ ಗೆಲ್ಲೋದು ಕೇಳಿದೀನಿ. ನೀರು ಕುಡಿಸಿದ್ರೆ ಜನ ವೋಟು ಹಾಕ್ತಾರಾ?' ಹೋತಕ್ಕೆ ಅನುಮಾನ.

'ಮತ್ತೆ ಇವರು ಪಾದಯಾತ್ರೆ ಮಾಡಿದ್ರೆ ಅವರು ನಿಲ್ಲಿಸ್ತಾರಲ್ಲ ಯಾಕೆ? ಮುಖ್ಯಮಂತ್ರಿ ಆಗೋದನ್ನ ತಡೆಯೋಕಾ?' ಕುರಿ ಕೇಳಿತು.

'ಹ್ಞಂ ಮತ್ತೆ, ರಾಜಕೀಯ ಅಂದ್ರೆ ಅದೇ' ಹಸು ತಲೆಯಾಡಿಸಿತು.

'ಹಂಗಾದ್ರೆ ನಾನೂ ಪಾದಯಾತ್ರೆ ಮಾಡ್ತೀನಿ' ಮೇಕೆ ಹೇಳಿದಾಗ ಎಲ್ಲರಿಗೂ ಆಶ್ಚರ್ಯ.

'ಏನು? ನೀನೂ ಪಾದಯಾತ್ರೆ ಮಾಡ್ತೀಯಾ? ಯಾಕೆ?'

'ನನ್ನ ಹೆಸರಲ್ಲಿ ಪಾದಯಾತ್ರೆ ಮಾಡೋರು ಮುಖ್ಯಮಂತ್ರಿ ಆಗೋದಾದ್ರೆ ನಾನೇ ಪಾದಯಾತ್ರೆ ಮಾಡಿ ನಾನೇ ಮುಖ್ಯಮಂತ್ರಿ ಆಗಬಹುದಲ್ವಾ?'

ಮೇಕೆ ತರ್ಕಕ್ಕೆ ಯಾರಿಗೂ ಮಾತೇ ಹೊರಡಲಿಲ್ಲ!

ಚರ್ಚೆ

ಮೇಕೆದಾಟು: ಕಾಣಿ ಇನ್ನೊಂದು ಮುಖ

ಯಾವುದೇ ಒಂದು 'ಅಭಿವೃದ್ಧಿ' ಯೋಜನೆಯ ಪರಿಸರ ಪರಿಣಾಮದ ಅಂದಾಜು ಮಾಡುವುದು ಅಗತ್ಯ

• ಅ.ನಾ.ಯಲ್ಲಪ್ಪ ರೆಡ್ಡಿ

ಮೇಕೆದಾಟು ಜಲಾಶಯ ಯೋಜನೆಯನ್ನು ಏಕೆ ಕೈಬಿಡಬೇಕು ಎನ್ನುವ ಬಗ್ಗೆ ಅನೇಕ ತಜ್ಞರು ಈಗಾಗಲೇ ಅರ್ಥಪೂರ್ಣವಾಗಿ ಹೇಳಿದ್ದಾರೆ. ನಾನು ಕೆಲ ಅಂಶಗಳನ್ನಷ್ಟೇ ಸೇರ್ಪಡೆ ಮಾಡುವ ಪ್ರಯತ್ನವನ್ನಿಲ್ಲಿ ಮಾಡಿದ್ದೇನೆ. ಮೊದಲಿಗೆ, ಈ ಭೂಗ್ರಹದ ಮೇಲಿನ ಎಲ್ಲ ನದಿಗಳಿಗೂ ತಮ್ಮದೇ ಆದ ಹಕ್ಕುಗಳಿವೆ. ಬೆಟ್ಟದಲ್ಲಿ ಹುಟ್ಟಿ ಕೆಳಗೆ ಹರಿದುಬರುವ ನದಿ ತನ್ನ ಹಾದಿಗುಂಟ ತನ್ನದೇ ಜೀವವ್ಯವಸ್ಥೆಯನ್ನು, ಅಂತರ್ಜಲವನ್ನು ಸೃಷ್ಟಿ ಮಾಡಿಕೊಳ್ಳುತ್ತಾ ನಡೆಯುತ್ತದೆ. ಮಳೆ ನೀರನ್ನು ಶುದ್ಧಿಗೊಳಿಸಿ ಭೂಗರ್ಭಕ್ಕೆ ಸೇರಿಸುತ್ತಾ ಹೋಗುತ್ತದೆ.

ಮೇಕೆದಾಟು ಅರಣ್ಯ ಪ್ರದೇಶದಲ್ಲಿ ಬಹಳ ವಿಶೇಷವಾದ ಜೀವವೈವಿಧ್ಯ ಇದೆ. ಕಾವೇರಿ ರಾಷ್ಟ್ರೀಯ ಉದ್ಯಾನದ ಆನೆಕಾಡು 50 ಲಕ್ಷ ವರ್ಷಗಳಲ್ಲಿ ನಿಸರ್ಗ ಸೃಷ್ಟಿ ಮಾಡಿರುವ ಸ್ವಾಭಾವಿಕ ಅರಣ್ಯ. ಇಲ್ಲಿರುವ ಅಮೂಲ್ಯ ಜೀವರಾಶಿಯೇ ಕಾವೇರಿಯನ್ನು ಜೀವನದಿಯನ್ನಾಗಿಸಿರುವುದು. ಅಂತಹ ಕೆಲ ಮಹಾನ್ ವೃಕ್ಷಗಳ ಬಗ್ಗೆ ಇಲ್ಲಿ ಹೇಳಲೇಬೇಕು. ಮೊದಲನೆಯದಾಗಿ, ಕಮ್ಮರ (Hardwickia binata). ಇದಕ್ಕೆ ಅಂಜರ್ ಎಂದೂ ಹೆಸರಿದೆ. ಮೇಕೆದಾಟು ಯೋಜನೆಯಿಂದ ಮುಳುಗಡೆಯಾಗುವ ಪ್ರದೇಶದಲ್ಲಿ ಅನೇಕ ಲಕ್ಷ ಕಮ್ಮರಗಳಿವೆ. ಇದರ ಬೇರು, ಬಂಡೆಗಳನ್ನು ಕೊರೆದುಕೊಂಡು 25-30 ಅಡಿ ಆಳ ಹೋಗುತ್ತದೆ. ಕಾಂಡ ಐದರಿಂದ ಹತ್ತು ಅಡಿ ದಪ್ಪ ಇದ್ದು ಟನ್‌ಗಟ್ಟಲೆ ತೊಗಟೆ ಉತ್ಪತ್ತಿ ಮಾಡುತ್ತದೆ. ಈ ತೊಗಟೆಗೆ ಪಾದರಸವನ್ನು ಹೀರಿಕೊಳ್ಳುವ ವಿಶೇಷ ಗುಣ ಇದೆ.

ಪಾದರಸ ಒಂದು ಅತ್ಯಂತ ಅಪಾಯಕಾರಿ ರಾಸಾಯನಿಕ. ನಮ್ಮ ದೇಶ ಪ್ರಪಂಚದಲ್ಲೇ ಅತೀ ಹೆಚ್ಚು ಪಾದರಸ ಬಳಸುವ ದೇಶ ಮತ್ತು ನದಿಗಳು ಈಗ ಇದರ ತ್ಯಾಜ್ಯ ವಿಲೇವಾರಿ ಕೇಂದ್ರಗಳೇ ಆಗಿಹೋಗಿವೆ. ಕಮ್ಮರದ ತೊಗಟೆ ನೀರಿಗೆ ಬಿದ್ದಾಗ ಅಲ್ಲಿರುವ ಪಾದರಸವನ್ನು ಹೀರಿಕೊಂಡು ನದಿಯನ್ನು ಶುದ್ಧಗೊಳಿಸುತ್ತದೆ. ಇಂತಹ ಶೇ 90ರಷ್ಟು ಕಮ್ಮರದ ಮರಗಳು ಈ ಯೋಜನೆಯಿಂದ ನಾಶವಾಗುತ್ತವೆ.

ಎರಡನೆಯದು, ಹೊಳೆಮತ್ತಿ (Terminalia arjuna). ಕಾವೇರಿ ನದಿಗುಂಟ ಈ ಮರಗಳು ಯಥೇಚ್ಛವಾಗಿದ್ದು ಬೇಕಾದಷ್ಟು ತೊಗಟೆಯನ್ನು ನೀರಿಗೆ ಉದುರಿಸುತ್ತವೆ. ಹೃದಯದ ಆರೋಗ್ಯವನ್ನು ಕಾಪಾಡುವ ಮಹಾನ್ ಗುಣ ಹೊಳೆಮತ್ತಿಯ ತೊಗಟೆಗಿದೆ. ಆಯುರ್ವೇದದಲ್ಲಿ ಇದಕ್ಕೆ ಹೃದಯದ ಟಾನಿಕ್ ಅಥವಾ ಅರ್ಜುನರಿಷ್ಟಾ ಎನ್ನುತ್ತಾರೆ. ಕಪ್ಪೆ, ಏಡಿ, ಮೀನಿನಂತಹ ಹೃದಯ ಇರುವ ಪ್ರಾಣಿಗಳಿಗೆ ಇದೇ ಟಾನಿಕ್. ಜಲಾಶಯ ಈ ಮರಗಳನ್ನೆಲ್ಲಾ ನುಂಗಿಬಿಡುತ್ತದೆ.

ಮೂರನೆಯದು, ನೇರಳೆ (Syzygium cumini). ಈ ಪ್ರದೇಶದಲ್ಲಿ ಹತ್ತಕ್ಕೂ ಹೆಚ್ಚು ಪ್ರಭೇದಗಳ ಲೆಕ್ಕವಿಲ್ಲದಷ್ಟು ನೇರಳೆ ಮರಗಳಿವೆ. ನೇರಳೆಯನ್ನು 'ನೇಚರ್ಸ್ ಬ್ಲಡ್ ಬ್ಯಾಂಕ್' ಅನ್ನುತ್ತೇವೆ. ರಕ್ತದಲ್ಲಿ ಸಕ್ಕರೆ ಪ್ರಮಾಣ ನಿಯಂತ್ರಿಸಲು ಅದರ ಬೀಜವನ್ನು ಉಪಯೋಗಿಸುತ್ತಾರೆ. ಪ್ರಾಣಿ ಪಕ್ಷಿಗಳಾದಿಯಾಗಿ ಸಕಲ ಜಲಚರಗಳಿಗೂ ಅತ್ಯಂತ ಪ್ರಿಯವಾದ ಪೌಷ್ಟಿಕ ಆಹಾರ ನೇರಳೆ ಹಣ್ಣು, ಇವೆಲ್ಲಾ ಈಗ ಜಲಾಶಯಕ್ಕೆ ಬಲಿಯಾಗುತ್ತವೆ.

ನಾಲ್ಕನೆಯದು, ಚಿಗರೆ ಮರ (Albizia Amara). ಇದರ ಬೇರು 25-30 ಅಡಿ ಆಳಕ್ಕೆ ಹೋಗುತ್ತದೆ. ಕಾವೇರಿಯ ಹರಿವಿನಗುಂಟ ಭೂಮಿಗೆ ನೀರನ್ನು ಇಂಗಿಸಿ ನದಿಯನ್ನು ಬತ್ತದಂತೆ ಕಾಪಾಡುವಲ್ಲಿ ಇದರ ಪಾತ್ರ ದೊಡ್ಡದು.

ಇನ್ನು ಬೆಟ್ಟಗಳಲ್ಲಿರುವ ಮಾಕಳಿ ಬೇರು. ಬಂಡೆಗಳ ಮಧ್ಯದಲ್ಲಿ 20-30 ಅಡಿ ನೇರವಾಗಿ ಆಳಕ್ಕೆ ಹೋಗುವ ಇದು ಅಷ್ಟೇ ಅಗಲಕ್ಕೆ ಹರಡಿಕೊಂಡು ಬೆಳೆಯುತ್ತದೆ. ಎಲ್ಲಾ ಥರದ ರೋಗಕಾರಕಗಳನ್ನು ನಾಶ ಮಾಡುವ ವಿಶಿಷ್ಟ ಗುಣ ಇದಕ್ಕಿದೆ. ಕಾವೇರಿ ನದಿಗೆ ಅದರ ಹಾದಿಗುಂಟ ಹರಿದು ಸೇರುವ ರೋಗಕಾರಕಗಳನ್ನೆಲ್ಲಾ ಇದು ಒಂದು ಕಡೆಯಿಂದ ಶುದ್ಧಿ ಮಾಡುತ್ತಾ ಬರುತ್ತದೆ. ಇವಲ್ಲದೆ ಕಾಡಿನಲ್ಲಿ ಬೆಳೆಯುವ ಅಸಂಖ್ಯಾತ ಔಷಧೀಯ ವನಸ್ಪತಿಯ ಬಗ್ಗೆ ವಿಶೇಷವಾಗಿ ಹೇಳಬೇಕಿಲ್ಲ. ಇವೆಲ್ಲಾ ಸಸ್ಯರಾಶಿ ಜೀವನದಿಗೆ ತಾನು ಸೃಷ್ಟಿಸಿದ ಜೀವವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಪೂರಕ ವಾತಾವರಣವನ್ನು ಸೃಷ್ಟಿ ಮಾಡುತ್ತವೆ. ಕಾವೇರಿ ನದಿ ಸೃಷ್ಟಿಸಿಕೊಂಡಿರುವ ಬೆಂಬಲ ವ್ಯವಸ್ಥೆ ಇದು.



ಇನ್ನೊಂದು ಕಡೆ ಈ ಮಹಾನ್ ವೃಕ್ಷಗಳ ಪೊಟರೆಗಳಲ್ಲಿ ಗೂಬೆಗಳು ಮನೆ ಮಾಡಿಕೊಂಡು ಇಲಿ, ಹೆಗ್ಗಣಗಳ ಸಂತತಿ ಮಿತಿಮೀರದಂತೆ ನಿಯಂತ್ರಿಸಿ ಸಮತೋಲನ ಕಾಪಾಡುತ್ತವೆ. ಇಲ್ಲಿ ವಾಸಿಸುವ ಹದ್ದುಗಳು ಸತ್ತ ಪ್ರಾಣಿಗಳನ್ನು ಕ್ಷಣಮಾತ್ರದಲ್ಲಿ ತಿಂದು ಸ್ವಚ್ಛ ಮಾಡಿ ರೋಗ ಹರಡದಂತೆ ನೋಡಿಕೊಳ್ಳುತ್ತವೆ. ಮೇಕೆದಾಟು ಜಲಾಶಯ ನಿರ್ಮಾಣವೆಂದರೆ ಇವೆಲ್ಲದರ ಸರ್ವನಾಶ ಎಂದೇ ತಿಳಿಯಬೇಕು.

ಯಾವುದೇ ಒಂದು 'ಅಭಿವೃದ್ಧಿ' ಯೋಜನೆಯ ಪರಿಸರ ಪರಿಣಾಮದ ಅಂದಾಜು ಮಾಡುವುದು ಅಗತ್ಯ. ಮೇಕೆದಾಟು ಯೋಜನೆಯಲ್ಲಿ ಇಂತಹ ಗಂಭೀರ ವಿಚಾರಗಳ ಪ್ರಸ್ತಾಪ ಆಗದಿರುವುದು ದುರಂತವೇ ಸರಿ. ಏಕೆಂದರೆ, ಕಾವೇರಿಯನ್ನು ಜೀವನದಿಯನ್ನಾಗಿಸಿರುವ ಈ ಎಲ್ಲಾ ಜೀವರಾಶಿ ನಾಶವಾದ ಮೇಲೆ ಇದರಿಂದ ಪೂರೈಸುವ ನೀರು ಕುಡಿಯುವ ನೀರು ಹೇಗಾದೀತು? ಇಲ್ಲಿ ನೀವು ಶುದ್ಧವಾದ ನೀರನ್ನು ಮಲಿನಗೊಳಿಸಿ, ವಿಷಪೂರಿತ ನೀರನ್ನು ಪೂರೈಕೆ ಮಾಡುತ್ತೀರಿ. ಈಗಾಗಲೇ ಕಾವೇರಿ ನದಿಯ 25 ಸಾವಿರ ಚದರ ಕಿ.ಮೀ. ಜಲಾನಯನ ಪ್ರದೇಶದ ಬಹುಭಾಗವನ್ನು ಗ್ರಾನೈಟ್ ಗಣಿಗಾರಿಕೆಗೆ ಬಲಿ ಕೊಟ್ಟಿರುವ ನಾವು ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚಿಸಬೇಕಿದೆ.

ವಾಚಕರ ವಾಣಿ

ಅಳಿಸಲಾಗದ ಶಾಯಿ: ಕಳಂಕ ಮೆತ್ತದಿರಲಿ

ಪ್ರತೀ ಚುನಾವಣೆಯಲ್ಲಿ ಬಳಸುವಷ್ಟು ವಿಶ್ವಾಸಾರ್ಹತೆಯನ್ನು ಗಳಿಸಿಕೊಂಡಿರುವ ಅಳಿಸಲಾಗದ ಶಾಯಿ (ಇಂಡೆಲಿಬಲ್ ಇಂಕ್) ಮೈಸೂರಿನ 'ಅರಗು ಮತ್ತು ಬಣ್ಣ' ಕಾರ್ಖಾನೆಯಲ್ಲಿ ತಯಾರಾಗುವುದು ಕರ್ನಾಟಕಕ್ಕೂ ಹೆಮ್ಮೆಯ ವಿಷಯವೇ. ಈ ಸಂಗತಿಯನ್ನು ತಿಳಿಸುವ ಸುದ್ದಿಯಲ್ಲಿ ಒಂದು ಆತಂಕಕಾರಿ ಅಂಶವೂ ಇದೆ. ಸುದ್ದಿಗೆ ಪೂರಕವಾಗಿ ಮಾಧ್ಯಮದಲ್ಲಿ ಮುದ್ರಿಸಿರುವ ಚಿತ್ರವನ್ನು ನೋಡಿದರೆ, ಅಳಿಸಲಾಗದ ಶಾಯಿಯನ್ನು ತುಂಬಿಸುವ ಬಾಟಲಿಯ ಬಣ್ಣ ಕೇಸರಿ ಬಣ್ಣದಲ್ಲಿರುವಂತೆ ತೋರುತ್ತದೆ. ಇದು ನಿಜವೇ ಆಗಿದ್ದರೆ, ಮುಂಬರುವ ಚುನಾವಣೆಗಳಲ್ಲಿ ಬಳಸಲಾಗುವ ಈ ಬಾಟಲಿಯ ಬಣ್ಣವು ಸಂಘ ಪರಿವಾರ ಮತ್ತು ಅದರ ರಾಜಕೀಯ ಅಂಗದ ವಿವಿಧ ಲಾಂಛನಗಳ ನಿರ್ದಿಷ್ಟ ಬಣ್ಣವಾಗಿರುವುದರಿಂದ, ಅದು ಆ ಪಕ್ಷವು ಚುನಾವಣಾ ನೀತಿ-ನಿಯಮಗಳನ್ನು ಉಲ್ಲಂಘಿಸುವ, ಚುನಾವಣಾ ಭ್ರಷ್ಟಾಚಾರದ ಆಪಾದನೆಗಳನ್ನು ಹೊರಲು ಕಾರಣವಾಗಬಹುದು.

ಈಗಾಗಲೇ ಭಾರತದ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗವು ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಅನುಕೂಲಕರವಾದ ಪಕ್ಷಪಾತದ ಕ್ರಮಗಳನ್ನು ಅನುಸರಿಸುತ್ತಿದೆಯೆಂಬ ಆಪಾದನೆಗಳನ್ನು ಎದುರಿಸುತ್ತಿದೆ. ಕೇಸರಿ ಬಣ್ಣವು ಭಾರತದ ರಾಷ್ಟ್ರೀಯ ಧ್ವಜದ ಬಣ್ಣಗಳಲ್ಲಿ ಒಂದೆಂದೂ, ಆದ್ದರಿಂದ ಆಕ್ಷೇಪಾರ್ಹವಲ್ಲವೆಂಬ ಮಾಮೂಲು ಸಮರ್ಥನೆ, ನಿರಾಕರಣೆಗಳಲ್ಲಿನ ಸತ್ಯಾಂಶಗಳು ಬೇರೆ ಸಂದರ್ಭಗಳಲ್ಲಿ ಹೇಗೇ ಇದ್ದರೂ ಚುನಾವಣಾ ಸಂದರ್ಭದಲ್ಲಿ ಅವು ಕಾನೂನಿನ ಚೌಕಟ್ಟಿನೊಳಗೆ ನಿರ್ಧಾರವಾಗಬೇಕಾಗುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ 'ಅಳಿಸಲಾಗದ ಶಾಯಿ'ಯ ಮೂಲಕ ಮೈಸೂರಿನ 'ಅರಗು ಮತ್ತು ಬಣ್ಣ' ಕಾರ್ಖಾನೆಯು ಗಳಿಸಿಕೊಂಡಿರುವ ಸುದೀರ್ಘ ಕಾಲದ ವಿಶ್ವಾಸಾರ್ಹತೆಯು ಅದರ ಬಾಟಲಿಯ ಈಗಿನ ಬಣ್ಣದಿಂದ ಮಣ್ಣುಪಾಲಾಗುತ್ತದೆ.

ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ರಿಯಾಲಿಟಿ ಷೋ: ಎಳೆಯರನ್ನು ಕೈಬಿಡಿ

ಕಿರುತೆರೆ ಬಾಲಪ್ರತಿಭೆ ಸಮನ್ವಿ ದುರಂತ ಸಾವಿಗೀಡಾಗಿದ್ದು ಅತೀವ ಸಂಕಟ ತರಿಸಿತು. ಹೆತ್ತವರ ಯಾತನೆಯು ಪದಗಳನ್ನು ಮೀರಿದ್ದು. ಆದಷ್ಟು ಶೀಘ್ರ ಅವರು ಆಘಾತದಿಂದ ಹೊರಬರಲಿ. ಸಾವು ಹೇಳಿ ಕೇಳಿ ಬಾರದಾದರೂ ನಮ್ಮ ಎಚ್ಚರಿಕೆ ನಮಗಿರಬೇಕು. ತಮ್ಮ ಮಕ್ಕಳನ್ನು ವಾಹನಗಳಲ್ಲಿ ಕರೆದೊಯ್ಯುವಾಗಲಂತೂ ಪೋಷಕರಿಗೆ ಮೈಯೆಲ್ಲ ಕಣ್ಣಾಗಿರಬೇಕು. ಎಳೆಯ ಕಂದಮ್ಮಗಳನ್ನು ದೂರದರ್ಶನದ ರಿಯಾಲಿಟಿ ಷೋಗಳಲ್ಲಿ ತಾನೆ ಏಕೆ ಭಾಗಿಗಳನ್ನಾಗಿಸಬೇಕು? ಈಗಾಗಲೇ ಅವರು ಅನುಭವಿಸುತ್ತಿರುವ ಒತ್ತಡ ಸಾಲದೇ? ತಮ್ಮ ಮಕ್ಕಳಿಗೆ ಚಿತ್ರ ವಿಚಿತ್ರ ವೇಷ ತೊಡಿಸಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುವುದಿದೆ. ಮಕ್ಕಳಿಗೆ ತಾವು ಏನನ್ನು ತೊಟ್ಟಿದ್ದೇವೆಂಬ ಅರಿವು ಇರದು. ಅವರಿಗೆ ಅದು ಅಸಹನೀಯ ಹೊರೆಯೇ ಹೌದು. ಮಕ್ಕಳಿಗೆ ಸಹಜ ದಿರಿಸುಗಳೇ ಸಾಕು ಮಿಂಚಲು. ಒಂದೊಂದು ಮಗುವೂ ಶ್ರೇಷ್ಠ, ವಿಶಿಷ್ಟ. ಅದು ಯಾರೊಂದಿಗೂ ಸ್ಪರ್ಧೆಗಿಳಿಯುವ ಅಗತ್ಯವೇ ಕಾಣದು.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಅನಗತ್ಯ ಲಾಠಿ ಪ್ರಹಾರ ನಿಲ್ಲಿಸಿ

ಕೋವಿಡ್ ಹರಡುವಿಕೆಯನ್ನು ನಿಯಂತ್ರಿಸಲು ಎರಡು ವಾರಗಳಿಂದ ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯ ಕರ್ಫ್ಯೂ ಹೇರಲಾಗಿದೆ. ಈ ಸಮಯದಲ್ಲಿ ಅನಗತ್ಯ ಓಡಾಟವನ್ನು ಕಡಿಮೆ ಮಾಡಲು ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಂಡಿದೆ. ಅಗತ್ಯ ವಸ್ತುಗಳ ಖರೀದಿಗಾಗಿ ಹೊರಬರಬಹುದು ಎಂದು ಸರ್ಕಾರದ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ. ಆದರೂ ಪೊಲೀಸರು ಯಾವುದೇ ವಿಚಾರಣೆ ಇಲ್ಲದೆ ಅನೇಕ ಜನಸಾಮಾನ್ಯರ ಮೇಲೆ ಲಾಠಿಪ್ರಹಾರ ಮಾಡುತ್ತಿರುವುದು ಅತಿಶೋಚನೀಯ. ಪೊಲೀಸ್ ಎಂದರೆ ಜನರಲ್ಲಿ ಗೌರವಭಾವ ಇರಬೇಕೇ ವಿನಾ ಭಯವಲ್ಲ. ಈ ಕುರಿತು ಗೃಹ ಸಚಿವರು ಮತ್ತು ಪೊಲೀಸ್ ಆಯುಕ್ತರು ಸೂಕ್ತ ಕ್ರಮವನ್ನು ಕೈಗೊಳ್ಳುವುದು ಅಗತ್ಯವಾಗಿದೆ.

ಮಲ್ಲಿಕಾರ್ಜುನ ಕೊಳ್ಳುರ, ಕಲಬುರಗಿ

ಹೆಲ್ಮೆಟ್‌ಗಿರಲಿ ಕೊಂಚ ವಿನಾಯಿತಿ

ಕೊರೊನಾದ ಈ ಕಾಲದಲ್ಲಿ ಮಾಸ್ಕ್ ಜೊತೆಗೆ ಕೆಲವರು ಮುಖಗವಸನ್ನೂ (ಫೇಸ್ ಶೀಲ್ಡ್) ಬಳಸುವುದು ಸಾಮಾನ್ಯವಾಗಿದೆ. ಆದರೆ ಇದರಿಂದ ನಿಜವಾಗಿಯೂ ಸಮಸ್ಯೆ ಎದುರಿಸುತ್ತಿರುವವರು ದ್ವಿಚಕ್ರ ವಾಹನ ಚಾಲಕರು. ಗಾಡಿ ಓಡಿಸಬೇಕಾದರೆ ಮಾಸ್ಕ್ ಧರಿಸಿ, ಫೇಸ್ ಶೀಲ್ಡ್ ಜೊತೆಗೆ ಹೆಲ್ಮೆಟ್ ಮೂರನ್ನೂ ಹಾಕಿಕೊಂಡು ವಾಹನ ಓಡಿಸುವುದು ಅಷ್ಟು ಸುಲಭವಲ್ಲ. ನಮ್ಮ ಕಣ್ಣುಗಳ ಸುರಕ್ಷತೆಗಾಗಿ ಕೆಲವು ಸಲ ಹೆಲ್ಮೆಟ್ ಅನ್ನು ಪೂರ್ತಿ ಮುಚ್ಚಿಕೊಂಡು ಚಲಾಯಿಸಬೇಕಾಗುತ್ತದೆ. ಇನ್ನು ಅನೇಕರು ಕನ್ನಡಕ ಬೇರೆ ಹಾಕಿಕೊಳ್ಳಬೇಕಾಗುತ್ತದೆ. ಇದರಿಂದ ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಹೀಗಾಗಿ ಕೆಲ ದಿನಗಳ ಮಟ್ಟಿಗೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದಕ್ಕೆ ವಿನಾಯಿತಿ ನೀಡುವುದು ಒಳಿತು.

ಹರವೆಸಂಗಣ್ಣಪ್ರಕಾಶ್, ಚಾಮರಾಜನಗರ

ನೀರಿಗಾಗಿ ಹೋರಾಟ: ಮನೆಯಿಂದ ಆರಂಭವಾಗಲಿ


ಮೇಕೆದಾಟು ಯೋಜನೆಯ ಕುರಿತು ನಾಗೇಶ ಹೆಗಡೆಯವರು ಲೇಖನದಲ್ಲಿ (ಪ್ರ.ವಾ., ಜ. 13) ಹೇಳಿರುವಂತೆ, ಈ ಯೋಜನೆಯ ಹೋರಾಟಕ್ಕೆ ಸಿಕ್ಕಿರುವ ಪ್ರಚಾರ ಹಾಗೂ ಬೆಂಬಲದ ಅರ್ಧದಷ್ಟಾದರೂ ಬೆಂಬಲ ಹಾಗೂ ಪ್ರಚಾರವು ಕೆರೆಗಳ ಹೂಳೆತ್ತುವ ಮತ್ತು ಮಳೆ ನೀರು ಸಂಗ್ರಹಿಸುವ ಕುರಿತಾದ ಯೋಜನೆಗಳಿಗೆ ಸಿಕ್ಕಿದರೆ ಭವಿಷ್ಯದಲ್ಲಿ ತಲೆದೋರುವ ನೀರಿನ ಕೊರತೆಯನ್ನು ನೀಗಿಸಬಹುದು. ನಮ್ಮಲ್ಲಿ ಮಳೆ ನೀರು ಸಂಗ್ರಹ ಹಾಗೂ ಕೆರೆ ಹೂಳೆತ್ತುವುದಕ್ಕೆ ಅನೇಕ ಯೋಜನೆಗಳಿದ್ದು, ನರೇಗಾ ಯೋಜನೆಯಡಿ ಹಾಗೂ ಕೆಲವು ಸ್ವಯಂಸೇವಾ ಸಂಘಟನೆಗಳ ವತಿಯಿಂದ ಅನೇಕ ಕೆರೆಗಳ ಹೂಳೆತ್ತಿ ಮರುಜೀವ ನೀಡಲಾಗಿದೆ. ಆದರೂ ಅದು ಒಂದು ಸಾಮೂಹಿಕ ಕಾರ್ಯವಾಗಿ ಜಾರಿಯಾಗಿಲ್ಲ. ಮೇಕೆದಾಟು ಯೋಜನೆ ಒಂದೇ ಅಲ್ಲ, ಎತ್ತಿನಹೊಳೆ, ಕಳಸಾ ಬಂಡೂರಿ, ಬೆಣ್ಣೆತೊರೆ, ಶರಾವತಿ ಹೀಗೆ ಇನ್ನೂ ಅನೇಕ ಬೃಹತ್ ನೀರಾವರಿ ಯೋಜನೆಗಳು ನೀರಿಗಿಂತ ಹೆಚ್ಚಾಗಿ ಹಣದ ಹೊಳೆಯನ್ನು ಹರಿಸುತ್ತವೆ! ಹಾಗಾಗಿ ಜಲ ಸಂರಕ್ಷಣೆ ಅಥವಾ ನೀರಿಗಾಗಿ ಹೋರಾಟ ಎನ್ನುವುದು ನಮ್ಮ ಮನ, ಮನೆಯಿಂದಲೇ ಆರಂಭವಾಗಬೇಕು. ಅದರ ಅರಿವು ಪ್ರತಿಯೊಬ್ಬರಿಗೂ ಆಗಬೇಕು ಹಾಗೂ ಅದು ನಮ್ಮ ಆದ್ಯ ಕರ್ತವ್ಯ.

ಸುವರ್ಣ ಸಿ.ಡಿ., ತರೀಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತು ಕಸ್ತೂರಿ ರಂಗನ್ ನೇತೃತ್ವದ ಸಮಿತಿಯ ವರದಿ ಅನುಷ್ಠಾನ ಬೇಕೇ ಬೇಡವೇ?

ಗರ್ಭಗುಡಿಯ ನಿಯಮ ಘಟ್ಟಕ್ಕೂ ಬೇಕು



ಪಶ್ಚಿಮ ಘಟ್ಟಗಳ ಕೊಡುಗೆ ಭೂಗ್ರಹಕ್ಕೆ ಮೂರು ವಿಧವಾದದ್ದು. ಒಂದು, ಅದೊಂದು ಅಪರೂಪದ ಜೀವಖಜಾನೆ. ಅದನ್ನಿನ್ನೂ ನಾವು ಸರಿಯಾಗಿ ನೋಡಲೇ ಇಲ್ಲ. ಎರಡನೆಯದಾಗಿ, ಏಳು ರಾಜ್ಯಗಳಿಗೆ ಅದೊಂದು ಜಲಖಜಾನೆ. ಮೂರನೆಯದಾಗಿ ಅದು ಇಡೀ ದಕ್ಷಿಣ ಭಾರತದ ಹವಾಗುಣವನ್ನು ಪ್ರಭಾವಿಸುತ್ತಿದೆ, ನಿರ್ಧರಿಸುತ್ತಿದೆ. ಬರುತ್ತಿರುವ ಭೂಜ್ವರದ ಸನ್ನಿವೇಶದಲ್ಲಿ ಅದರ ಪಾತ್ರ ಇನ್ನಷ್ಟು ಮಹತ್ವದ್ದಾಗುತ್ತಿದೆ. ಹಾಗಾಗಿ ಈ ರಕ್ಷಾಕವಚವನ್ನು ನಾವು ರಕ್ಷಿಸಿಕೊಳ್ಳಬೇಕು

ಪ್ರಜಾವಾಣಿ ಚರ್ಚೆ

• ನಾಗೇಶ ಹೆಗಡೆ

ಪಶ್ಚಿಮ ಘಟ್ಟಗಳೆಂದರೆ ಆ ಘಟ್ಟ ಪ್ರದೇಶದ ನಿವಾಸಿಗಳ ಆಸ್ತಿ ಅಷ್ಟೇ ಅಲ್ಲ. ಅದು ರಾಜ್ಯದ ಆಸ್ತಿ, ದೇಶದ ಆಸ್ತಿ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಅದು ಜಾಗತಿಕ ಆಸ್ತಿ. ಕಳೆದ 350 ಕೋಟಿ ವರ್ಷಗಳಿಂದ ನಿಸರ್ಗದ ಐದೂ ಶಕ್ತಿಗಳು ಒಂದಾಗಿ ಕಡೆದು ನಿಲ್ಲಿಸಿದ ಅಪರೂಪದ ಜೀವಶಿಲ್ಪ ಅದು. ಈಚಿನ ವರ್ಷಗಳಲ್ಲಿ ಆ ಶಿಲ್ಪವನ್ನು ವಿರೂಪಗೊಳಿಸುವ ಕ್ರಿಯೆಯಲ್ಲಿ ಇಡೀ ಜಗತ್ತಿನ ಯಂತ್ರಬಲವೇ ಟೊಂಕಕಟ್ಟಿ ನಿಂತಂತಿದೆ. ಅಲ್ಲಿ ಮರ ಕಡಿಯಲು ಜರ್ಮನ್ ಇಲೆಕ್ಟ್ರಿಕ್ ಗರಗಸಗಳು ಬಂದಿವೆ. ಜಪಾನೀ ಹಿಟಾಚಿ ಯಂತ್ರಗಳು ಗುಡ್ಡಗಳನ್ನು ಸಪಾಟು ಮಾಡುತ್ತಿವೆ. ಟರ್ಕಿಯ ಡೈನಮೈಟ್‌ಗಳು ಅಲ್ಲಿನ ಕಣಿವೆಗಳಲ್ಲಿ ಸ್ಫೋಟಿಸುತ್ತಿವೆ. ಅಂಥ ಜಾಗತಿಕ ಧ್ವಂಸ ಕ್ರಿಯೆಯನ್ನು ತಡೆಗಟ್ಟಬೇಕೆಂದರೆ ಜಾಗತಿಕ ವಿವೇಕವೇ ಜಾಗೃತವಾಗಬೇಕಿದೆ. ಅದಕ್ಕೆ ವರ್ತಮಾನದ ದೃಷ್ಟಿಕೋನ ಇದ್ದರೆ ಸಾಲದು. ನೂರು ವರ್ಷಗಳಾಚಿನ ದೂರದರ್ಶಿ ಧೋರಣೆ ಬೇಕಿದೆ. ನಾವು ಈ ಖಜಾನೆಯ ಬಹುಪಾಲನ್ನು ಇಂದೇ ಲೂಟಿ ಹೊಡೆದರೆ ಮುಂದಿನ ಪೀಳಿಗೆಗೆ ಅದನ್ನು ಉಳಿಸಿಕೊಳ್ಳಬೇಕೆಂಬ ಆಶಯವೇ ಉಳಿಯಲಾರದು.

ಪಶ್ಚಿಮ ಘಟ್ಟಗಳ ಕೊಡುಗೆ ಭೂಗ್ರಹಕ್ಕೆ ಮೂರು ವಿಧವಾದದ್ದು, ಒಂದು, ಅದೊಂದು ಅಪರೂಪದ ಜೀವಖಜಾನೆ. ಅದನ್ನಿನ್ನೂ ನಾವು ಸರಿಯಾಗಿ ನೋಡಲೇ ಇಲ್ಲ. ಎರಡನೆಯದಾಗಿ, ಏಳು ರಾಜ್ಯಗಳಿಗೆ ಅದೊಂದು ಜಲಖಜಾನೆ. ಮೂರನೆಯದಾಗಿ ಅದು ಇಡೀ ದಕ್ಷಿಣ ಭಾರತದ ಹವಾಗುಣವನ್ನು ಪ್ರಭಾವಿಸುತ್ತಿದೆ, ನಿರ್ಧರಿಸುತ್ತಿದೆ. ಬರುತ್ತಿರುವ ಭೂಜ್ವರದ ಸನ್ನಿವೇಶದಲ್ಲಿ ಅದರ ಪಾತ್ರ ಇನ್ನಷ್ಟು ಮಹತ್ವದ್ದಾಗುತ್ತಿದೆ. ಹಾಗಾಗಿ ಈ ರಕ್ಷಾಕವಚವನ್ನು ನಾವು ರಕ್ಷಿಸಿಕೊಳ್ಳಬೇಕು. ಅಷ್ಟೇ ಅಲ್ಲ; ಈಗಿನ ಪೀಳಿಗೆಗೂ ಅದನ್ನು ಉಳಿಸಿಕೊಳ್ಳಬೇಕು. ಈ ಘಟ್ಟಸಾಲುಗಳು ಕ್ಷೇಮವಾಗಿದ್ದರೆ ನಾವೂ ಕ್ಷೇಮ ಎಂಬ ಪ್ರಜ್ಞೆ ಕೇವಲ ಘಟ್ಟನಿವಾಸಿಗಳಿಗಷ್ಟೇ ಅಲ್ಲ, ದೂರದ ರಾಯಚೂರು, ಬೀದರ್, ಕೋಲಾರದ ಜನಪ್ರತಿನಿಧಿಗಳಲ್ಲೂ ಜನರಲ್ಲೂ ಮೂಡಬೇಕು. ಈ ಘಟ್ಟಸಾಲಿಗೆ ಸಂಕಷ್ಟ ಬಂದರೆ ದಿಲ್ಲಿಯಲ್ಲಿದ್ದವರವರೆಗೆ ಅಲ್ಲ, ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳೂ ಅದನ್ನು ಗಂಭೀರವಾಗಿ ಪರಿಗಣಿಸಬೇಕು.

ಈಗ ಅದಕ್ಕೆ ಸಂಕಷ್ಟ ಬಂದಿದೆ. ಏರುತ್ತಿರುವ ಜನಸಂಖ್ಯೆ ಹಾಗೂ ಅಭಿವೃದ್ಧಿಯ ಸುನಾಮಿ ಎರಡೂ ಅದನ್ನು ಕಂಡಕಂಡಲ್ಲಿ ಘಾಸಿ ಮಾಡುತ್ತಿವೆ. ಘಟ್ಟದ ಮೂಲನಿವಾಸಿಗಳಿಗೆ ತಮಗೂ ಕರೆಂಟ್ ಬೇಕು, ಕಾಂಕ್ರೀಟ್ ರಸ್ತೆ ಬೇಕು, ನೆಟ್‌ವರ್ಕ್ ಬೇಕು, ಶುಂಠಿ ಬೆಳೆಯಲು ಜೆಸಿಬಿ ಬೇಕು, ಕೀಟನಾಶಕ ವಿಷ ಬೇಕು ಎನ್ನಿಸುತ್ತದೆ. ಘಟ್ಟದಾಚಿನ ಕೋಟ್ಯಧೀಶರೂ ತಮಗೆ ಅಲ್ಲೊಂದು ಎಸ್ಟೇಟ್ ಬೇಕು, ಬ್ರಿಜ್ ಬೇಕು, ರೆಸಾರ್ಟ್ ಬೇಕು, ಬೋರ್‌ವೆಲ್ ಬೇಕು, ಟ್ರೀ ಹೌಸ್ ಬೇಕು, ರೋಪ್‌ವೇ ಬೇಕು, ಮಿನಿಹೈಡೆಲ್



ಬೇಕು, ಆರ್ಕಿಡೇರಿಯಂ ಬೇಕು ಎಂದು ಬಯಸುತ್ತಾರೆ. ಅವರಿಗೆ ನೆರವಾಗಲೆಂದು ಮರಳು, ಗ್ರಾನೈಟ್, ಟಿಂಬರ್ ದಲ್ಲಾಳಿಗಳು, ಗುತ್ತಿಗೆದಾರರು, ಟೂರ್ ಮತ್ತು ಕೇಬಲ್ ಆಪರೇಟರ್‌ಗಳು. ಅವರ ಮಧ್ಯೆ ಕಳ್ಳಸಾಗಣೆದಾರರು, ಬೇಟೆಗಾರರು, ಅತಿಕ್ರಮಣದಾರರು, ಕಾರ್ಪೊರೇಟ್ ತಳಿಚೋರರು. ಕೋಟಿಗಟ್ಟಲೆ ಜನರು ಹೀಗೆ ಲಗ್ಗೆ ಹಾಕಿರುವಾಗ ಅಭಿವೃದ್ಧಿಯ ಈ ಸುನಾಮಿಗೆ ತಡೆಗೋಡೆ ಹಾಕಲೇಬೇಕು ಎಂದು ವಿವೇಕವಂತರು ಬಯಸುತ್ತಾರೆ.

ಅದರ ಫಲವೇ ಈ ಗಾಡ್ಗೀಳ್ ವರದಿ, ಕಸ್ತೂರಿ ರಂಗನ್ ವರದಿ. ಘಟ್ಟನಿವಾಸಿಗಳ ಬದುಕುವ ಹಕ್ಕುಗಳಿಗೆ ಧಕ್ಕೆ ಆಗದಂತೆ, ಆದರೆ ಘಟ್ಟದ ಲಗ್ಗೆಗೆ ಮಿತಿ ಹಾಕಬಲ್ಲ ಕೆಲವು ಶಿಫಾರಸುಗಳನ್ನು ಅವು ಮಾಡಿವೆ. ಈಗಿರುವ ಅರಣ್ಯ ರಕ್ಷಣಾ ಕಾನೂನುಗಳ ಅಡಿಯಲ್ಲಿ ಕೆಲವು ಪ್ರದೇಶಗಳು (ತಕ್ಕಮಟ್ಟಿಗೆ) ಸುರಕ್ಷಿತ ಇವೆ ನಿಜ. ಅದರಾಚೆಗೂ ಕೆಲವು ನಿರ್ಬಂಧ ಹಾಕಬೇಕೆಂದು ವರದಿ ಹೇಳುತ್ತದೆ. ಕ್ಯಾನ್ಸರ್ ಕಾಯಿಲೆ ಉಲ್ಬಣದ ಸ್ಥಿತಿಗೆ ಹೋಗುತ್ತಿರುವಾಗ ಅಳಿದುಳಿದ ಅಂಗಾಂಗಗಳನ್ನು ಸುರಕ್ಷಿತ ಇಡಲು ಕಟ್ಟುನಿಟ್ಟಾದ ಥೆರಪಿ ಬೇಕಲ್ಲವೆ? ಆದರೆ 'ವೈದ್ಯರೇ ಬೇಡ, ಮನೆಮದ್ದು ಸಾಕು' ಎಂಬಂತೆ (ಕಸ್ತೂರಿ ರಂಗನ್ ವರದಿಯೇ ಬೇಡವೆಂದು) ಸಚಿವ ಸಂಪುಟ ನಿರ್ಧರಿಸಿದೆ. 'ಈಗಿರುವ ಅರಣ್ಯ ರಕ್ಷಣಾ ಕಾನೂನುಗಳೇ ಸಾಕು; ಹೆಚ್ಚಿನದೇನೂ ಬೇಕಾಗಿಲ್ಲ' ಎಂಬ ಧೋರಣೆ ಅದರದ್ದು.

ಕಸ್ತೂರಿ ರಂಗನ್ ವರದಿಯನ್ನು ಯಾರಾದರೂ ಓದಿದ್ದಾರೆಯೆ? ಹೋಗಲಿ, ಕನ್ನಡಕ್ಕೆ ಅದನ್ನು ತರ್ಜುಮೆ ಮಾಡಿ, ಘಟ್ಟನಿವಾಸಿಗಳ ಜೊತೆ ಸಮಾಲೋಚನೆ, ವಿವೇಕವಂತರ ಜೊತೆ ಚರ್ಚೆ ನಡೆಸಿ ನಂತರ ನಿರ್ಣಯಿಸಬಹುದಿತ್ತು. ಅದನ್ನು ಮಾಡಿಲ್ಲ. ಡಾ. ಕಸ್ತೂರಿ ರಂಗನ್ ಬೆಂಗಳೂರಿನಲ್ಲೇ ಇದ್ದಾರೆ. ಅವರನ್ನು ವಿಧಾನ ಸಭೆಗೆ ಕರೆಸಿ ಸಮಿತಿಯ ಆಶಯ ಏನಿತ್ತೆಂಬುದನ್ನು ಶಾಸಕರಿಗೆ ತಿಳಿಸುವ ಯತ್ನ ಮಾಡಬಹುದಿತ್ತು. ಅದನ್ನೂ ಮಾಡಿಲ್ಲ. ಪಶ್ಚಿಮಘಟ್ಟಗಳೆಂಬ ಈ ಅಪರೂಪದ ಜಾಗತಿಕ ಖಜಾನೆಯ ಅತಿ ದೊಡ್ಡ ಭಾಗ (ಶೇಕಡಾ 65 ಪಾಲು) ನಮ್ಮ ರಾಜ್ಯದಲ್ಲೇ ಇದೆ. ಅದರ ರಕ್ಷಣೆಯ ಅತಿ ದೊಡ್ಡ ಹೊಣೆ ನಮ್ಮದು. ಹಾಗಿರುವಾಗ ನಾವೇ ಇದರ 'ಹಣೇಬರ ಆದದ್ದಾಗಲಿ, ಶುಶ್ರೂಷೆ ಅಗತ್ಯವಿಲ್ಲ' ಎಂಬ ಧೋರಣೆ ತಳೆದಿದ್ದು ಸರಿಯೆ? ಅದು ನಮ್ಮ ಜಾಗತಿಕ ಜವಾಬ್ದಾರಿಯನ್ನು ನಿರ್ವಹಿಸುವ ರೀತಿಯೆ?

ಈ ವರದಿಯಲ್ಲಿ ಗ್ರಾಮಸ್ಥರನ್ನು ಅವರ ನೆಲೆಯಿಂದ ಹೊರದೂಡುವ ಪ್ರಸ್ತಾವ ಇಲ್ಲ. ಅವರ ನಿತ್ಯ ಜೀವನಕ್ಕೆ ಯಾವುದೇ ತೊಂದರೆ ಉಂಟುಮಾಡುವ ಕ್ರಮಗಳೂ ಇಲ್ಲ. ನಿರ್ಬಂಧಿತ ಏನೇನೆಂದರೆ (1) ವಾಣಿಜ್ಯ ಉದ್ದೇಶಕ್ಕಾಗಿ ಮರಳು ಮತ್ತು ಕಲ್ಲಿನ ಗಣಿಗಾರಿಕೆಗೆ ಅನುಮತಿ ಇಲ್ಲ (ಆದರೆ ಸ್ವಂತಕ್ಕೆ ಅಂಥ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು; ಕಿರು ಜಲವಿದ್ಯುತ್, ಗಾಳಿಯಂತ್ರ, ಸೋಲಾರ್ ಸ್ಥಾಪಿಸಬಹುದು). ಪರಿಸರಕ್ಕೆ ಅಪಾಯ ತರಬಲ್ಲ (ಅಂದರೆ ಈಗಾಗಲೇ 'ಕೆಂಪು ಪಟ್ಟಿ'ಗೆ ಸೇರಿದ) ಉದ್ಯಮಗಳು- ಅಂದರೆ ರಸಗೊಬ್ಬರ, ಕೀಟನಾಶಕಗಳ ತಯಾರಿಕೆ ಹಾಗೂ ಕಚ್ಚಾತೈಲ ಸಂಸ್ಕರಣೆ ಮಾಡುವಂತಿಲ್ಲ; (3) ನೀರಿಗೆ ಕೊಳೆ ಸೇರಿಸುವ ಕಾಫಿ ಪಲ್ಪಿಂಗ್, ಗೋಡಂಬಿ-ಕಿತ್ತಳೆ, ಅನಾನಸ್ ಮತ್ತಿತರ ಆಹಾರ ಸಂಸ್ಕರಣೆಗೆ ಮುಕ್ತ ಅವಕಾಶ ಇಲ್ಲ. ಗ್ರಾಮಸಭೆ ಒಪ್ಪಿದರೆ ಮಾತ್ರ ಅನುಮತಿ. (4) 20 ಸಾವಿರ ಚ.ಮೀ. ಮೀರಿದ ಭಾರೀ ಕಟ್ಟಡ ಕಟ್ಟುವಂತಿಲ್ಲ; 50 ಹೆಕ್ಟೇರ್ ಮೀರಿದ ಪಟ್ಟಣ ವಿಸ್ತರಣೆ ಇಲ್ಲ. ಇದರಲ್ಲಿ ಯಾವ ಅಂಶ ಜನವಿರೋಧಿ ಇವೆ ಹೇಳಿ! ಗಣಿಗಾರಿಕೆಗೆ, ದೊಡ್ಡ ಉದ್ಯಮಗಳಿಗೆ ಮಾತ್ರ ಅಲ್ಲಿ ದಂಧೆ ನಡೆಸುವುದು ಕಷ್ಟವಾಗುತ್ತದೆ. ಜನರ ಬದುಕಿಗೆ ಯಾವ ತೊಂದರೆಯೂ ಇಲ್ಲವಲ್ಲ. ಈ ಭೂಭಾಗವನ್ನು ನಿಸರ್ಗದ ಗರ್ಭಗುಡಿ ಎಂದು ಪರಿಗಣಿಸುವುದಾದರೆ, ಅದರಲ್ಲಿದ್ದವರು ಅದರ ನೈರ್ಮಲ್ಯ ಕಾಪಾಡಬೇಕು. ಅಲ್ಲಿ ಕೆಲವು ಅಪವಿತ್ರ ಕೆಲಸಗಳಿಗೆ ನಿಷೇಧ ಹಾಕಿರಬೇಕು. ಈ ವರದಿಗೆಂದು ಗಡಿ ಗುರುತಿಸುವಾಗ ಕೆಲವು ಲೋಪಗಳಾಗಿವೆ ನಿಜ. ಯಾವುದು ನೈಸರ್ಗಿಕ, ಯಾವುದು ಮಾನವ ನಿರ್ಮಿತ ಎಂಬುದನ್ನು ಉಪಗ್ರಹ ನಕಾಶೆಯಲ್ಲಿ ಸೂಚಿಸುವಾಗ ಅಲ್ಲಲ್ಲಿ ಕೆಲವು ಊರುಗಳೂ ನೈಸರ್ಗಿಕ ವಿಭಾಗಕ್ಕೆ ಸೇರಿವೆ. ಆಗಲೂ ಜನರು ಆತಂಕಪಡಬೇಕಿಲ್ಲ. ಏಕೆಂದರೆ ಅಲ್ಲಿಯೂ ಜನರನ್ನು ಗುಳೆ ಎಬ್ಬಿಸುವ ಸೂಚನೆ ಕೂಡ ಇಲ್ಲ.

ಕೇರಳದಲ್ಲಿ ಕಸ್ತೂರಿ ರಂಗನ್ ವರದಿಯನ್ನು ಮಲೆಯಾಳಂ ಭಾಷೆಗೆ ಅನುವಾದಿಸಿ, ವಿವಾದಿತ ಸ್ಥಳಗಳನ್ನು ಗುರುತಿಸಿ, ಸ್ಥಳೀಯ ಜನರ ಜೊತೆ ಸಮಾಲೋಚನೆ ನಡೆಸಿ ಕೆಲವು ಸ್ಥಳಗಳನ್ನು ಕೈಬಿಡಲು ನಿರ್ಧರಿಸಲಾಗಿದೆ. ನಮ್ಮಲ್ಲಿ ಅಂಥ ಯಾವುದನ್ನೂ ಮಾಡದೇ ಇಡೀ ವರದಿಯೇ ಜನಪರ ಇಲ್ಲ ಎಂದು ನಿರ್ಣಯಿಸುವುದರ ಹಿಂದೆ ಉದ್ಯಮಿಗಳ ಹಾಗೂ ಗುತ್ತಿಗೆದಾರರ ಕೈವಾಡ ಇದೆ ಎಂಬುದು ಸ್ಪಷ್ಟವಾಗಿದೆ. ಗ್ರಾಮೀಣ ಪ್ರಜಾಪ್ರಭುತ್ವವನ್ನು ಕಡೆಗಣಿಸಿ, ಬೆಂಗಳೂರಿನ ಅಧಿಕಾರಶಾಹಿ ನಿರ್ಣಯವನ್ನೇ ದಿಲ್ಲಿಗೆ ಕಳಿಸುವುದೆಂದರೆ ಅದು ಪ್ರಜಾಪ್ರಭುತ್ವದ ಅಣಕವೇ ವಿನಾ ಮತ್ತೇನಲ್ಲ. ದೂರದೃಷ್ಟಿ ಇಲ್ಲದ, ಸ್ವಾರ್ಥಸಾಧಕರ ದನಿಯೇ ಅಂತಿಮವಾದರೆ ಅದು ಜೀವವಿರೋಧಿ ಧೋರಣೆಯೇ ವಿನಾ ಮತ್ತೇನಲ್ಲ.

ಲೇಖಕ: ವಿಜ್ಞಾನ ಬರಹಗಾರ

ಪಶ್ಚಿಮ ಘಟ್ಟದಲ್ಲಿ ಮನುಷ್ಯರೂ ಇದ್ದಾರೆ ಎಂಬುದನ್ನೇ ಮರೆತ ವರದಿ

• ಸುಧೀರ್ ಕುಮಾರ್ ಮುರೊಳ್ಳಿ

ಪೂರ್ಣಚಂದ್ರ ತೇಜಸ್ವಿಯವರ ಕರ್ವಾಲೊ ಕಾದಂಬರಿಯಲ್ಲಿ ಮಂದಣ್ಣನ ಪರಿಸರ ಸೂಕ್ಷ್ಮ ಮಾತುಗಳನ್ನು ವಿಜ್ಞಾನಿ ಕರ್ವಾಲೊ ಕೇಳಿಸಿಕೊಳ್ಳುತ್ತಾರೆ; ಬಳಿಕ, ಘಟ್ಟ ಪ್ರದೇಶಗಳಲ್ಲಿ, ಅದರ ಕೊರಕಲುಗಳಲ್ಲಿ ನಿಂತು ಅಲ್ಲಿನ ಜನರು ಕಾಡು–ನೀರು ಕಾಪಾಡುವ ಬಗ್ಗೆ ಆಡುವ ಪಿಸುಮಾತುಗಳನ್ನು, ಕಾಡಾಡಿಗಳ ಬಗ್ಗೆ ಮರ–ಗಿಡ ಪಕ್ಷಿಗಳು ಉಸುರುವ ದನಿಯನ್ನು ಕೇಳಿಸಿಕೊಳ್ಳುವ ಜನವಿಜ್ಞಾನಿಯಾಗಿಬಿಡುತ್ತಾರೆ. ಅದೇ ರೀತಿಯೊಳಗೆ ಘಟ್ಟದೊಳಗೆ ತಾನೊಂದಾಗಿ ನಿಂತು ವರದಿ ನೀಡಬೇಕಾಗಿದ್ದ ಡಾ.ಕಸ್ತೂರಿ ರಂಗನ್ ನೇತೃತ್ವದ ಸಮಿತಿ, ಕಾಲಿಗೆ ಮಣ್ಣು ಮುಟ್ಟಿಸಿಕೊಳ್ಳದೇ ಬಾಹ್ಯಾಕಾಶದಲ್ಲೇ ನಿಂತು ವರದಿ ಕೊಟ್ಟಿದ್ದೇ ಸಮಸ್ಯೆಗಳಿಗೆಲ್ಲ ಕಾರಣ.

ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿ ನೀಡಿದ ವರದಿಯನ್ನು ಕೇಂದ್ರ ಸರ್ಕಾರ ಒಪ್ಪಲೂ ಇಲ್ಲ, ತಿರಸ್ಕರಿಸಿದ್ದೇವೆ ಎಂದೂ ಹೇಳಲಿಲ್ಲ. ಹಾಗಾಗಿ, ಗಾಡ್ಗೀಳ್ ಹಾಗೂ ಕಸ್ತೂರಿರಂಗನ್ ವರದಿಗಳಿಗೆ ಪರಸ್ಪರ ಸಂಬಂಧವಿದೆ ಎಂಬುದನ್ನು ಒಪ್ಪಬೇಕು. ಬಾಹ್ಯಾಕಾಶ ವಿಜ್ಞಾನಿ ಕಸ್ತೂರಿ ರಂಗನ್ ನೇತೃತ್ವದ ಒಂಬತ್ತು ಜನರ ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಸರ್ಕಾರ 2012ರ ಆಗಸ್ಟ್ 17ರಂದು ನೇಮಿಸಿತು. ಈ ಸಮಿತಿಯು ಕ್ಷೇತ್ರಕಾರ್ಯ, ಭೌತಿಕ ಪರಿಶೀಲನೆ ನಡೆಸದೇ ವಾಸ್ತವ ಪರಿಸ್ಥಿತಿ ನೋಡದೇ ಕೇವಲ ಎಂಟೇ ತಿಂಗಳಿನಲ್ಲಿ ವರದಿ ಸಲ್ಲಿಸಿತು. ವಿಜ್ಞಾನಿಯೊಬ್ಬರ ನೇತೃತ್ವದ ಸಮಿತಿ ನೀಡಿದ ಅವೈಜ್ಞಾನಿಕ ವರದಿ ಇದು ಎಂದರೆ ಹೆಚ್ಚು ಸಮಂಜಸವಾದೀತು.

ದೇಶದ ಆರು ಪ್ರಮುಖ ರಾಜ್ಯಗಳಿಗೆ ಸಂಬಂಧಿಸಿದಂತೆ ವರದಿ ತಯಾರಿಸಲು ಈ ಸಮಿತಿ ನೆಚ್ಚಿಕೊಂಡಿದ್ದು ಇಸ್ರೊ ಸಂಸ್ಥೆಯ ಡಾಟಾಬೇಸ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ತಯಾರಿಸಿದ್ದ ಮಾಹಿತಿಗಳು. ಇದನ್ನೇ ವೈಜ್ಞಾನಿಕ ಮಾಹಿತಿ ಆಧಾರದಲ್ಲಿ ನೀಡಿರುವ ವರದಿ ಎಂದು ಸಮಿತಿ ಹೆಮ್ಮೆಯಿಂದ ಹೇಳಿಕೊಂಡಿದೆ. ಈ ವರದಿ ಅತ್ಯಂತ ಕ್ರಾಂತಿಕಾರಿಯಾಗಿದ್ದು, ಇದನ್ನು ಜಾರಿಮಾಡಲೇಬೇಕೆಂದು ಕೆಲವರು ವಾದ ಮಂಡಿಸುತ್ತಲೇ ಇದ್ದಾರೆ. ತಮ್ಮ ಬಾಳು–ಬದುಕನ್ನು ಪಶ್ಚಿಮ ಘಟ್ಟದ ತಪ್ಪಲಿನಲ್ಲೋ ಗುಡ್ಡದಲ್ಲೋ ತಲೆಮಾರುಗಳಿಂದ ಸವೆಸುತ್ತಾ, ಕಾಡನ್ನು ತಮ್ಮ ತಾಯಿಯಂತೆ ಕಾಪಾಡಿಕೊಂಡು ಬಂದ ಅಸಲಿ ಪರಿಸರವಾದಿಗಳಾದ ಜನರು ಈ ವರದಿಯನ್ನು ವಿರೋಧಿಸುತ್ತಿರುವುದಕ್ಕೆ ವೈಜ್ಞಾನಿಕ ಹಾಗೂ ವಾಸ್ತವಿಕ ಸತ್ಯಗಳೇ ಬಲಿಷ್ಠ ಕಾರಣ.

ಕಸ್ತೂರಿರಂಗನ್ ವರದಿಯು ಪಶ್ಚಿಮ ಘಟ್ಟವನ್ನು ಎರಡು ವಿಭಾಗದಲ್ಲಿ ಗುರುತಿಸಿ ಹೆಚ್ಚು ಜನವಸತಿ ಇರುವ ಶೇ 63ರಷ್ಟು ಭಾಗವನ್ನು ಕಲ್ಚರಲ್ ಲ್ಯಾಂಡ್ ಸ್ಕೇಪ್ ಎಂದೂ ಜನವಸತಿ ಕಡಿಮೆ ಇರುವ ಅರಣ್ಯ ಹೆಚ್ಚಾಗಿರುವಂತೆ ಕಂಡ ಉಪಗ್ರಹ ಆಧಾರಿತ ಭೂ ಭಾಗವನ್ನು ನ್ಯಾಚುರಲ್ ಲ್ಯಾಂಡ್ ಸ್ಕೇಪ್ ಎಂದೂ ಗುರುತಿಸಿದೆ. ನ್ಯಾಚುರಲ್ ಲ್ಯಾಂಡ್ ಸ್ಕೇಪ್ ಎಂದು ಗುರುತಿಸಿದ ಪ್ರದೇಶದಲ್ಲಿ ರಕ್ಷಿತಾರಣ್ಯ, ಅಭಯಾರಣ್ಯ, ರಾಷ್ಟ್ರೀಯ ಉದ್ಯಾನ, ಹುಲಿ ಯೋಜನೆಯ ಮೀಸಲು – ಘೋಷಿತ ಹಾಗೂ ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶಗಳು ಇವೆ. ಈ ಭೂ ಪ್ರದೇಶ ಹೊರತುಪಡಿಸಿ, ಸಮಿತಿ ಹೆಚ್ಚುವರಿಯಾಗಿ ಗುರುತಿಸಿರುವ ಸುಮಾರು 20,000 ಚದರ ಕಿಲೋಮೀಟರ್ ಪ್ರದೇಶದಲ್ಲಿ ಇರುವ ಜನವಸತಿ, ಹಳ್ಳಿಗಳ ಕೃಷಿಕರು, ಜನ ಸಮುದಾಯಗಳ ಕುರಿತು ನಿರ್ಲಕ್ಷ್ಯ ತಾಳಿದೆ. ವರದಿಯು ಭವಿಷ್ಯದಲ್ಲಿ ಈ ಜನರನ್ನು ಅಲ್ಲಿಂದ ಎತ್ತಂಗಡಿ ಮಾಡುವ ಅಥವಾ ವರದಿಯ ಶಿಫಾರಸುಗಳು ಅಲ್ಲಿ ವಾಸಿಸುವ ಜನರ ಬದುಕನ್ನು ಅಸಹನೀಯವಾಗಿಸಿದಾಗ ಅವರೇ ಅನಿವಾರ್ಯವಾಗಿ ಹೊರಬರುವಂತೆ ಮಾಡುವ ಸಂಚು ಹೊಂದಿದೆ.

ಕಾಡಿನಲ್ಲಿ ವನ್ಯಜೀವಿ - ಮಾನವ ಸಂಘರ್ಷವು ನಿತ್ಯದ ಹಿಂಸೆಯಾಗುತ್ತಿದೆ. ಈ ಬಗ್ಗೆ ಹಾಗೂ ವನ್ಯಜೀವಿಗಳಿಂದ ಆದ ಬೆಳೆ ಹಾನಿಗೆ ಈ ನೆಲದ ಮೂಲ ನಿವಾಸಿಗಳಿಗೆ ಪರಿಹಾರ ಒದಗಿಸುವ ಸರ್ಕಾರದ ನೈತಿಕ ಹೊಣೆಗಾರಿಕೆಯ ಬಗ್ಗೆ ವರದಿ ಪ್ರಸ್ತಾಪವನ್ನೇ ಮಾಡಿಲ್ಲ.

ಮರಳು, ಕಲ್ಲು ಗಣಿಗಾರಿಕೆಯ ಸಂಪೂರ್ಣ ನಿಷೇಧಕ್ಕೆ ಸಮಿತಿ ಶಿಫಾರಸು ಮಾಡಿದೆ. ಹಾಗಾದರೆ, ಕನಿಷ್ಠ ಅವಶ್ಯಕತೆಗಾಗಿ ಬೇಕಾಗಿರುವ ಮರಳು, ಕಲ್ಲುಗಳಿಗೆ ಜನರು ಎಲ್ಲಿಗೆ ಹೋಗಬೇಕು. ಇದಕ್ಕಾಗಿ ಒಂದಷ್ಟು ವಿನಾಯಿತಿ ಅಗತ್ಯವಿದೆ. ಇದನ್ನು ಪ್ರಸ್ತಾಪ ಮಾಡಿದ ಕೂಡಲೇ, ಗಣಿ ಮಾಫಿಯಾದವರು ವರದಿಯನ್ನು ವಿರೋಧಿಸುತ್ತಿದ್ದಾರೆ ಎಂದು ಹುಯಿಲೆಬ್ಬಿಸುತ್ತಾರೆ. ಆದರೆ ನದಿ ಮೂಲಕ್ಕೆ, ಪರಿಸರಕ್ಕೆ ಧಕ್ಕೆಯಾಗುವ ಉದ್ಯಮಗಳ ವಿರುದ್ಧ ಸ್ಥಳೀಯರೇ ಹೋರಾಟ ರೂಪಿಸಿದಾಗ, ಇದೇ ಪಟ್ಟಭದ್ರರು ಜನ ಹೋರಾಟವನ್ನು ಹತ್ತಿಕ್ಕುವಲ್ಲಿ ಹಿಂದೆಲ್ಲ ಯಶಸ್ವಿಯಾಗಿರುವುದನ್ನು ನೆನಪಿಸಿಕೊಳ್ಳಲೇಬೇಕು. ನೀರಿನ ಮೂಲವು ಜಲದುರ್ಗಿ, ಕಾಡು ವನದುರ್ಗಿ, ನಾಗಬನ, ದೈವಬನ ಎಂದು ನಂಬಿ, ಅರಣ್ಯ ರಕ್ಷಿಸಿಕೊಂಡ ಜನರನ್ನೇ ಶಂಕೆಯಿಂದ ನೋಡುವುದೇ ನಿಜಕ್ಕೂ ಅಪಾಯಕಾರಿ.

ಪಶ್ಚಿಮಘಟ್ಟ ಪ್ರದೇಶದ ಕೃಷಿ ಬದುಕು ಹಾಗೂ ಬೆಳೆಗಳು ಏಕ ಪ್ರಕಾರವಾಗಿಲ್ಲ ಎಂಬ ಪರಿಜ್ಞಾನವೇ ಸಮಿತಿಗೆ ಇರಲಿಲ್ಲ. ಗುಜರಾತಿನಿಂದ ಕನ್ಯಾಕುಮಾರಿಯವರೆಗೆ ಇರುವ ಜನರ ಕೃಷಿ ಚಟುವಟಿಕೆ ವಿಭಿನ್ನವಾಗಿದೆ ಎಂಬುದನ್ನೂ ಗುರುತಿಸಿಲ್ಲ. ಆದರೆ, ಅತಿ ಬುದ್ಧಿವಂತಿಕೆ ತೋರಿರುವ ಸಮಿತಿಯು ಅಡಿಕೆ, ಕಾಫಿ ಬೆಳೆಗಳು ಬಹುಕೃಷಿ ಪದ್ಧತಿಗೆ ವಿರೋಧಿಯಾದ ಚಟುವಟಿಕೆ ಎಂಬಂತೆ ವಿಶ್ಲೇಷಿಸಿದೆ. ಅಲ್ಲದೇ ಇಲ್ಲಿರುವ ನೂರಾರು ವಿಧವಾದ ಹಣ್ಣು, ತರಕಾರಿ, ಆಹಾರ ಧಾನ್ಯಗಳ ಕೃಷಿ ವೈವಿಧ್ಯದ ರಕ್ಷಣೆಯ ಬಗ್ಗೆ ಯಾವುದೇ ಶಿಫಾರಸು ಮಾಡಿಲ್ಲ.



ಪಶ್ಚಿಮ ಘಟ್ಟದ ಜೀವ ವೈವಿಧ್ಯ ಉಳಿಯಬೇಕು ನಿಜ. ಆದರೆ, ಪಶ್ಚಿಮ ಘಟ್ಟದ ಸಂರಕ್ಷಣೆಯ ನೆಪದಲ್ಲಿ ಇಲ್ಲಿರುವ ನೆಲವಾಸಿಗಳನ್ನು ಶಂಕಿಸುವ, ಎತ್ತಂಗಡಿ ಮಾಡುವ ಬದಲು ಹಳ್ಳಿಗರ ಪರಿಸರ ಸಂರಕ್ಷಣೆಯ ಪ್ರಜ್ಞಾವಂತಿಕೆಯ ಮಾತುಗಳನ್ನು ಕೇಳಿಸಿಕೊಂಡ, ಜೀವ ಮತ್ತು ಮನುಷ್ಯ ಪ್ರೀತಿಯ ಶಿಫಾರಸುಗಳು ನಮಗೆ ಬೇಕಾಗಿವೆ. ಬೆಟ್ಟಗಳು ಜೀವ ತಳೆದು, ಬೆಳೆಯುತ್ತಾ ಬಂದಿರುವ ಕಾಲದಿಂದಲೂ ಬೆಟ್ಟದ ಜೀವಗಳಂತೆಯೇ ಇರುವವರ ಅಸ್ತಿತ್ವ ಉಳಿಸಬೇಕಾಗಿದೆ. ಅವರ ಜೀವ ಮತ್ತು ಜೀವನವೂ ಸೂಕ್ಷ್ಮ ಎಂದು ಅರಿವು ಬೇಕಾಗಿದೆ

ಪರಿಸರ ಪ್ರವಾಸೋದ್ಯಮವು 'ಹಸಿರು ಅಭಿವೃದ್ಧಿ'ಗೆ ಪೂರಕ ಎಂದು ಸಮಿತಿ ಹೇಳಿದೆ. ಇಂತಹ ಪ್ರವಾಸೋದ್ಯಮವು ಸ್ಥಳೀಯರಿಗೆ ನೀಡುವ ಉದ್ಯೋಗಾವಕಾಶಗಳನ್ನು ಅತಿರಂಜಿತವಾಗಿ ವಿವರಿಸಿದೆ. ಆದರೆ, ಪರಿಸರ ಪ್ರವಾಸೋದ್ಯಮದಲ್ಲಿ ಸ್ಥಳೀಯರು ನಗಣ್ಯವಾಗುವ ಹಾಗೂ ಪ್ರವಾಸಿತಾಣಗಳ ಗೇಟ್ ಕೀಪರ್‌ಗಳಾಗುವ ಸಂದರ್ಭಗಳ ಬಗ್ಗೆ ಸಮಿತಿಗೆ ಅರಿವೇ ಇಲ್ಲ.

ಕರ್ನಾಟಕ, ಕೇರಳ, ತಮಿಳುನಾಡಿಗೆ ಪರಿಸರ ಪ್ರವಾಸೋದ್ಯಮ ನೀತಿಗಳನ್ನು ರೂಪಿಸಲು ಶಿಫಾರಸು ಮಾಡಿರುವ ವರದಿಯು ಕಾರ್ಪೊರೇಟ್‌ಗಳ ಹಿತಾಸಕ್ತಿ ರಕ್ಷಣೆಯ ಪರವಾಗಿದೆ ಎಂಬುದನ್ನು ರುಜುವಾತುಪಡಿಸುತ್ತದೆ. ಅಲ್ಲದೇ ಪರೋಕ್ಷವಾಗಿ ಪರಿಸರದ ಶೋಷಕ ಶಕ್ತಿಗಳ ಪೋಷಕವಾಗಿ ನಿಂತಿದೆ ಎಂಬುದಂತೂ ಒಳಸತ್ಯ.

ಪರಿಸರ ಸೂಕ್ಷ್ಮ ವಲಯದಲ್ಲಿ ಭವಿಷ್ಯದ ಯೋಜನೆಗಳಲ್ಲಿ ಸ್ಥಳೀಯರ ಅಭಿಪ್ರಾಯ ಮುಖ್ಯ ಎಂದು ವಿವೇಕಯುತವಾಗಿ ಹೇಳಿದ ವರದಿಯು ಜಾರಿಯ ಪೂರ್ವದಲ್ಲಿ ಸ್ಥಳೀಯರ ಅಭಿಪ್ರಾಯ ಸಂಗ್ರಹಣೆಗೆ ಮುಂದಾಗದೇ ಇರುವುದು ಅವೈಜ್ಞಾನಿಕವಲ್ಲವೇ? ಈ ಸಮಿತಿಯು, ತನ್ನ ವರದಿಯ ಮಧ್ಯೆಯೇ ಬೃಹತ್ ನಗರಗಳ ಭವಿಷ್ಯದ ನೀರಿನ, ಶುದ್ಧ ಗಾಳಿಯ ಅವಶ್ಯಕತೆಯ ಬಗ್ಗೆ ಗಂಭೀರವಾಗಿ ಚರ್ಚೆ ಮಾಡುತ್ತಾ ನಗರದ ನಾಳೆಗಳಿಗಾಗಿ ಪಶ್ಚಿಮ ಘಟ್ಟ ವಾಸಿಗಳು ಬಲಿಯಾಗಬೇಕಾಗುವುದು ಅನಿವಾರ್ಯ ಎಂಬರ್ಥದಲ್ಲಿ ಶಿಫಾರಸು ಮಾಡಿರುವುದನ್ನು ನೋಡಿದರೆ ಸಮಿತಿ ಯಾರ ಪರ ಎಂಬುದು ಮೇಲ್ನೋಟಕ್ಕೇ ಸ್ಪಷ್ಟ.

ಪಶ್ಚಿಮ ಘಟ್ಟದ ಜೀವ ವೈವಿಧ್ಯ ಉಳಿಯಬೇಕು ನಿಜ. ಆದರೆ, ಪಶ್ಚಿಮ ಘಟ್ಟದ ಸಂರಕ್ಷಣೆಯ ನೆಪದಲ್ಲಿ ಇಲ್ಲಿರುವ ನೆಲವಾಸಿಗಳನ್ನು ಶಂಕಿಸುವ, ಎತ್ತಂಗಡಿ ಮಾಡುವ ಬದಲು ಹಳ್ಳಿಗರ ಪರಿಸರ ಸಂರಕ್ಷಣೆಯ ಪ್ರಜ್ಞಾವಂತಿಕೆಯ ಮಾತುಗಳನ್ನು ಕೇಳಿಸಿಕೊಂಡ, ಜೀವ ಮತ್ತು ಮನುಷ್ಯ ಪ್ರೀತಿಯ ಶಿಫಾರಸುಗಳು ನಮಗೆ ಬೇಕಾಗಿವೆ. ಬೆಟ್ಟಗಳು ಜೀವ ತಳೆದು, ಬೆಳೆಯುತ್ತಾ ಬಂದಿರುವ ಕಾಲದಿಂದಲೂ ಬೆಟ್ಟದ ಜೀವಗಳಂತೆಯೇ ಇರುವವರ ಅಸ್ತಿತ್ವ ಉಳಿಸಬೇಕಾಗಿದೆ. ಅವರ ಜೀವ ಮತ್ತು ಜೀವನವೂ ಸೂಕ್ಷ್ಮ ಎಂದು ಅರಿವು ಬೇಕಾಗಿದೆ. ಪಶ್ಚಿಮ ಘಟ್ಟದಲ್ಲಿ ಚೋಮ, ನಾಯಿಗುತ್ತಿ, ಐತ, ಪೀಂಚಲು, ಮಂದಣ್ಣ, ಗೋಪಾಲಯ್ಯ–ಶಂಕರಿ, ತಬರ, ಕಮಲಕ್ಕ, ಕಸ್ತೂರಿ –ರಂಗಣ್ಣ, ಸಿಂಗಣ್ಣ , ಅಬ್ರಹಾಂ, ಇಬ್ರಾಹಿಂ ಎಲ್ಲರೂ ಇದ್ದಾರೆ. ಅವರೆಲ್ಲರೂ ಕಾಡು, ನೆಲ, ನೀರು ಇವೆಲ್ಲವೂ ಹಿಂದಿನ ಪೀಳಿಗೆಯವರಿಂದ ಎರವಲು ಪಡೆದದ್ದು, ಮತ್ತೆ ಮುಂದಿನ ತಲೆಮಾರಿಗೆ ಉಳಿಸಿಹೋಗಲೇಬೇಕಾದದ್ದು ಎಂಬ ಆತ್ಮಸಾಕ್ಷಿಯೊಂದಿಗೆ ಬದುಕುತ್ತಿದ್ದಾರೆ ಎಂಬುದನ್ನು ನಾವೆಲ್ಲರೂ ಅರಿಯಬೇಕಾಗಿದೆ.

ಲೇಖಕ: ವಕೀಲ, ಕೊಪ್ಪ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 20

ಸಂಕ್ರಮಣ ಬದಲಾವಣೆ ಪರ್ವಕಾಲ

ಈ ಜಗತ್ತಲ್ಲಿ ಹುಟ್ಟಿದ ಪ್ರತಿ ಜೀವಿಯಲ್ಲೂ ಬದಲಾವಣೆ ಕಾಣುತ್ತಿರುತ್ತದೆ. ಪ್ರಕೃತಿಯಲ್ಲಂತೂ ಕ್ಷಣಕ್ಷಣಕ್ಕೂ ಅದರ ಕಣಕಣದಲ್ಲೂ ಬದಲಾವಣೆಯಾಗುತ್ತಿರುತ್ತದೆ. ಆದರೆ ಬದಲಾವಣೆಯ ಗಾಳಿಗೆ ಮೈಮನಸ್ಸು ತೆರೆದುಕೊಳ್ಳದ ಜೀವಿ ಇದ್ದರೆ ಅದು ಮನುಷ್ಯ ಮಾತ್ರ. ಮನುಷ್ಯ ಭೂಮಿಗೆ ಬಂದಾಗಿನಿಂದ ಇಲ್ಲಿವರೆಗೆ ತನ್ನ ಕಂಕುಳಲ್ಲಿ ಕಟ್ಟಿಕೊಂಡು ಬಂದ ಸ್ವಾರ್ಥತನ ಬಿಟ್ಟು, ಉತ್ತಮವಾಗಿ ಬದುಕುವುದನ್ನು ರೂಢಿಸಿಕೊಳ್ಳಲಿಲ್ಲ. ಕೋಟೆಕಟ್ಟಿ ಮೆರೆದವರಾರೂ ಶಾಶ್ವತವಾಗಿ ಉಳಿಯಲಿಲ್ಲ ಎಂಬ ಹಸಿಸತ್ಯ ನೆನಪಿದ್ದರೂ, ಪರರ ಶೋಷಿಸಿ ಬದುಕುವುದನ್ನು ಬಿಡಲಿಲ್ಲ. ಜಗತ್ತು ನಾವು ಕಂಡಷ್ಟು ಸರಳವೂ ಅಲ್ಲ, ತಿಳಿಯದಷ್ಟು ವಿರಳವೂ ಇಲ್ಲಿಲ್ಲ. ಇಲ್ಲಿ ಮೊಗೆದಷ್ಟು ಸತ್ಯದ ಅರಳು ಅನಾವರಣವಾಗುತ್ತದೆ; ಇಲ್ಲಿ ಮುಚ್ಚಿದಷ್ಟು ಮಿಥ್ಯದ ಉರುಳು ತಲೆಮಾರಿನಿಂದ ತಲೆಮಾರಿಗೆ ಬಿಗಿಯುತ್ತದೆ ಎಂಬ ಕಟು ಸತ್ಯ ತಿಳಿಯದಾದ. ತನ್ನ ಅಂಗೈಯಲ್ಲೇ ಸುಖವಿದ್ದರೂ, ಪರರ ಅಂಗಳದಲ್ಲಿ ಸುಖ ಅರಸುವ ಅಲೆಮಾರಿಯಾದ. ಇದರಿಂದಾಗಿಯೇ, ಇರುವ ಸುಖವ ಬಿಟ್ಟು, ಇಲ್ಲದಿರುವ ಸುಖದತ್ತ ತುಡಿಯುವುದನ್ನೇ ಜೀವನವಾಗಿಸಿಕೊಂಡು ಹಲುಬುತ್ತಿದ್ದಾನೆ.

ಪ್ರಕೃತಿಯ ಸತ್ಯದ ಮುಂದೆ ನಮ್ಮೆಲ್ಲ ಕಲ್ಪನೆಗಳು ಕುರುಡು ನಂಬಿಕೆಗಳಷ್ಟೆ. ಈ ಅಖಂಡ ಬ್ರಹ್ಮಾಂಡಕ್ಕೊಂದು ಜೀವವಿದೆ. ಆ ಜೀವ ಸೆಲೆಯಿಂದ ಮನುಷ್ಯನಂಥ ನಾನಾ ಜೀವಿಗಳು ಬದುಕುತ್ತಿವೆ ಎಂಬ ವಾಸ್ತವವನ್ನು ಒಳಗಣ್ಣಿನಿಂದ ನೋಡಿದಾಗ ಸತ್ಯದರ್ಶನವಾಗುತ್ತದೆ. ಅಲ್ಲಿ ಕೋಟ್ಯಂತರ ನಕ್ಷತ್ರರಾಶಿಗಳಿವೆ. ಪ್ರತಿ ನಕ್ಷತ್ರಕ್ಕೂ ಭೂಮಿಯಂಥ ಗ್ರಹಗಳು, ಅದರೊಳಗೆ ಜೀವಿಗಳು ವಾಸಿಸುತ್ತಿವೆ. ಇದನ್ನೆಲ್ಲ ಸೃಷ್ಟಿಸಿದವರಾರು? ನಮ್ಮ ಬ್ರಹ್ಮಾಂಡದ ಆಚೆಗೂ ಮತ್ತೊಂದು ಬ್ರಹ್ಮಾಂಡವಿದೆಯಾ? ಇಂಥ ಪ್ರಶ್ನೆಗಳು ನಮ್ಮನ್ನು ಕೊರೆಯುತ್ತವೆ. ಇಂಥ ಕೊರೆತ-ಕೊರತೆಗಳ ಅನುಜ್ಞೆಯನ್ನು ತಾಳಲಾರದೆ ನಮ್ಮ ಋಷಿಮುನಿಗಳು ಕಾಡುಮೇಡುಗಳಲ್ಲಿ ತಪಸ್ಸಿಗೆ ಕುಳಿತು ಚಿಂತನೆ ನಡೆಸಿದರು. ಅವರ ಚಿಂತನ ಸಾರವೇ ಪಾರಮಾರ್ಥಿಕ ಚಿಂತನೆಗಳಾಗಿ ಹರಿದು ಬಂದಿವೆ. ಭಾರತದ ನೆಲದಲ್ಲಿ ನಡೆದಷ್ಟು ಬ್ರಹ್ಮಾಂಡದಾಚೆಗಿನ ಚಿಂತನ-ಮಂಥನಗಳು ವಿಶ್ವದ ಯಾವ ಭೂಭಾಗದಲ್ಲೂ ನಡೆಯಲಿಲ್ಲ. ಆಧ್ಯಾತ್ಮಿಕ ಚಿಂತನೆಗಳು ಮನುಷ್ಯನ ಬೌದ್ಧಿಕ ಪ್ರಪಂಚವನ್ನೇ ಬದಲಿಸಿದವು. ನಿಸ್ಸಾರವಾದ ಭೌತಿಕ ಪ್ರಪಂಚದಲ್ಲಿ ಬುದ್ಧಿಗೆ ಶೂನ್ಯ ಆವರಿಸದಂತೆ ಮೈಮನಸ್ಸುಗಳನ್ನು ನಿಯಂತ್ರಿಸಲು ಧ್ಯಾನ-ಯೋಗಗಳು ಆವಿಷ್ಕಾರವಾದವು.

ಇಲ್ಲಿ ಸಾವಿರಾರು ದೇವರುಗಳು ಇದ್ದಾಗ್ಯೂ, ಅವರೆಲ್ಲಿದ್ದಾರೆ ಅಂತ ನಾಸ್ತಿಕರಾಗಿ ಶೋಧಿಸಿದವರ ಸಂಖ್ಯೆ ಕಡಿಮೆ ಇಲ್ಲ. ಹಾಗೆ ನೋಡಿದರೆ, ಈ ದೇಶದಲ್ಲಿ ಆಸ್ತಿಕಧರ್ಮಗಳಿಗಿಂತ ನಾಸ್ತಿಕಧರ್ಮ-ಪಂಥಗಳೇ ಹೆಚ್ಚಾಗಿ ಹುಟ್ಟಿವೆ. ಚಾರ್ವಾಕ ಸಿದ್ಧಾಂತವಂತೂ ಹಲವು ಚಿಂತನೆಗಳಿಗೆ ದಾರಿದೀಪವಾಗಿದೆ. ಆಸ್ತಿಕ-ನಾಸ್ತಿಕ ಸಿದ್ಧಾಂತಗಳ ಮಧ್ಯೆ ಸತ್ಯಶೋಧಕವರ್ಗವೂ ಹುಟ್ಟಿಕೊಂಡಿತು. ಲೋಕದ ಅಂಕುಡೊಂಕುಗಳನ್ನು ತಿದ್ದುವ, ಜನರ ಆಷಾಢಭೂತಿತನವನ್ನು ವಿಡಂಬಿಸುವ ಸತ್ಯವಾಚಕರು ಸಹ ಹುಟ್ಟಿ, ಪದಕಟ್ಟಿ ಹಾಡಿದರು. ಆದರೆ ನಮ್ಮಲ್ಲಿ ಬದಲಾವಣೆ ಪರ್ವ ಮಾತ್ರ ಕಾಣಲಿಲ್ಲ. ಬದಲಿಗೆ ಮತ್ತಷ್ಟು ಬೌದ್ಧಿಕವಾಗಿ ಹಿಂದುಳಿಯುತ್ತಾ ಹೋದೆವು. ಏಕೆಂದರೆ ಸೈದ್ಧಾಂತಿಕ ಘರ್ಷಣೆಯಲ್ಲಿ ಸತ್ಯಪರಿಶೋಧಕ ಕಣ್ಣು ತೆರೆಯುವ ಬದಲು, ವಿಕಾರ ಮನಃಸ್ಥಿತಿಯನ್ನು ರೂಢಿಸಿಕೊಂಡೆವು. ನಮ್ಮ ಪಂಥವೇ ಶ್ರೇಷ್ಠ, ನಮ್ಮ ಸಿದ್ಧಾಂತವೇ ಸರಿ ಅನ್ನೋ ಹಟಕ್ಕೆ ಬಿದ್ದೆವು. ಇದರಿಂದ ನಮ್ಮ ನೆಲದಲ್ಲಿ ಹುಟ್ಟಿದ ಸತ್ಯದ ಝರಿ ಮಿಥ್ಯದತ್ತ ಹೊರಳಿತು. ಸತ್ಯ ಅರಗಿಸಿಕೊಳ್ಳುವ ಶಕ್ತಿ ನಮ್ಮ ಮಸ್ತಿಷ್ಕ ಕಳೆದುಕೊಳ್ಳುತ್ತಾ ಬಂತು. ಆಸ್ತಿಕತೆ ಅಂದರೆ ಅಂಧಶ್ರದ್ಧೆಯೂ ಅಲ್ಲ, ನಾಸ್ತಿಕತೆ ಎಂದರೆ ಉಢಾಳತನವೂ ಅಲ್ಲ. ಎಲ್ಲವೂ ಭಗವಂತನ ಸತ್ಯದ ಹಾದಿಗೆ ಸಾಗುವ ಪರಿಕ್ರಮಗಳಾಗಬೇಕು. ಸಂಕ್ರಾಂತಿ ಜ್ಞಾನದ ಸಂಕೇತವಾದ ಸೂರ್ಯ ದಕ್ಷಿಣದಿಂದ ಉತ್ತರದತ್ತ ಸಾಗುವ ಕಾಲ. ಅಂದರೆ ಸೂರ್ಯ ಮೇಲ್‌ಸ್ತರದಲ್ಲಿ ಕಾಣುವ ಪುಣ್ಯಕಾಲ. ಈ ಕಾಲಘಟ್ಟದಲ್ಲಿ ನಮ್ಮ ಬುದ್ಧಿ ಭೇದಭಾವವಿಲ್ಲದೆ ಸತ್ಯವನ್ನು ಸ್ವೀಕರಿಸುವಂತಾಗಬೇಕು. ಆಗ 'ಸಚ್ಚಿದಾನಂದ'ಮಯ ಬೆಳಕು ಜಗಮಗಿಸುತ್ತದೆ.

ಪದಬಂಧ 4839

– ವಿದ್ಯಾ ವಿನಯ್

1		2			■	3		4
	■		■	■	■	■	■	
5			6		■	7		
■	■	■		■	■		■	■
■	■	8			9		■	■
■	■		■	■		■	■	■
10			■	11		12		13
	■	■	■	■	■		■	
14			■	15				

ಎಡದಿಂದ ಬಲಕ್ಕೆ
1.ಅಯಸ್ಕಾಂತವನ್ನು ಹೀಗೂ ಹೇಳುವರು (5)
3.ಕಸ ಗುಡಿಸುವ ಸಾಧನ (3)
5.ಈತ ಗಾಳಿಯ ಮಗ! (5)
7.ಋಷಿಯಿಂದ ಉಂಟಾದ ಆನಂದ! (3)
8.ಕತೆ ಕೊನೆಗಿದ್ದಾಗ ಎಚ್ಚರ ದಿಂದಿರುವಿಕೆ! (5)
10.ಕತೆಯೊಳಗಿನ ಪದ್ಯ (3)
11.ವ್ಯಕ್ತಪಡಿಸಲಾಗದ ನೋವು (5)
14.ಲೀಲಾಜಾಲವಾಗಿ ನಡೆದ ಏಲಂ! (3)
15.ಭೂತಗನ್ನಡಿಯನ್ನು ಹೀಗೆನ್ನಿ (5)

ಮೇಲಿಂದ ಕೆಳಕ್ಕೆ
1.ಅತ್ಯಾಸೆಯಿಂದ ಕೂಡಿದವನು (3)
2.ಬನದ ಬಳಿ ನೀಡಿದ ಮುತ್ತು! (3)
4.ಕೆಲವರು ಮಾಡುವ ಕಾರ್ಯ (3)
6.ಪುರುಷವಾಚಕ ಲಿಂಗ (3)
7.ವೇದಗಳಿಂದ ಸಂಗ್ರಹಿಸಿದ ಭಾಗ (3)
8.ತ್ವರೆಯನ್ನು ಹೀಗೆ ಹೇಳಿ (3)
9.ಕುಂದು ಇಲ್ಲಿ ಕಾಣುತ್ತಿದೆಯಲ್ಲಾ! (3)
10.ಈಶ್ವರನ ಇನ್ನೊಂದು ಹೆಸರು (3)
12.ಈತ ಪ್ರವಾಸಿ (3)
13.ಗಡಿಯಲ್ಲಿದ್ದಾಗ ತಲೆದೋರಿದ ಶೀತ (3)

4838ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಒಸಗೆ4.ಮಸಣ
5.ತಹನಾಮೆ
6.ಹಳವಂಡ8.ಟೆಸ
10.ಉಪಾ
13.ರಸಮಯ
14.ಪರಿಹಾಸ15.ಗಾಚಾರ
16.ಮುಕುರ

ಮೇಲಿಂದ ಕೆಳಕ್ಕೆ:
1.ಗ್ರಾಮಕೈಗಾರಿಕೆ
2.ಒಣಹರಟೆ
3.ಇನಾಮು5.ತಡಸಲು
7.ಉದರಂಭರಣ
9.ಸಮರಸ11.
ಪಾಳೆಯಗಾರ12.ಕೂರಿಗೆ

ಸುಡೊಕು 5225

9		5		8		4		
	8		7		5		1	9
7		1		6		2		
							3	2
3	6		5		7	8	9	
		8					4	7
		7		5		1		3
5			9		8		2	4
2		3					8	

5224 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜನವರಿ 15, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಹೇಮಂತ ಋತು ಮಕರ ಮಾಸದ 01 ನೇ ದಿನ ತಿಥಿ: (ಪೌಷ ಶುಕ್ಲ) ತ್ರಯೋದಶಿ ಗಂ. 24-58 ನಕ್ಷತ್ರ: ಮೃಗಶಿರ ಗಂ. 23-21 ಯೋಗ: ಬ್ರಹ್ಮ ಗಂ. 14-32 ಕರಣ: ಕೌಲವ ಗಂ. 11-40, ತೈತಿಲ ಗಂ. 24-58. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 07-01 ಸೂರ್ಯಾಸ್ತ : 06-19 ಮುಸ್ಲಿಂ ದಿನಾಂಕ : 11 ಜುಮಾದುಸ್ಸಾನಿ ದಿನ ವಿಶೇಷ: ಪಕ್ಷ ಪ್ರದೋಷ, ಮಟ್ಟು ಪೊಂಗಲ್ ಅಥವಾ ಕಣ್ಣುವು (ದ.ಭಾರತ), ತೈ ಪೊಂಗಲ್ ಅದೃಷ್ಟ ಸಂಖ್ಯೆ: 2, 5

ಮೇಷ: ಕುಟುಂಬದಲ್ಲಿ ಕೆಲವೊಂದು ವಿಚಾರಗಳಿಗೆ ಭಾವುಕರಾಗುವ ಸನ್ನಿವೇಶಗಳು ನಿಮಗೆದುರಾಗಬಹುದು. ಈ ಹಿಂದೆ ನೀವೇ ತೆಗೆದುಕೊಂಡ ನಿರ್ಧಾರಗಳು ತಪ್ಪಾಗಿರುವ ಬಗ್ಗೆ ಅರಿವಾಗುವುದು.

ವೃಷಭ: ಹಿರಿಯರ ಸಲಹೆ-ಸೂಚನೆಗಳಿಗೆ ಬೆಲೆ ಕೊಟ್ಟು ಮುಂದುವರೆಯುವುದು ಉತ್ತಮ. ಅದರಿಂದಾಗಿ ಕಾರ್ಯಕ್ಷೇತ್ರದಲ್ಲಿ ಚೇತರಿಕೆಯನ್ನು ಕಾಣಬಹುದು. ದೂರ ಸಂಚಾರದ ಲಕ್ಷಣಗಳಿವೆ. ದೇಹಕ್ಕೆ ಶೀತ ಬಾಧೆ ಬರಲಿದೆ.

ಮಿಥುನ: ಸಮಾನ ಮನಸ್ಕರಲ್ಲಿನ ಮಾತುಕತೆಗಳಿಂದಾಗಿ ಕೆಲಸ ಕಾರ್ಯಗಳು ಸುಗಮವಾಗುತ್ತದೆ. ಸಾಮಾಜಿಕ ವ್ಯವಹಾರಗಳಿಂದ ದೂರವಿದ್ದಷ್ಟು ಉತ್ತಮ. ಸಂಘರ್ಷದ ವಾತಾವರಣ ಸೃಷ್ಟಿಯಾಗಬಹುದು. ಗಣೇಶನ ಪೂಜೆ ಮಾಡಿ.

ಕರ್ಕಾಟಕ: ನೌಕರ ವರ್ಗದವರ ಕಠಿಣ ದುಡಿಮೆಗೆ ಸೂಕ್ತ ಪ್ರತಿಫಲ. ವೈವಾಹಿಕ ಜೀವನವು ಸುಗಮವಾಗಿ ನಡೆಯುವುದು. ಮಾತೃವರ್ಗದವರಿಂದ ಅಯಾಚಿತವಾಗಿ ನೆರವು ಸಿಕ್ಕಿ ಅನ್ಯರಲ್ಲಿನ ಋಣ ಪರಿಹಾರವಾಗಲಿದೆ.

ಸಿಂಹ: ಎಂಜಿನಿಯರ್ ಉದ್ಯೋಗ ರಂಗದವರ ತ್ವರಿತ ಬೆಳವಣಿಗೆಯಿಂದಾಗಿ ಉನ್ನತಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವ ಸಮಯ ಇದಾಗಲಿದೆ. ಕಥೆ-ಕಾದಂಬರಿ ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.

ಕನ್ಯಾ: ಉದ್ಯೋಗದಲ್ಲಿ ಬದಲಾವಣೆಯ ಆಲೋಚನೆಯನ್ನು ಹೊಂದಿದವರು ಸದ್ಯಕ್ಕೆ ಆ ಯೋಚನೆಯನ್ನು ಮರೆಯುವುದು ಒಳ್ಳೆಯದು. ಅಧಿಕ ರಕ್ತದೊತ್ತಡದಿಂದ ಬಳಲುವಂತಾಗಬಹುದು. ಆದಾಯದ ಮೂಲಗಳು ಗೋಚರಿಸಲಿದೆ.

ತುಲಾ: ನ್ಯಾಯಾಲಯದ ವಿಚಾರಣೆಗಳಲ್ಲಿ ಜಯ. ಕಬ್ಬಿಣ ಕೆಲಸ ಮಾಡುವವರು ಜಾಗ್ರತೆ ವಹಿಸಿ. ಕಂಪನಿಯ ಹೊಸ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಹೆಗ್ಗಳಿಕೆ ನಿಮ್ಮದಾಗಲಿದೆ.

ವೃಶ್ಚಿಕ: ಹೊಸ ಕಟ್ಟಡ ನಿರ್ಮಾಣ ಕಾರ್ಯಗಳ ಒಪ್ಪಂದದ ಏರ್ಪಟ್ಟು ಬಹಳ ಸಂತೋಷವಾಗುವುದು. ವೈದ್ಯರು ಅಭ್ಯಾಸದಲ್ಲಿ ತೋರಿದ ಬೇಜವಬ್ದಾರಿತನದಿಂದ ಪ್ರಾಣಾಪಾಯಗಳು ಸಂಭವಿಸಬಹುದು.

ಧನು: ವೃತ್ತಿಯಲ್ಲಿ ಉನ್ನತ ಅಧಿಕಾರಿಗಳಿಗೆ ಸಲಹೆ ನೀಡುವ ಬಗ್ಗೆ ಹಿಂಜರಿಕೆ ಬೇಡ. ನಿಮ್ಮ ಸಲಹೆಯು ಅತ್ಯಂತ ಶ್ರೇಷ್ಠ ಮಟ್ಟದಾಗಿರುತ್ತದೆ. ಕಫ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು.

ಮಕರ: ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ. ಸಂತಸಭರಿತ ಸುದ್ದಿ ನಿಮ್ಮನ್ನು ತಲುಪುತ್ತದೆ. ದಿನದ ಮೊದಲ ಭಾಗ ಶ್ರಮ ಭರಿತವಾಗಿದ್ದರೂ ನಂತರ ನಿಮಗೆ ಬಹಳ ವಿರಾಮ ದೊರೆಯುವುದು.

ಕುಂಭ: ವಿದೇಶಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುವುದು. ಆಸ್ಪತ್ರೆ ಸಿಬ್ಬಂದಿಗೆ ಸರ್ಕಾರದಿಂದ ಹೆಚ್ಚಿನ ಅನುಕೂಲ ಲಭಿಸುವುದು. ಸಣ್ಣಮಟ್ಟದ ಗುತ್ತಿಗೆದಾರರಿಗೆ ಸರ್ಕಾರಿ ಕಾಮಗಾರಿಗಳು ದೊರೆಯಲಿದೆ. ಆರ್ಥಿಕ ಸಂತೃಪ್ತಿ.

ಮೀನ: ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಬಿಡುವಿಲ್ಲದ ದಿನವಾಗುವಂತಾಗುವುದು. ಇತರರ ಸಲಹೆಯನ್ನು ವಿಮರ್ಶಿಸದೇ ಒಪ್ಪಿಕೊಳ್ಳಬೇಡಿ. ತೀರ್ಮಾನದ ನಂತರದಲ್ಲಿ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡಬೇಡಿ.

ಶಾಂತಿನಾಥ ದಿಬ್ಬದಗೆ 'ಚಾವುಂಡರಾಯ ದತ್ತಿ ಪ್ರಶಸ್ತಿ'



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ಚಾವುಂಡರಾಯ ದತ್ತಿ ಪ್ರಶಸ್ತಿ'ಗೆ ನಿವೃತ್ತ ಕನ್ನಡ ಪ್ರಾಧ್ಯಾಪಕ ಹಾಗೂ ಲೇಖಕ ಪ್ರೊ.ಶಾಂತಿನಾಥ ದಿಬ್ಬದ ಅವರು ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ಈ ಆಯ್ಕೆ ನಡೆದಿದೆ. ಪ್ರಶಸ್ತಿಯು ₹30 ಸಾವಿರ ನಗದು ಒಳಗೊಂಡಿದೆ.

ಗುಲಬರ್ಗಾ, ಕರ್ನಾಟಕ ಹಾಗೂ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿದ ಅವರು, 32 ವರ್ಷ ಕನ್ನಡದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. 'ವಾಗ್ದೇವಿಯ ಭಂಡಾರದ ಮುದ್ರೆ', 'ಜೀವಪರ ಜನಪರ' ಸೇರಿದಂತೆ ವಿವಿಧ ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

'ಮೇಕೆದಾಟು ಪರ, ಅಣೆಕಟ್ಟು ವಿರುದ್ಧ' ಸಂವಾದ: ಮೇಧಾ ಪಾಟ್ಕರ್ ಕಳವಳ

'ನದಿ ನಾಶಪಡಿಸುವ ಬೃಹತ್ ಯೋಜನೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಣೆಕಟ್ಟು ನಿರ್ಮಾಣದಂತಹ ಬೃಹತ್ ಯೋಜನೆಗಳಿಂದ ನದಿಗಳು ನಾಶವಾಗುತ್ತಿವೆಯೇ ಹೊರತು ಜನಸಾಮಾನ್ಯರಿಗೆ ಪ್ರಯೋಜನವಾಗುತ್ತಿಲ್ಲ' ಎಂದು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಹೇಳಿದರು.

ಕರ್ನಾಟಕ ನೆಲ ಜಲ ಪರಿಸರ ರಕ್ಷಣಾ ಸಮಿತಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಮೇಕೆದಾಟು ಪರ, ಅಣೆಕಟ್ಟು ವಿರುದ್ಧ' ಕುರಿತು ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜಕೀಯ ಲಾಭಕ್ಕಾಗಿ ಕೈಗೊಳ್ಳುವ ಯೋಜನೆಗಳು ಸಂಪೂರ್ಣ ಅವೈಜ್ಞಾನಿಕ. ಕೇವಲ ಗುತ್ತಿಗೆದಾರರು, ಹೂಡಿಕೆದಾರರು ಮತ್ತು ರಾಜಕಾರಣಿಗಳಿಗೆ ಅನುಕೂಲ ಕಲ್ಪಿಸುವ ಯೋಜನೆಗಳಾಗಿರುತ್ತವೆ' ಎಂದು ಕಿಡಿಕಾರಿದರು.

'ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಬೃಹತ್ ಯೋಜನೆಗಳಿಗೆ ಆರ್ಥಿಕ ನೆರವು ನೀಡುತ್ತಿವೆ. ದೇಶದಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸಲು ಮತ್ತು ಕಾನೂನುಗಳನ್ನು ಬದಲಾಯಿಸುವ ಹುನ್ನಾರ ಈ ಉದ್ದೇಶದ ಹಿಂದೆ ಅಡಗಿದೆ' ಎಂದರು.

ನರ್ಮದಾ ನದಿಗೆ ಅಣೆಕಟ್ಟು ನಿರ್ಮಾಣದಿಂದ ಉಂಟಾಗಿರುವ ಹಾನಿಯನ್ನು ವಿಶ್ಲೇಷಿಸಿದ ಅವರು, 'ನಿಸರ್ಗದ ಮೇಲೆ ಶೋಷಣೆ ನಡೆಸುವ ಬೃಹತ್ ನೀರಾವರಿ ಯೋಜನೆಗಳು ಏಕೆ ಬೇಕು ಎನ್ನುವ ಬಗ್ಗೆಯೇ ಮೊದಲು ಚರ್ಚೆಗಳು ನಡೆಯಬೇಕು. ಈ ಯೋಜನೆಗಳು ನಗರ ಕೇಂದ್ರೀತವಾಗಿರುತ್ತವೆ ಮತ್ತು ಉದ್ಯಮಿಗಳ ಪರವಾಗಿರುತ್ತವೆ. ಕೋಟ್ಯಂತರ ರೂಪಾಯಿ ದುರುಪಯೋಗಪಡಿಸಿಕೊಂಡು ನಿಸರ್ಗ ನಾಶ ಮಾಡಲು ಇಂತಹ ಯೋಜನೆಗಳನ್ನು ರೂಪಿಸುವ ಅಗತ್ಯವಿದೆಯೇ' ಎಂದು ಪ್ರಶ್ನಿಸಿದರು.

'ಬೃಹತ್ ಅಣೆಕಟ್ಟುಗಳ ನಿರ್ಮಾಣದಿಂದ ನದಿಗಳ ನೀರಿನ ಮಟ್ಟ ಕಡಿಮೆಯಾಗುತ್ತಿದೆ. ಜತೆಗೆ, ಅವೈಜ್ಞಾನಿಕ ಯೋಜನೆಗಳಿಂದಲೇ ದಿಢೀರ್ ಪ್ರವಾಹ ಸೃಷ್ಟಿಯಾಗುತ್ತಿದೆ. ಮೇಕೆದಾಟು ಯೋಜನೆಯಿಂದಲೂ ಸ್ಥಳೀಯ ಆದಿವಾಸಿಗಳು ಸಂಕಷ್ಟಕ್ಕೆ ಸಿಲುಕುತ್ತಾರೆ. ಪರಿಸರಕ್ಕೂ ಅಪಾರ ಹಾನಿಯಾಗಲಿದೆ. 95 ಕಿ.ಮೀ. ದೂರದಿಂದ ಬೆಂಗಳೂರಿಗೆ ನೀರು ತರುವ ಬದಲು ಕೆರೆ ಸಂರಕ್ಷಣೆ ಮತ್ತು ಮಳೆ ನೀರು ಸಂಗ್ರಹದಂತಹ ಪರಿಸರ ಸ್ನೇಹಿ ಪರ್ಯಾಯ ಯೋಜನೆಗಳ ಬಗ್ಗೆ ಸರ್ಕಾರ ಏಕೆ ಚಿಂತನೆ ನಡೆಸುವುದಿಲ್ಲ' ಎಂದು ಕೇಳಿದರು.

'ದೇಶದಲ್ಲಿ ಹಲವು ನದಿಗಳು ನಶಿಸುತ್ತಿವೆ. ಪಂಜಾಬ್‌ನಲ್ಲಿ ಸಟ್ಲೇಜ್ ನದಿಯು ಈಗಾಗಲೇ ರಾಸಾಯನಿಕಗಳಿಂದ ಭರ್ತಿಯಾಗಿದೆ. ಕರ್ನಾಟಕದಲ್ಲಿ ವೃಷಭಾವತಿ ಸೇರಿದಂತೆ ಹಲವು ನದಿಗಳು ನಶಿಸಿವೆ. ಇದೇ ರೀತಿಯ ಪರಿಸ್ಥಿತಿ ಕಾವೇರಿ ನದಿಗೂ ಬರಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಪತ್ರಕರ್ತ ನಾಗೇಶ ಹೆಗಡೆ, 'ಈ ಯೋಜನೆಯಿಂದ ಸಂಕಷ್ಟಗಳೇ ಹೆಚ್ಚಾಗಲಿವೆ. ಈ ಯೋಜನೆಯಿಂದ ನಾಶವಾಗುವ ಅರಣ್ಯಕ್ಕೆ ಪರ್ಯಾಯವಾಗಿ ಗುರುತಿಸಿರುವ ಭೂಮಿಯ ಜಾಗವನ್ನು ಬಹಿರಂಗಪಡಿಸಬೇಕು' ಎಂದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ 'ಮೇಕೆದಾಟು ಪರ, ಅಣೆಕಟ್ಟು ವಿರೋಧ' ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ ಪತ್ರಕರ್ತ ನಾಗೇಶ ಹೆಗಡೆ, ಲೇಖಕಿ ಬಿ.ಟಿ.ಲಲಿತಾ ನಾಯಕ್, ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್, ನಟ ಚೇತನ್ ಇದ್ದರು –ಪ್ರಜಾವಾಣಿ ಚಿತ್ರ

'ಮೇಕೆದಾಟು: ಪರಿಸರ ಮೇಲಿನ ಯುದ್ಧ'

'ಮೇಕೆದಾಟು ಯೋಜನೆಯು ಮೂರು ರಾಜಕೀಯ ಪಕ್ಷಗಳು ಪರಿಸರ ಮೇಲೆ ನಡೆಸುತ್ತಿರುವ ಯುದ್ಧವಾಗಿದೆ. ಇದು ಗುತ್ತಿಗೆದಾರರ ಪರ ಯೋಜನೆ' ಎಂದು ನಟ ಚೇತನ್ ಆಕ್ರೋಶ ವ್ಯಕ್ತಪಡಿಸಿದರು.

'₹9 ಸಾವಿರ ಕೋಟಿ ಮೊತ್ತದಲ್ಲಿ ಕೈಗೊಳ್ಳಲಿರುವ ಮೇಕೆದಾಟು ಯೋಜನೆಯಿಂದ 12 ಸಾವಿರ ಎಕರೆಗೂ ಹೆಚ್ಚು ಅರಣ್ಯ ನಾಶವಾಗಲಿದೆ. ಲಕ್ಷಾಂತರ ಮರಗಳು ನಾಶವಾಗಲಿವೆ. ಐದು ಹಳ್ಳಿಗಳು ಮುಳುಗಡೆಯಾಗಲಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'ಈಗ ರಾಜಕಾರಣಿಗಳೇ ಗುತ್ತಿಗೆದಾರರಾಗಿದ್ದಾರೆ. ಹೀಗಾಗಿ, ಪರಿಸರ ನಾಶ ಮಾಡಿ ಆರ್ಥಿಕ ಲಾಭ ಮಾಡಿಕೊಳ್ಳುವ ಹುನ್ನಾರದಲ್ಲಿ ತೊಡಗಿದ್ದಾರೆ. ಈ ಯೋಜನೆ ಸ್ಥಗಿತಗೊಳಿಸಿ, ನಿಸರ್ಗ ರಮಣೀಯವಾಗಿರುವ ಮೇಕೆದಾಟು ಸ್ಥಳವನ್ನು ವಿಶ್ವ ಪಾರಂಪರಿಕ ತಾಣವನ್ನಾಗಿ ಯುನೆಸ್ಕೊ ಘೋಷಿಸಬೇಕು' ಎಂದು ಆಗ್ರಹಿಸಿದರು.

> **ಪ್ರಧಾನಿ, ಸ್ಕಾಟ್‌ಲ್ಯಾಂಡ್‌ನ ಗ್ಲಾಸ್ಗೊದಲ್ಲಿ ನಡೆದ ಶೃಂಗಸಭೆಯಲ್ಲಿ ಪರಿಸರ ರಕ್ಷಣೆಯ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಆದರೆ, ಇಲ್ಲಿ ಕಾಡು ನಾಶ ಮಾಡಲು ಅನುಮತಿ ನೀಡುತ್ತಾರೆ**
> **ನಾಗೇಶ ಹೆಗಡೆ,** ಪತ್ರಕರ್ತ

> **ಗಂಡಸುತನದ ಬಗ್ಗೆ ಚರ್ಚೆಯಾಗುತ್ತಿದೆ. ಗಂಡಸುತನ ಎನ್ನುವುದೇ ತಪ್ಪು. ಗಂಡಸುತನ ಮುಖ್ಯ ಅಲ್ಲ, ಪರಿಸರ ಉಳಿಸುವ ಮನುಷ್ಯತ್ವ ಇಂದು ಬೇಕಾಗಿದೆ**
> **ಚೇತನ್,** ನಟ

ಪ್ರಿಯಾಂಕಾ ಗಾಂಧಿ ಮೌನವೇಕೆ: ಬಿಜೆಪಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಮತ್ತು ಅತ್ಯಾಚಾರ ಪ್ರಕರಣಗಳ ಬಗ್ಗೆ ಪ್ರಿಯಾಂಕಾ ಗಾಂಧಿ ವಾದ್ರಾ ಏಕೆ ತುಟ್ಟಿ ಬಿಚ್ಚುತ್ತಿಲ್ಲ ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ ಪ್ರಶ್ನಿಸಿದ್ದಾರೆ.

'ಮೇಕೆದಾಟು: ಕಾನೂನು ಸಮರ ಅಗತ್ಯ'


ಪ್ರಜಾವಾಣಿ ವಾರ್ತೆ

ಸಾಲಿಗ್ರಾಮ (ಮೈಸೂರು ಜಿಲ್ಲೆ): 'ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆ ನಡೆಸುವುದಕ್ಕಿಂತಲೂ ಕಾನೂನು ಸಮರ ನಡೆಸುವುದು ಅಗತ್ಯ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಶುಕ್ರವಾರ ಮಾಧ್ಯಮದರೊಡನೆ ಮಾತನಾಡಿದ ಅವರು, 'ಯೋಜನೆಗೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂಕೋರ್ಟ್‌ನಲ್ಲಿದೆ. ಅಂತರರಾಜ್ಯ ಜಲ ವಿವಾದದ ಬಗ್ಗೆ ನ್ಯಾಯಾಲಯದ ಹೊರಗಡೆ ಹೋರಾಟ ಮಾಡಿದರೆ ಪ್ರಯೋಜನವಿಲ್ಲ' ಎಂದು ಅಭಿಪ್ರಾಯಪಟ್ಟರು.

'ಕಾಂಗ್ರೆಸ್ ನಾಯಕರು ಎಷ್ಟೇ ನಗಾರಿ ಬಾರಿಸಿದರೂ ಕೋರ್ಟ್‌ನಿಂದ ತೀರ್ಪು ಕೊಡಿಸಲು ಸಾಧ್ಯವಿಲ್ಲ. ಪಾದಯಾತ್ರೆಯಿಂದ ಸಮಸ್ಯೆ ಬಗೆಹರಿಯದು. ಅರ್ಧಕ್ಕೆ ಮೊಟಕುಗೊಂಡಿರುವ ಪಾದಯಾತ್ರೆಯನ್ನು ರಾಮನಗರದಿಂದಲೇ ಮತ್ತೆ ಆರಂಭಿಸುವುದಾಗಿ ಹೇಳುತ್ತಿದ್ದಾರೆ. ಆ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

ಮುಸ್ಲಿಮರು, ಕ್ರಿಶ್ಚಿಯನ್ನರು ಎಲ್ಲಿಗೆ ಹೋಗಬೇಕು?



ಎಚ್.ಡಿ.ದೇವೇಗೌಡ

'ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ಬಿಜೆಪಿ ನಾಯಕರು ಭಾರತವನ್ನು ಹಿಂದೂ ರಾಷ್ಟ್ರ ಮಾಡುತ್ತೇವೆ ಎಂದು ಹೇಳುತ್ತಾರೆ. ರಾಜ್ಯದಲ್ಲಿ ನಾಯಕರೊಬ್ಬರು ಅಹಿಂದ ಎಂದು ಹೇಳುತ್ತಾರೆ. ಹಾಗಾದರೆ ದೇಶದಲ್ಲಿ ಇರುವ ಮುಸ್ಲಿಮರು, ಕ್ರಿಶ್ಚಿಯನ್ನರು ಎಲ್ಲಿಗೆ ಹೋಗಬೇಕು? ಯಾವುದೇ ಸಮಸ್ಯೆ ಎದುರಾದರೂ ಕಾನೂನಿನ ಮೂಲಕ ಗೆಲುವು ಪಡೆಯಲು ಪ್ರಯತ್ನಿಸಬೇಕು' ಎಂದು ಎಚ್.ಡಿ.ದೇವೇಗೌಡ ಸಲಹೆ ನೀಡಿದರು.

'ಲಾಭಕ್ಕಿಂತ ನಷ್ಟವೇ ಜಾಸ್ತಿ'



ಆರಗ ಜ್ಞಾನೇಂದ್ರ

ಬೆಂಗಳೂರು: ರಾಜಕೀಯ ಲಾಭ ಪಡೆಯುವ ಸ್ವಾರ್ಥದಿಂದ ಮೇಕೆದಾಟು ಪಾದಯಾತ್ರೆ ನಡೆಸಿದ ಕಾಂಗ್ರೆಸ್ ಪಕ್ಷಕ್ಕೆ ಲಾಭಕ್ಕಿಂತ ಹೆಚ್ಚು ನಷ್ಟವೇ ಆಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿದ್ದ ಪಾದಯಾತ್ರೆಯ ಹಿಂದೆ ಜನರಿಗೆ ಒಳಿತಾಗಬೇಕೆಂಬ ಭಾವನೆಗಿಂತಲೂ ರಾಜಕೀಯ ಸ್ವಾರ್ಥವೇ ಜಾಸ್ತಿ ಇತ್ತು. ಹಾಗಾಗಿ ಇವರ ಪಾದಯಾತ್ರೆಯಿಂದ ಏನೂ ಆಗಲಿಲ್ಲ' ಎಂದರು.

ಕಾಂಗ್ರೆಸ್‌ನ ಪಾದಯಾತ್ರೆಯನ್ನು ನಿಲ್ಲಿಸಲು ಸರ್ಕಾರ ಷಡ್ಯಂತ್ರ ನಡೆಸಿತ್ತು ಎಂಬುದು ಆಧಾರರಹಿತ ಆರೋಪ. ಅವರ ವೈಫಲ್ಯ ಮುಚ್ಚಿಕೊಳ್ಳಲು ಏನೇನೋ ಆರೋಪ ಮಾಡುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಪಾದಯಾತ್ರೆ ಕೈಗೊಳ್ಳುವ ನಿರ್ಧಾರ ಮತ್ತು ಪಾದಯಾತ್ರೆ ನಡೆಸಿದ್ದು ಎರಡೂ ಕಾಂಗ್ರೆಸ್‌ನವರ ತಪ್ಪು ಎಂದು ಸಚಿವರು ಹೇಳಿದರು. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ರಾಜ್ಯದಲ್ಲಿ ಯಾರ ವಿರೋಧವೂ ಇಲ್ಲ. ಕಾಂಗ್ರೆಸ್‌ನವರು ಯಾರ ವಿರುದ್ಧ ಪ್ರತಿಭಟನೆ ನಡೆಸಿದರು ಎಂಬುದೇ ಗೊತ್ತಾಗಲಿಲ್ಲ. ಅಧಿಕಾರದಲ್ಲಿದ್ದಾಗ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಏನನ್ನೂ ಮಾಡದವರು ಈಗ ಪಾದಯಾತ್ರೆ ಮಾಡಿದರು ಎಂದರು.

'ಪಾದಯಾತ್ರೆ: ಬಿಜೆಪಿಗೆ ಹತಾಶೆ'



ಡಿ.ಕೆ. ಶಿವಕುಮಾರ್

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ ನಡೆಸಿದ ಪಾದಯಾತ್ರೆಯನ್ನು ನೋಡಿ ಬಿಜೆಪಿ ನಾಯಕರು ಹತಾಶೆಗೊಂಡಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕರಿಗೆ ಹೈಕೋರ್ಟ್ ಮಧ್ಯಪ್ರವೇಶದ ಬಳಿಕ ಜ್ಞಾನೋದಯವಾಗಿದೆ' ಎಂಬ ಬಿಜೆಪಿ ಮುಖಂಡರ ಟೀಕೆಗೆ ಈ ರೀತಿ ಪ್ರತಿಕ್ರಿಯಿಸಿದರು.

'ಪಾದಯಾತ್ರೆ ಕುರಿತು ಹೈಕೋರ್ಟ್ ನೀಡುವ ಆದೇಶವನ್ನು ಸಂಪೂರ್ಣವಾಗಿ ತಿಳಿದ ಬಳಿಕ ಆ ಬಗ್ಗೆ ಪ್ರತಿಕ್ರಿಯಿಸುತ್ತೇನೆ' ಎಂದರು.

ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಕೋವಿಡ್ ಹೆಚ್ಚಾಗಿ ಹರಡಿಲ್ಲ. ಈಗಲೇ ರೈತರು ಎಚ್ಚರಿಕೆಯಿಂದ ಇರಬೇಕು. ಕೋವಿಡ್ ಎದುರಿಸಲು ಸಜ್ಜಾಗಬೇಕು. ರೈತರ ಬೆಳೆಗಳಿಗೆ ಸರಿಯಾದ ಬೆಲೆ ನೀಡುವ ಮೂಲಕ ಸರ್ಕಾರ ಅವರ ಕೈ ಬಲಪಡಿಸಬೇಕು ಎಂದು ಒತ್ತಾಯಿಸಿದರು.

ಜಗಳೂರು: ಅಪಘಾತದಲ್ಲಿ 7 ಮಂದಿ ಸಾವು

ಜಗಳೂರು (ದಾವಣಗೆರೆ ಜಿಲ್ಲೆ): ತಾಲ್ಲೂಕಿನ ಕಾನನಕಟ್ಟೆ ಬಳಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಶುಕ್ರವಾರ ನಸುಕಿನಲ್ಲಿ ಟಾಟಾ ಇಂಡಿಕಾ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಏಳು ಮಂದಿ ಮೃತಪಟ್ಟಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕರಡಕಲ್ ಗ್ರಾಮದ ಮಲ್ಲನಗೌಡ (22), ಮಾವಿನಹಟ್ಟಿ ಗ್ರಾಮದ ಸಂಜೀವ್ (20), ಮಾಲಗತ್ತಿ ಗ್ರಾಮದ ಸಂತೋಷ್ (21), ಹೂವಿನಹಳ್ಳಿಯ ಜೈಭೀಮ್ (18), ವಿಜಯಪುರ ಜಿಲ್ಲೆಯ ತಾಳಿಕೋಟೆಯ ಅಂಬೇಡ್ಕರ್ ನಗರದ ನಿವಾಸಿ ರಘು (23), ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಸಿದ್ದೇಶ್ (20), ಈಚಲಬೊಮ್ಮನಹಳ್ಳಿಯ ವೇದಮೂರ್ತಿ (18) ಮೃತರು.

ಸಂಜೀವ್ ಅವರು ಬೆಂಗಳೂರಿನಲ್ಲಿ 'ಉಬರ್' ಟ್ಯಾಕ್ಸಿ ಚಾಲಕರಾಗಿದ್ದು, ಇತ್ತೀಚೆಗೆ ಕಾರು ಖರೀದಿಸಿದ್ದರು. ಉಳಿದವರು ರೇವಾ ವಿಶ್ವವಿದ್ಯಾಲಯದಲ್ಲಿ ದಿನಗೂಲಿ ನೌಕರರಾಗಿದ್ದರು. ಸಂಕ್ರಾಂತಿ ರಜೆ ಹಾಗೂ ವಾರಾಂತ್ಯ ಕರ್ಫ್ಯೂ ಇದ್ದುದರಿಂದ ಹಂಪಿಗೆ ತೆರಳುತ್ತಿದ್ದರು. ಹಂಪಿ ನೋಡಿಕೊಂಡು ಸಂಕ್ರಾಂತಿ ಹಬ್ಬಕ್ಕೆ ತಮ್ಮ ಊರುಗಳಿಗೆ ತೆರಳುವವರಿದ್ದರು. ಬೆಂಗಳೂರಿನಿಂದ ಹೊಸಪೇಟೆಗೆ ಹೊರಟಿದ್ದ ಇವರು ಚಿತ್ರದುರ್ಗ ದಾಟಿ ಜಗಳೂರು ತಾಲ್ಲೂಕಿನ ಕಾನನಕಟ್ಟೆ ತಲುಪುವಾಗ ಮುಂಜಾನೆ 3 ಗಂಟೆಯ ವೇಳೆಗೆ ಅಪಘಾತವಾಗಿದೆ.

ಅತಿಥಿ ಉಪನ್ಯಾಸಕರಿಗೆ ಸಂಕ್ರಾಂತಿ 'ಹುಗ್ಗಿ'

ಒಂದನೇ ಪುಟದಿಂದ...

'2002ರಿಂದಲೂ ಅತಿಥಿ ಉಪನ್ಯಾಸಕರ ಸಮಸ್ಯೆ ಇತ್ತು. ಹಿಂದಿನ ಸರ್ಕಾರಗಳು ಇದನ್ನು ಸರಿಯಾಗಿ ನಿಭಾಯಿಸದೇ ಕಗ್ಗಂಟಾಗಿ ಉಳಿದಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಸಹಾನುಭೂತಿ ಮತ್ತು ಮಾನವೀಯ ನೆಲೆಯಲ್ಲಿ ಪರಿಗಣಿಸಿ, ಕ್ಷಿಪ್ರಗತಿಯಲ್ಲಿ ಸ್ಪಂದಿಸಿದರು. ಇದರಿಂದ ತಿಂಗಳೊಳಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಯಿತು' ಎಂದರು.

ಅತಿಥಿ ಉಪನ್ಯಾಸಕರ ಸುಗಮ ನೇಮಕಾತಿಗೆ ಆನ್‌ಲೈನ್ ಪೋರ್ಟಲ್ ಸಹ ಅಭಿವೃದ್ಧಿಪಡಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಇದರ ಮೂಲಕ ಜ.17 ರಿಂದ ಅರ್ಜಿ ಹಾಕಬಹುದು.

ಇದಕ್ಕೆ ಒಂದು ವಾರ ಕಾಲಾವಕಾಶ ಇದೆ. ಅಭ್ಯರ್ಥಿಗಳು ತಮ್ಮ ಇಚ್ಛೆಯ 5 ಸರ್ಕಾರಿ ಕಾಲೇಜುಗಳನ್ನು ಸೂಚಿಸಲು ಅವಕಾಶ ಮಾಡಿಕೊಡಲಾಗಿದೆ. ಇದರೊಂದಿಗೆ ಅವರಿಗೆ ಸೂಕ್ತ ಕಾರ್ಯಭಾರ ಇರುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಗೌರವಧನ ಹೆಚ್ಚಳದ ವಿವರ

- ಯುಜಿಸಿ ನಿಗದಿಪಡಿಸಿದ ಅರ್ಹತೆ ಹೊಂದಿದ್ದು, 5 ವರ್ಷಕ್ಕಿಂತ ಹೆಚ್ಚು ಅವಧಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿದ ಅನುಭವ ಇರುವವರಿಗೆ ₹32,000
- ಯುಜಿಸಿ ನಿಗದಿಪಡಿಸಿದ ಅರ್ಹತೆ ಹೊಂದಿದ್ದು, 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿದ ಅನುಭವ ಹೊಂದಿರುವವರಿಗೆ ₹30,000
- ಯುಜಿಸಿ ನಿಗದಿಪಡಿಸಿದ ಅರ್ಹತೆ ಇಲ್ಲದ, 5 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿದ ಅನುಭವ ಇರುವವರಿಗೆ ₹28,000
- ಯುಜಿಸಿ ನಿಗದಿಪಡಿಸಿದ ಅರ್ಹತೆ ಇಲ್ಲದ, 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿದ ಅನುಭವ ಇರುವವರಿಗೆ ₹26,000

ಆದೇಶದ ಇತರ ಅಂಶಗಳು

- ಅತಿಥಿ ಉಪನ್ಯಾಸಕರಾಗಿ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸಿದವರಿಗೆ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಪ್ರಾಧಾನ್ಯತೆ ನೀಡಲಾಗುವುದು. ಇದಕ್ಕೆ ಸಂಬಂಧಪಟ್ಟಂತೆ ಈಗ ಇಲಾಖೆಯಲ್ಲಿ ಅನುಸರಿಸುತ್ತಿರುವ ಮಾನದಂಡಗಳ ಅನ್ವಯ ಆಯ್ಕೆ ಪಟ್ಟಿ ತಯಾರಿಸಲಾಗುವುದು.
- ಅತಿಥಿ ಉಪನ್ಯಾಸಕರಿಗೆ ಸಂಬಂಧಪಟ್ಟ ಕಾಲೇಜಿನಲ್ಲಿ ಗರಿಷ್ಠ 15 ಗಂಟೆ ಕಾರ್ಯಭಾರ ಲಭ್ಯವಿಲ್ಲದಿದ್ದರೆ ಅಂತಹ ಅತಿಥಿ ಉಪನ್ಯಾಸಕರಿಗೆ ಕಾರ್ಯಭಾರವಿರುವ ಇತರೆ ಸರ್ಕಾರಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸಲು ಸೂಚಿಸುವುದು. ಇದರ ಹೊರತಾಗಿ 15 ಗಂಟೆಗಳಿಗಿಂತ ಕಡಿಮೆ ಕಾರ್ಯಭಾರವಿದ್ದಲ್ಲಿ ಎಷ್ಟು ಗಂಟೆಗಳ ಕಾರ್ಯಭಾರ ಲಭ್ಯವಿದೆಯೋ ಅದಕ್ಕೆ ಅನುಗುಣವಾಗಿ ಗೌರವಧನ ನೀಡಲಾಗುವುದು.
- ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದ ಅತಿಥಿ ಉಪನ್ಯಾಸಕರಿಗೆ ನಿಗದಿತ ವಿದ್ಯಾರ್ಹತೆಯನ್ನು ಹೊಂದಲು 3 ವರ್ಷಗಳ ಕಾಲಾವಧಿ ನೀಡುವುದು. 3 ವರ್ಷಗಳ ನಂತರ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗುವುದು.

'ಒಡೆದಾಳುವ ನೀತಿಯ ಆದೇಶ'

ಒಂದನೇ ಪುಟದಿಂದ...

ಸರ್ಕಾರ ಉಪನ್ಯಾಸಕರ ಕಾರ್ಯಭಾರವನ್ನು 15 ಗಂಟೆಗೆ ಹೆಚ್ಚಿಸಿರುವುದರಿಂದ ಶೇ 50 ರಷ್ಟು ಅಂದರೆ 7 ಸಾವಿರ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುವ ಸಾಧ್ಯತೆ ಇದೆ. 8 ರಿಂದ 10 ಗಂಟೆಗಳ ಕಾರ್ಯಭಾರ ಇದ್ದಾಗ ಹೆಚ್ಚಿನ ಅತಿಥಿ ಉಪನ್ಯಾಸಕರಿಗೆ ಅವಕಾಶ ಸಿಗುತ್ತಿತ್ತು. ಒಂದು ಗಂಟೆಗೆ ₹450 ಇದ್ದದ್ದು ₹500 ಕ್ಕೆ ಹೆಚ್ಚಳವಾಗಿದೆ. ಗೌರವಧನದಲ್ಲಿ ಹೇಳಿಕೊಳ್ಳುವಷ್ಟು ಹೆಚ್ಚಳ ಆಗಿಲ್ಲ. ಇದರ ಬದಲಿಗೆ ರಾಜ್ಯದ್ದೇ ಆದ ಪ್ರತ್ಯೇಕ ವೇತನ ಶ್ರೇಣಿಯನ್ನು(ಸ್ಟೇಟ್ ಸ್ಕೇಲ್) ಅನುಷ್ಠಾನಗೊಳಿಸಬೇಕಿತ್ತು ಎಂದರು. ಯುಜಿಸಿ ಪ್ರಕಾರ ವಿದ್ಯಾರ್ಹತೆ ಹೊಂದಿದವರು, ಯುಜಿಸಿ ವಿದ್ಯಾರ್ಹತೆ ಹೊಂದಿಲ್ಲದವರು ಎಂಬ ತಾರತಮ್ಯ ಮಾಡಲಾಗಿದೆ. ಇದು ಸರಿಯಲ್ಲ. ಅಲ್ಲದೆ, 10 ತಿಂಗಳ ಬದಲಿಗೆ ಪೂರ್ಣಾವಧಿ ಎಂದು ನೇಮಕ ಮಾಡಿಕೊಂಡು, ರಜೆ ಅವಧಿಗೂ ಗೌರವಧನ ನೀಡಬೇಕಾಗಿತ್ತು ಎಂದಿದ್ದಾರೆ.

ಪಾಕಿಸ್ತಾನ: ನೂತನ ರಾಷ್ಟ್ರೀಯ ಭದ್ರತಾ ನೀತಿ ಬಿಡುಗಡೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ನೂತನ ರಾಷ್ಟ್ರೀಯ ಭದ್ರತಾ ನೀತಿಯನ್ನು ಪ್ರಧಾನಿ ಇಮ್ರಾನ್ ಖಾನ್ ಶುಕ್ರವಾರ ಬಿಡುಗಡೆ ಮಾಡಿದರು.

ನಾಗರಿಕ ಕೇಂದ್ರೀತವಾದ ಈ ನೀತಿಯು ಆರ್ಥಿಕ ಭದ್ರತೆಗೆ ಆದ್ಯತೆ ನೀಡಲಿದೆ. ಈ ಹಿಂದಿನ ನೀತಿಯಲ್ಲಿ ಪ್ರಮುಖವಾಗಿ ಸೇನೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿತ್ತು.

ರಾಷ್ಟ್ರೀಯ ಭದ್ರತಾ ಸಮಿತಿಯು ಕಳೆದ ತಿಂಗಳು ಅನುಮೋದಿಸಿದ್ದ ನೀತಿಯನ್ನು ಇಮ್ರಾನ್ ಖಾನ್ ಸಾರ್ವತ್ರಿಕಗೊಳಿಸಿದರು.

ಬಾಗ್ದಾದ್: ಅಮೆರಿಕ ರಾಯಭಾರ ಕಚೇರಿ ಗುರಿಯಾಗಿಸಿ ರಾಕೆಟ್ ದಾಳಿ

ಬಾಗ್ದಾದ್ (ಎ.ಪಿ): ಇರಾಕ್ ರಾಜಧಾನಿ ಬಾಗ್ದಾದ್‌ನಲ್ಲಿ ಇರುವ ಅಮೆರಿಕದ ರಾಯಭಾರ ಕಚೇರಿಯನ್ನು ಗುರಿಯಾಗಿಸಿ 4 ರಾಕೆಟ್‌ಗಳನ್ನು ಪ್ರಯೋಗಿಸಲಾಗಿದೆ ಎಂದು ಇರಾಕ್‌ನ ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

ಅತಿ ಭದ್ರತೆಯ, ಹಸಿರು ವಲಯವಾಗಿರುವ ಈ ಪ್ರದೇಶದಲ್ಲಿ ಅಮೆರಿಕ ರಾಯಭಾರ ಕಚೇರಿಯಲ್ಲದೆ ವಿವಿಧ ರಾಯಭಾರ ಕಚೇರಿಗಳು, ಇರಾಕ್ ಸರ್ಕಾರದ ಸಚಿವಾಲಯವೂ ಇದೆ.

ಮೂರು ರಾಕೆಟ್‌ಗಳು ಅಮೆರಿಕದ ರಾಯಭಾರ ಕಚೇರಿಯ ಬಳಿ ಹಾಗೂ ಒಂದು ರಾಕೆಟ್ ಸಮೀಪದ ವಸತಿ ಸಂಕೀರ್ಣಕ್ಕೆ ಹೊಂದಿಕೊಂಡಿದ್ದ ಶಾಲೆಯ ಮೇಲೆ ಬಿದ್ದಿದೆ.



ರಾಕೆಟ್ ದಾಳಿಯಲ್ಲಿ ಬಾಲಕಿ ಮತ್ತು ಮಹಿಳೆ ಗಾಯಗೊಂಡಿದ್ದಾರೆ ಎಂದು ಇರಾಕ್‌ನ ಸೇನೆ ಹೇಳಿಕೆ ನೀಡಿದ್ದು, ಹೆಚ್ಚು ವಿವರ ನೀಡಿಲ್ಲ. ಬಾಗ್ದಾದ್ ಪಕ್ಕದಲ್ಲಿನ ಡೊರಾದಿಂದ ಈ ರಾಕೆಟ್ ಪ್ರಯೋಗಿಸಲಾಗಿದೆ ಎಂದಿದೆ.

ಈ ವರ್ಷದ ಆರಂಭದಿಂದಲೂ ಅಮೆರಿಕ ರಾಯಭಾರ ಕಚೇರಿ ಗುರಿಯಾಗಿಸಿ ರಾಕೆಟ್ ಮತ್ತು ಡ್ರೋನ್ ದಾಳಿ ನಡೆಯುತ್ತಿದೆ. ಇರಾನ್‌ನ ಮಿಲಿಟರಿ ಕಮಾಂಡರ್ ಅಬು ಮಹ್ದಿ ಅಲ್ ಮುಹಾಂಡಿಸ್ ಹತ್ಯೆಯಾಗಿದ್ದ ಅಮೆರಿಕದ ದಾಳಿಯಾಗಿ ಎರಡನೇ ವರ್ಷ ತುಂಬುತ್ತಿರುವ ಸಂದರ್ಭದಲ್ಲಿಯೇ ಈ ದಾಳಿ ನಡೆಯುತ್ತಿರುವುದು ಗಮನಾರ್ಹ.

ಕಳೆದ ವಾರ ಇರಾಕ್ ಮತ್ತು ಸಿರಿಯಾದಲ್ಲಿರುವ ಅಮೆರಿಕದ ಸೇನೆಯನ್ನು ಗುರಿಯಾಗಿಸಿ ಸರಣಿ ದಾಳಿ ನಡೆದಿದ್ದವು.

ಕೀಗನ್ ಪೀಟರ್ಸನ್ ಬ್ಯಾಟಿಂಗ್‌ಗೆ ಒಲಿದ ಜಯ; 2–1ರಿಂದ ಸರಣಿ ಜಯಿಸಿದ ದಕ್ಷಿಣ ಆಫ್ರಿಕಾ

ಭಾರತಕ್ಕೆ ಸಿಗದ ಸಂಕ್ರಾಂತಿ ಸಿಹಿ

ಮುಖ್ಯಾಂಶಗಳು
- ಏಳು ವಿಕೆಟ್‌ಗಳಿಂದ ಜಯಿಸಿದ ದಕ್ಷಿಣ ಆಫ್ರಿಕಾ
- ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಗಳಿಸಿದ ಕೀಗನ್ ಪೀಟರ್ಸನ್
- ಭಾರತ ತಂಡವು ಇದುವರೆಗೆ ಒಮ್ಮೆಯೂ ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಸರಣಿ ಜಯಿಸಿಲ್ಲ



ಭಾರತದ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಟ್ರೋಫಿ ಗೆದ್ದ ಸಂಭ್ರಮದಲ್ಲಿ ದಕ್ಷಿಣ ಆಫ್ರಿಕಾ ತಂಡದ ನಾಯಕ ಡೀನ್ ಎಲ್ಗರ್ ಮತ್ತು ಸಹ ಆಟಗಾರರು –ರಾಯಿಟರ್ಸ್ ಚಿತ್ರ

ಕೇಪ್‌ಟೌನ್ (ಪಿಟಿಐ/ರಾಯಿಟರ್ಸ್): ದಕ್ಷಿಣ ಆಫ್ರಿಕಾದಲ್ಲಿ ಮೊದಲ ಬಾರಿಗೆ ಟೆಸ್ಟ್ ಸರಣಿ ಜಯದ ಸಿಹಿ ಸವಿದು, ಸಂಕ್ರಾಂತಿಯನ್ನು ಸ್ಮರಣೀಯಗೊಳಿಸಿಕೊಳ್ಳುವ ಭಾರತ ತಂಡದ ಕನಸು ನನಸಾಗಲಿಲ್ಲ.

ಕೀಗನ್ ಪೀಟರ್ಸನ್ ಕೌಶಲಯುತ ಬ್ಯಾಟಿಂಗ್ ಬಲದಿಂದ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ಶುಕ್ರವಾರ ಇಲ್ಲಿ ಮುಕ್ತಾಯವಾದ ಮೂರನೇ ಟೆಸ್ಟ್‌ನಲ್ಲಿ 7 ವಿಕೆಟ್‌ಗಳಿಂದ ಗೆದ್ದಿತು. ಅದರೊಂದಿಗೆ 2–1ರಿಂದ ಸರಣಿ ಜಯಿಸಿತು. ತಂಡವು 212 ರನ್‌ಗಳ ಗುರಿಯನ್ನು 63.3 ಓವರ್‌ಗಳಲ್ಲಿ 3 ವಿಕೆಟ್‌ಗಳನ್ನು ಕಳೆದುಕೊಂಡು ಮುಟ್ಟಿತು.

ಭಾರತದ ಬೌಲರ್‌ಗಳ ಎಲ್ಲ ಪ್ರಯತ್ನಗಳಿಗೂ ಕೀಗನ್ (82; 113ಎ, 4X10) ಮತ್ತು ರೆಸಿ ವ್ಯಾನ್ ಡರ್ ಡಸೆನ್ (ಔಟಾಗದೆ 41; 95ಎ, 4X3) ಅಡ್ಡಗೋಡೆಯಂತೆ ನಿಂತರು. ಪಂದ್ಯದ ಮೂರನೇ ದಿನ ದಿಟ್ಟ ಶತಕ ಗಳಿಸಿದ್ದ ರಿಷಭ್ ಪಂತ್ ಆಟದಿಂದಾಗಿ ಭಾರತ ತಂಡವು ಇನ್ನೂರಕ್ಕೂ ಹೆಚ್ಚು ರನ್‌ಗಳ ಗುರಿಯೊಡ್ಡಲು ಸಾಧ್ಯವಾಗಿತ್ತು. ಗುರುವಾರ ಸಂಜೆ ಎರಡನೇ ಇನಿಂಗ್ಸ್ ಆರಂಭಿಸಿದ್ದ ದಕ್ಷಿಣ ಆಫ್ರಿಕಾ ಎರಡು ವಿಕೆಟ್‌ಗಳ ನಷ್ಟಕ್ಕೆ 101 ರನ್ ಗಳಿಸಿತ್ತು.

ನಾಲ್ಕನೇ ದಿನದಾಟದಲ್ಲಿ ಭಾರತಕ್ಕೆ ದಕ್ಕಿದ್ದು ಒಂದೇ ಒಂದು ವಿಕೆಟ್ ಮಾತ್ರ. 47ನೇ ಓವರ್‌ನಲ್ಲಿ ಶಾರ್ದೂಲ್ ಠಾಕೂರ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆಗುವ ಮುನ್ನ ಕೀಗನ್ ತಮ್ಮ ತಂಡವನ್ನು ಜಯದ ಸನಿಹ ತಂದು ನಿಲ್ಲಿಸಿದ್ದರು. ಡಸೆನ್ ಜೊತೆಗೂಡಿದ ತೆಂಬಾ ಬವುಮಾ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಮೊದಲ ಇನಿಂಗ್ಸ್‌ನಲ್ಲಿಯೂ ಅರ್ಧಶತಕ ಗಳಿಸಿದ್ದ ಕೀಗನ್ ಎರಡನೇ ಇನಿಂಗ್ಸ್‌ನ 40ನೇ ಓವರ್‌ನಲ್ಲಿ ಪೂಜಾರ ಕೈಬಿಟ್ಟ ಕ್ಯಾಚಿನ ಲಾಭ ಪಡೆದರು.

‘ನಾವು ಮೊದಲ ಪಂದ್ಯದಲ್ಲಿ ಚೆನ್ನಾಗಿ ಆಡಿದ್ದೆವು. ಅರ್ಹ ಜಯ ಸಾಧಿಸಿದ್ದೆವು. ಉಳಿದೆರಡು ಪಂದ್ಯಗಳಲ್ಲಿಯೂ ನಮ್ಮ ಆಟ ಉತ್ತಮವಾಗಿದ್ದರೂ, ದಕ್ಷಿಣ ಆಫ್ರಿಕಾ ಪ್ರಮುಖ ಘಟ್ಟಗಳಲ್ಲಿ ಚಾಣಾಕ್ಷತೆ ಮೆರೆಯಿತು. ಪುಟಿದೆದ್ದು ಜಯ ಸಾಧಿಸಿತು’ ಎಂದು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದರು.

ಸೆಂಚುರಿಯನ್‌ನಲ್ಲಿ ನಡೆದಿದ್ದ ಮೊದಲ ಟೆಸ್ಟ್‌ನಲ್ಲಿ ಗೆದ್ದಿದ್ದ ಭಾರತವು ಜೋಹಾನ್ಸ್‌ಬರ್ಗ್‌ನ ಎರಡನೇ ಪಂದ್ಯ ಮತ್ತು ಇಲ್ಲಿಯ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯದಿಂದಾಗಿ ಸೋಲನುಭವಿಸಿತು.

ಕೊನೆಯ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಆರಂಭಿಕ ಜೋಡಿ ಮಯಂಕ್ ಅಗರವಾಲ್ ಮತ್ತು ರಾಹುಲ್, ಮಧ್ಯಮ ಕ್ರಮಾಂಕದಲ್ಲಿ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ. ಅದರಿಂದಾಗಿ ಮೊದಲ ಇನಿಂಗ್ಸ್‌ನಲ್ಲಿ 223 ರನ್‌ಗಳಿಸಲಷ್ಟೇ ವಿರಾಟ್ ಪಡೆಗೆ ಸಾಧ್ಯವಾಗಿತ್ತು. ಆದರೆ ಜಸ್‌ಪ್ರೀತ್ ಬೂಮ್ರಾ ಐದು ವಿಕೆಟ್‌ಗಳನ್ನು ಗಳಿಸಿ ಮಿಂಚಿದ್ದರಿಂದ ಆತಿಥೇಯ ತಂಡವು 13 ರನ್‌ಗಳ ಅಲ್ಪ ಹಿನ್ನಡೆ ಅನುಭವಿಸಿತ್ತು.


ಆದರೆ ಕೊನೆಯ ಇನಿಂಗ್ಸ್‌ನಲ್ಲಿ ಬೌಲರ್‌ಗಳ ಆಟ ನಡೆಯಲಿಲ್ಲ. ಕೀಗನ್ ಪೀಟರ್ಸನ್ ಪಂದ್ಯ ಮತ್ತು ಸರಣಿಶ್ರೇಷ್ಠ ಗೌರವ ಗಳಿಸಿದರು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 223 (77.3 ಓವರ್‌ಗಳಲ್ಲಿ)
ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 210 (76.3 ಓವರ್)
ಭಾರತ ಎರಡನೇ ಇನಿಂಗ್ಸ್ 198 (67.3 ಓವರ್)
ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್ 3ಕ್ಕೆ 212 (63.3 ಓವರ್) (ಗುರುವಾರ 29.4 ಓವರ್‌ಗಳಲ್ಲಿ 2ಕ್ಕೆ 101)
ಪೀಟರ್ಸನ್ ಬಿ ಶಾರ್ದೂಲ್ 82 (113ಎ, 4X10), ಡಸೆನ್ ಔಟಾಗದೆ 41 (95ಎ, 4X3) ಬವುಮಾ ಔಟಾಗದೆ 32 (58ಎ, 4X5))
ಇತರೆ (ಲೆಗ್‌ಬೈ 8, ನೋಬಾಲ್ 3) 11
ವಿಕೆಟ್ ಪತನ: 3–155 (ಕೀಗನ್ ಪೀಟರ್ಸನ್, 46.2)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 17–5–54–1, ಮೊಹಮ್ಮದ್ ಶಮಿ 15–3–41–1, ಉಮೇಶ್ ಯಾದವ್ 9–0–36–0, ಶಾರ್ದೂಲ್ ಠಾಕೂರ್ 11–3–22–1, ರವಿಚಂದ್ರನ್ ಅಶ್ವಿನ್ 11.3–1–51–0

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ ಏಳು ವಿಕೆಟ್‌ಗಳ ಜಯ, 2–1ರಿಂದ ಸರಣಿ ಗೆಲುವು

‘ಹೊರಗಿನವರಿಗೇನು ಗೊತ್ತು ಅಂಗಣದೊಳಗಿನ ವಿಷಯ’



ವಿರಾಟ್ ಕೊಹ್ಲಿ

ಸ್ಟಂಪ್ ಮೈಕ್ ವಿವಾದ

ಕೇಪ್‌ಟೌನ್ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ನಾಯಕ ಡೀನ್ ಎಲ್ಗರ್ ವಿಕೆಟ್ ಬಗ್ಗೆ ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆಯ ತೀರ್ಪಿನ ಕುರಿತು ಸ್ಥಳೀಯ ಪ್ರಸಾರಕರ ವಿರುದ್ಧ ತಮ್ಮ ತಂಡದ ಆಟಗಾರರು ನಡೆಸಿದ ವಾಗ್ದಾಳಿಯನ್ನು ವಿರಾಟ್ ಕೊಹ್ಲಿ ಸಮರ್ಥಿಸಿಕೊಂಡಿದ್ದಾರೆ.

‘ಆಟದ ಅಂಗಣದಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ಹೊರಗಿನವರಿಗೆ ಸ್ಪಷ್ಟವಾಗಿ ಗೊತ್ತಿರುವುದಿಲ್ಲ. ಆದರೆ ಆಟದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿರುವ ನಮಗೆ ವಿಷಯ ಅರ್ಥವಾಗಿರುತ್ತದೆ’ ಎಂದು ವಿರಾಟ್ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದ ಮೂರನೇ ದಿನದಾಟದಲ್ಲಿ ಡೀನ್ ಎಲ್ಗರ್ ಎಲ್‌ಬಿಡಬ್ಲ್ಯು ಆಗಿದ್ದನ್ನು ಫೀಲ್ಡ್ ಅಂಪೈರ್ ಔಟ್ ನೀಡಿದ್ದರು. ಆದರೆ, ಡೀನ್ ಪಡೆದ ಡಿಆರ್‌ಎಸ್‌ನಲ್ಲಿ ನಾಟ್‌ಔಟ್ ತೀರ್ಪು ಬಂದಾಗ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಸ್ಟಂಪ್ ಮೈಕ್ ಬಳಿ ಸಾಗಿ ಪ್ರಸಾರಕರನ್ನು ಟೀಕಿಸಿದ್ದರು.

‘11 ಆಟಗಾರರ ವಿರುದ್ಧ ಇಡೀ ದೇಶವೇ ನಿಂತಿದೆ’ ಎಂದು ರಾಹುಲ್ ಕೂಗಿದ್ದರು. ಈ ಘಟನೆಯು ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ. ಕೊಹ್ಲಿಯ ನಡವಳಿಕೆ ಬಗ್ಗೆ ಟೀಕೆಗಳು ವ್ಯಕ್ತವಾಗಿವೆ.

‘ಪಂದ್ಯದ ಆ ಹಂತದಲ್ಲಿ ನಾವು ಎರಡು–ಮೂರು ವಿಕೆಟ್‌ಗಳನ್ನು ಗಳಿಸಿದ್ದರೆ ಗೆಲುವಿನ ಅವಕಾಶ ಉಳಿಯುತ್ತಿತ್ತು. ಆದರೆ ಪಂದ್ಯದ ದಿಕ್ಕು ಬದಲಿಸುವ ಆ ಅವಕಾಶ ನಮ್ಮ ಕೈತಪ್ಪಿತು’ ಎಂದರು.

ಇನಿಂಗ್ಸ್‌ನ 21ನೇ ಓವರ್‌ನಲ್ಲಿ ಅಶ್ವಿನ್ ಎಸೆತವು ಲೈನ್ ಮೇಲೆ ಪಿಚ್ ಪುಟಿದು ಎಲ್ಗರ್ [illegible] ತಗುಲಿತ್ತು. ಅಂಪೈರ್ ಮರಾಯಸ್ ಇರಾಸ್ಮಸ್ ಔಟ್ ಕೂಡ ನೀಡಿದ್ದರು. ಆದರೆ ಹಾಕ್ ಐ ತಂತ್ರಜ್ಞಾನದಲ್ಲಿ ಚೆಂಡು ಬೇಲ್ಸ್‌ಗೆ ತಗುಲದೇ ಮೇಲಿಂದ ಸಾಗುವುದು ಕಂಡುಬಂತು. ಅದ್ದರಿಂದಲೇ ತೀರ್ಪು ನೀಡಲಾಯಿತು. ಹಾಕ್ ಐ ವಿಡಿಯೊ ತುಣುಕನ್ನು 3ನೇ ಅಂಪೈರ್‌ಗೆ ಸರಣಿಯ ಅಧಿಕೃತ ಪ್ರಸಾರಕರು ಒದಗಿಸುತ್ತಾರೆ. ಇದಕ್ಕೆ ಐಸಿಸಿಯ ಮಾನ್ಯತೆ ಇದೆ. ಆದ್ದರಿಂದಲೇ ಕೊಹ್ಲಿ ಪಡೆಯ ಸಿಟ್ಟು ಪ್ರಸಾರಕರತ್ತ ತಿರುಗಿತು.

ಬುಲ್ಸ್ ಜಯದ ಓಟಕ್ಕೆ ಪವನ್ ಬಲ



ಬೆಂಗಳೂರು ಬುಲ್ಸ್– ಗುಜರಾತ್ ಜೈಂಟ್ಸ್ ಆಟಗಾರರ ಪೈಪೋಟಿ

ಬೆಂಗಳೂರು: ಮತ್ತೊಮ್ಮೆ ಮಿಂಚಿದ ಪವನ್ ಶೆರಾವತ್ ಆಟದಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಬುಲ್ಸ್ ತಂಡವು 46–37ರಿಂದ ಗುಜರಾತ್ ಜೈಂಟ್ಸ್ ವಿರುದ್ಧ ಗೆದ್ದಿತು. ರೇಡಿಂಗ್‌ನಲ್ಲಿ ಮಿಂಚಿನ ಸಂಚಲನ ಮೂಡಿಸಿದ ಪವನ್ 19 ಅಂಕಗಳನ್ನು ತಮ್ಮ ಜೇಬಿಗಿಳಿಸಿಕೊಂಡರು. ಅವರ ಆಟದ ಭರಾಟೆಗೆ ಎದುರಾಳಿ ತಂಡವು ಆರಂಭದಿಂದಲೇ ಹಿನ್ನಡೆ ಅನುಭವಿಸಿತು. ಪವನ್ ಆಟಕ್ಕೆ ತಕ್ಕ ತಿರುಗೇಟು ನೀಡುವ ಪ್ರಯತ್ನ ಮಾಡಿದ ಗುಜರಾತ್ ತಂಡದ ರೇಡರ್ ರಾಕೇಶ್ 14 ಅಂಕಗಳನ್ನು ಗಳಿಸಿದರು. ಬೆಂಗಳೂರು ತಂಡದ ಭರತ್ ಕೂಡ ರೇಡಿಂಗ್‌ನಲ್ಲಿ ಮಿಂಚಿ 9 ಅಂಕಗಳನ್ನು ಗಳಿಸಿದರು. ಬುಲ್ಸ್ ತಂಡವು ಇದುವರೆಗೆ ಹತ್ತು ಪಂದ್ಯಗಳನ್ನು ಆಡಿ ಏಳರಲ್ಲಿ ಗೆದ್ದಿದೆ. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಜೈಪುರಕ್ಕೆ ಜಯ: ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 38–28ರಿಂದ ಪಟ್ನಾ ಪೈರೆಟ್ಸ್ ವಿರುದ್ಧ ಗೆದ್ದಿತು.

ಇಂದಿನ ಪಂದ್ಯ (ರಾತ್ರಿ)
- ಹರಿಯಾಣ ಸ್ಟೀಲರ್ಸ್ Vs ದಬಂಗ್ ಡೆಲ್ಲಿ — 7.30
- ಯುಪಿ ಯೋಧಾ Vs ತೆಲುಗು ಟೈಟನ್ಸ್ — 8.30
- ಯು ಮುಂಬಾ Vs ಬೆಂಗಾಲ್ ವಾರಿಯರ್ಸ್ — 9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	10	7	2	1	38
ಪಟ್ನಾ ಪೈರೇಟ್ಸ್	9	6	2	1	34
ದಬಂಗ್ ಡೆಲ್ಲಿ	9	5	2	2	32
ಜೈಪುರ್ ಪಿಂಕ್ ಪ್ಯಾಂಥರ್ಸ್	9	5	4	-	28
ತಮಿಳ್ ತಲೈವಾಸ್	9	3	2	4	27
ಯು ಮುಂಬಾ	9	3	3	3	25
ಯುಪಿ ಯೋಧಾ	9	2	4	3	23
ಹರಿಯಾಣ ಸ್ಟೀಲರ್ಸ್	9	3	4	2	23
ಬೆಂಗಾಲ್ ವಾರಿಯರ್ಸ್	9	4	5	-	22
ಪುಣೇರಿ ಪಲ್ಟನ್	9	4	5	-	21
ಗುಜರಾತ್ ಜೈಂಟ್ಸ್	9	2	5	2	20
ತೆಲುಗು ಟೈಟನ್ಸ್	8	-	6	2	10

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ಆ್ಯಷಸ್: ಹೆಡ್ ಶತಕ; ತಲೆಯೆತ್ತಿದ ಆಸ್ಟ್ರೇಲಿಯಾ



ಟ್ರಾವಿಸ್ ಹೆಡ್ ಶತಕ ಸಂಭ್ರಮ –ರಾಯಿಟರ್ಸ್

ಹೋಬರ್ಟ್ (ಎಪಿ): ಸುಂದರ ಶತಕ ಹೊಡೆದ ಟ್ರಾವಿಸ್ ಹೆಡ್ ಆಸ್ಟ್ರೇಲಿಯಾ ತಂಡವನ್ನು ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಿಂದ ಪಾರು ಮಾಡಿದರು.

ಶುಕ್ರವಾರ ಇಲ್ಲಿ ಆರಂಭವಾದ ಆ್ಯಷಸ್ ಸರಣಿಯ ಕೊನೆಯ ಮತ್ತು ಐದನೇ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಫಿಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜೋ ರೂಟ್ ಬಳಗಕ್ಕೆ ಆರಂಭದಲ್ಲಿಯೇ ಯಶಸ್ಸೂ ದೊರೆಯಿತು. 22 ಓವರ್‌ಗಳಲ್ಲಿ 83 ರನ್‌ಗಳಿಗೆ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತು. ಅಗ್ರಕ್ರಮಾಂಕದ ಬ್ಯಾಟರ್‌ಗಳು ಪೆವಿಲಿಯನ್ ಸೇರಿದರು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಟ್ರಾವಿಸ್ ಹೆಡ್ (101; 113ಎ, 4X12) ಮತ್ತು ಕ್ಯಾಮರೂನ್ ಗ್ರೀನ್ (74; 109ಎ) ಜೊತೆಯಾಟದ ಬಲದಿಂದ 59.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 241 ರನ್ ಗಳಿಸಿತು. ಅಲೆಕ್ಸ್ ಕ್ಯಾರಿ ಮತ್ತು ಮಿಚೆಲ್ ಸ್ಟಾರ್ಕ್ ಕ್ರೀಸ್‌ನಲ್ಲಿದ್ದಾರೆ. ಮಳೆ ಬಂದ ಕಾರಣ ದಿನದಾಟವನ್ನು ಸ್ಥಗಿತಗೊಳಿಸಲಾಯಿತು.

ಇಂಗ್ಲೆಂಡ್‌ನ ಒಲಿ ರಾಬಿನ್ಸನ್ ಮತ್ತು ಸ್ಟುವರ್ಟ್ ಬ್ರಾಡ್ ತಲಾ ಎರಡು ವಿಕೆಟ್ ಗಳಿಸಿ, ಆತಿಥೇಯರ ಇನಿಂಗ್ಸ್‌ಗೆ ಸವಾಲೊಡ್ಡಿದರು. ಬ್ರಿಸ್ಬೇನ್‌ನಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯದಲ್ಲಿ ಹೆಡ್ ಶತಕ ಹೊಡೆದಿದ್ದರು. ಅಗ್ರಕ್ರಮಾಂಕದನಾಲ್ವರು ಬ್ಯಾಟರ್‌ಗಳಲ್ಲಿ ಮಾರ್ನಸ್ ಲಾಬುಷೇನ್ (44) ಮಾತ್ರ ಎರಡಂಕಿ ತಲುಪಿದರು. ಡೇವಿಡ್ ವಾರ್ನರ್ ಮತ್ತು ಸ್ಟೀವ್ ಸ್ಮಿತ್ ಖಾತೆಯನ್ನೇ ತೆರೆಯಲಿಲ್ಲ. ವಾರ್ನರ್ 22 ಎಸೆತಗಳನ್ನು ಎದುರಿಸಿ ಒಂದೂ ರನ್ ಗಳಿಸಲಿಲ್ಲ. ಉಸ್ಮಾನ್ ಖ್ವಾಜಾ ಕೇವಲ 6 ರನ್ ಗಳಿಸಿದರು. ಆದರೆ, ಮಾರ್ಕ್ ವುಡ್ ಮತ್ತು ಕ್ರಿಸ್ ವೋಕ್ಸ್ ಅವರ ಬೌಲಿಂಗ್ ಎದುರು ಹೆಡ್ ಮತ್ತು ಗ್ರೀನ್ ರನ್‌ಗಳನ್ನು ಬೇಟೆಯಾಡಿದರು. ವಿಕೆಟ್‌ನ ಎರಡೂ ಬದಿಗಳಲ್ಲಿ ಚೆಂದದ ಡ್ರೈವ್‌ಗಳನ್ನು ಪ್ರಯೋಗಿಸಿದ ಹೆಡ್, ಫೀಲ್ಡರ್‌ಗಳಿಗೆ ಸವಾಲೆಸೆದರು. ಇಬ್ಬರೂ ಐದನೇ ವಿಕೆಟ್ ಜೊತೆಯಾಟದಲ್ಲಿ 121 ರನ್ ಗಳಿಸಿದರು. 49ನೇ ಓವರ್‌ನಲ್ಲಿ ಕ್ರಿಸ್ ವೋಕ್ಸ್ ಎಸೆತದಲ್ಲಿ ರಾಬಿನ್ಸನ್‌ಗೆ ಕ್ಯಾಚಿತ್ತ ಹೆಡ್ ಇನಿಂಗ್ಸ್ ಮುಗಿಸಿದರು. ಜೊತೆಯಾಟವೂ ಮುರಿದುಬಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 59.3 ಓವರ್‌ಗಳಲ್ಲಿ 6ಕ್ಕೆ 241 (ಮಾರ್ನಸ್ ಲಾಬುಷೇನ್ 44, ಟ್ರಾವಿಸ್ ಹೆಡ್ 101, ಕ್ಯಾಮರಾನ್ ಗ್ರೀನ್ 74, ಸ್ಟುವರ್ಟ್ ಬ್ರಾಡ್ 48ಕ್ಕೆ2, ಒಲಿ ರಾಬಿನ್ಸನ್ 24ಕ್ಕೆ2).

ನಾರಾಯಣಮೂರ್ತಿ ಅಳಿಯ ರಿಷಿ ಸುನಕ್ ಬ್ರಿಟನ್‌ನ ಮುಂದಿನ ಪ್ರಧಾನಿ?



ರಿಷಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಅಧಿಕಾರದಿಂದ ಕೆಳಗಿಳಿಯಬೇಕು ಎಂಬ ಕೂಗು ಅವರ ಕನ್ಸರ್‌ವೇಟಿವ್ ಪಕ್ಷದೊಳಗೆ ಪ್ರಬಲವಾಗಿ ಕೇಳಿಬರುತ್ತಿದೆ. ಇದೇ ವೇಳೆ, ಪ್ರಧಾನಿ ಸ್ಥಾನಕ್ಕೆ ಭಾರತ ಮೂಲದ ರಿಷಿ ಸುನಕ್ ಅವರ ಹೆಸರು ಗಟ್ಟಿಯಾಗಿ ಕೇಳಿಬರುತ್ತಿದೆ. ರಿಷಿ ಅವರು ಇನ್ಫೊಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ಅಳಿಯ.

ರಿಷಿ ಅವರು 2015ರಲ್ಲಿ ಬ್ರಿಟನ್ ಸಂಸತ್ತನ್ನು ಪ್ರವೇಶಿಸಿದರು. 2020ರಲ್ಲಿ, ಬ್ರಿಟನ್ ಸಚಿವ ಸಂಪುಟದ ಪ್ರಮುಖ ಹುದ್ದೆಗಳಲ್ಲಿ ಒಂದಾದ ಹಣಕಾಸು ಸಚಿವ ಹುದ್ದೆಗೇರಿದರು. ಈ ಹುದ್ದೆಗೇರಿದ ಭಾರತ ಮೂಲದ ಪ್ರಥಮ ವ್ಯಕ್ತಿ ರಿಷಿ.

ಕೋವಿಡ್–19 ಸಾಂಕ್ರಾಮಿಕದಿಂದ ಬ್ರಿಟನ್ ತತ್ತರಿಸುತ್ತಿರುವ ವೇಳೆ ರಿಷಿ ಅವರು ದೇಶದ ಆರ್ಥಿಕತೆಯನ್ನು ನಿರ್ವಹಿಸುವಲ್ಲಿ ಯಶಸ್ವಿ ಆಗಿದ್ದಾರೆ. ಕೋವಿಡ್–19ರಿಂದ ತತ್ತರಿಸಿರುವ ಉದ್ಯೋಗ ಮತ್ತು ಉದ್ಯಮ ವಲಯಕ್ಕೆ ಅನುಕೂಲ ಮಾಡಿಕೊಡಲು ಹಲವಾರು ಯೋಜನೆಗಳನ್ನು ಕೈಗೊಂಡಿದ್ದಾರೆ. ಅವರ ಈ ಎಲ್ಲಾ ಕೆಲಸಗಳೂ ಅವರನ್ನು ಪ್ರಧಾನಿ ಹುದ್ದೆಯ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿ ಇರಿಸಿವೆ.

ಪ್ರಧಾನಿ ಅವರು, ಕೋವಿಡ್ ನಿಯಮಗಳನ್ನು ಮೀರಿ ಡೌನಿಂಗ್ ಸ್ಟ್ರೀಟ್ ಗಾರ್ಡನ್‌ನಲ್ಲಿ ನಡೆದ ಔತಣಕೂಟದಲ್ಲಿ ಭಾಗವಹಿಸಿದ್ದರು. ಆ ಕಾರಣಕ್ಕಾಗಿ ವಿಪಕ್ಷಗಳ ಸದಸ್ಯರು ಮಾತ್ರವಲ್ಲದೆ, ಸ್ವಪಕ್ಷದ ಸದಸ್ಯರಿಂದ ಟೀಕೆಗೊಳಗಾಗಿದ್ದರು. ಬಳಿಕ ಸಂಸತ್‌ನಲ್ಲಿ ಕ್ಷಮೆ ಯಾಚಿಸಿದ್ದರು. ಅವರು ಪ್ರಧಾನಿ ಹುದ್ದೆಯಿಂದ ಕೆಳಗಿಳಿಯಬೇಕು ಎಂಬ ಕೂಗು ಉಭಯ ಪಕ್ಷಗಳಿಂದಲೂ ಪ್ರಬಲವಾಗಿ ಕೇಳಿಬರುತ್ತಿದೆ.

‘ಬಿಪಿನ್ ರಾವತ್ ಸಾವು: ಪೈಲಟ್ ಕಕ್ಕಾಬಿಕ್ಕಿಯಾದ ಕಾರಣ ಅವಘಡ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮೂರೂ ಪಡೆಗಳ ಅಧಿಕಾರಿಗಳ ಸಮಿತಿಯ ವರದಿಯಲ್ಲಿ ಉಲ್ಲೇಖ
- ವರದಿಯ ಮುಖ್ಯಾಂಶಗಳನ್ನು ಬಹಿರಂಗಪಡಿಸಿದ ವಾಯುಪಡೆ
- ತಾಂತ್ರಿಕ, ಯಾಂತ್ರಿಕ ವೈಫಲ್ಯದಿಂದ ಪತನ ಸಂಭವಿಸಿಲ್ಲ

ನವದೆಹಲಿ: ‘ವಾತಾವರಣದಲ್ಲಿ ಆದ ದಿಢೀರ್ ಬದಲಾವಣೆಯಿಂದ ಪೈಲಟ್ ಕಕ್ಕಾಬಿಕ್ಕಿಯಾದರು. ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರು ಪ್ರಯಾಣಿಸುತ್ತಿದ್ದ ವಾಯುಪಡೆಯ ಎಂಐ–17 ವಿ5 ಹೆಲಿಕಾಪ್ಟರ್ ಪತನವಾಗಲು ಇದುವೇ ಕಾರಣ’ ಎಂದು ವಾಯುಪಡೆಯು ಶುಕ್ರವಾರ ಹೇಳಿದೆ. ಮೂರೂ ಸೇನೆಯ ಅಧಿಕಾರಿಗಳು ಇದ್ದ ಸಮಿತಿಯ ತನಿಖಾ ವರದಿಯಲ್ಲಿ ಹೀಗೆ ಹೇಳಲಾಗಿದೆ ಎಂದು ವಾಯುಪಡೆಯು ತಿಳಿಸಿದೆ.

‘ಹೀಗೆ ಆದ ಕಾರಣ ಹೆಲಿಕಾಪ್ಟರ್ ನೆಲಕ್ಕೆ ಅಪ್ಪಳಿಸಿದೆ. ಇದನ್ನು ‘ಕಂಟ್ರೋಲ್ಡ್ ಫ್ಲೈಟ್ ಇಂಟು ಟೆರೇನ್’ ಎನ್ನಲಾಗುತ್ತದೆ. ಪೈಲಟ್ ಮತ್ತು ಸಹ ಪೈಲಟ್‌ಗೆ ಅರಿವಿಲ್ಲದೆಯೇ, ಹೆಲಿಕಾಪ್ಟರ್ ನೆಲಮುಟ್ಟುವುದನ್ನು ಹೀಗೆ ಕರೆಯಲಾಗುತ್ತದೆ. ಇಂತಹ ಸಂದರ್ಭದಲ್ಲಿ ಹೆಲಿಕಾಪ್ಟರ್ ಅನ್ನು ನಿಯಂತ್ರಿಸುವ ಅಥವಾ ಸಹಾಯಕ್ಕಾಗಿ ಕರೆ ನೀಡುವ ಯಾವ ಅವಕಾಶಗಳೂ ಪೈಲಟ್‌ಗಳಿಗೆ ಇರುವುದಿಲ್ಲ’ ಎಂದು ವಾಯುಪಡೆಯು ಹೇಳಿದೆ.

‘ಹೆಲಿಕಾಪ್ಟರ್‌ನ ಫ್ಲೈಟ್ ಡೇಟಾ ರೆಕಾರ್ಡರ್ ಮತ್ತು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್‌ಗಳನ್ನು ಪರಿಶೀಲಿಸಲಾಗಿದೆ. ಲಭ್ಯವಿದ್ದ ಇತರ ಸಾಕ್ಷ್ಯಗಳನ್ನು ಪರಿಶೀಲಿಸಲಾಗಿದೆ. ಸಾಕ್ಷಿಗಳನ್ನೂ ವಿಚಾರಿಸಿ ಈ ತೀರ್ಮಾನಕ್ಕೆ ಬರಲಾಗಿದೆ. ಎಂಐ–17 ವಿ5 ಅತ್ಯಂತ ಸುರಕ್ಷಿತ ಹೆಲಿಕಾಪ್ಟರ್ ಆಗಿದೆ. ಯಾವುದೇ ಯಾಂತ್ರಿಕ ಮತ್ತು ತಾಂತ್ರಿಕ ತೊಂದರೆಯಿಂದ ಈ ಅವಘಾತ ಸಂಭವಿಸಿಲ್ಲ. ನಿರ್ಲಕ್ಷ್ಯದಿಂದಲೂ ಈ ಅಪಘಾತ ಸಂಭವಿಸಿಲ್ಲ. ಯಾವುದೇ ರೀತಿಯ ದಾಳಿಯಿಂದ ಈ ಅವಘಡ ಸಂಭವಿಸಿಲ್ಲ’ ಎಂದು ವಾಯುಪಡೆಯು ಹೇಳಿದೆ.

2021ರ ಡಿಸೆಂಬರ್ 8ರಂದು ತಮಿಳುನಾಡಿನ ವೆಲ್ಲಿಂಗ್ಟನ್‌ನಲ್ಲಿರುವ ಸೇನಾಶಾಲೆಯಲ್ಲಿ ಉಪನ್ಯಾಸ ನೀಡಲು ಬಿಪಿನ್ ರಾವತ್, ಅವರ ಪತ್ನಿ ಮತ್ತು ಇನ್ನೂ 12 ಸಿಬ್ಬಂದಿ ಹಾಗೂ ಅಧಿಕಾರಿಗಳು ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದರು. ವೆಲ್ಲಿಂಗ್ಟನ್‌ನಿಂದ ಇನ್ನು ಕೆಲವೇ ಕಿ.ಮೀ. ದೂರವಿರುವಾಗ ಹೆಲಿಕಾಪ್ಟರ್ ಪತನವಾಗಿತ್ತು. ರಾವತ್ ದಂಪತಿ ಸೇರಿ 11 ಮಂದಿ ಪತನದಲ್ಲಿ ಮೃತಪಟ್ಟಿದ್ದರು. ಅವಘಡದಲ್ಲಿ ಬದುಕುಳಿದಿದ್ದ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಬೆಂಗಳೂರಿನ ಸೇನಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಇಬ್ಬರು ವಕೀಲರಿಗೆ 2 ತಿಂಗಳು ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪ್ರೊ ಗ್ರೂಪ್ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಮತ್ತು ಅವರ ಟ್ರಸ್ಟ್ ವಿರುದ್ಧ ತನಿಖೆ ನಡೆಸುವಂತೆ ಕೋರಿ ಹಲವು ಸುಳ್ಳು ಮೊಕದ್ದಮೆ ಹೂಡಿದ್ದ ಚೆನ್ನೈನ ಸರ್ಕಾರೇತರ ಸಂಸ್ಥೆ, 'ಇಂಡಿಯಾ ಅವೇಕ್ ಫಾರ್ ಟ್ರಾನ್ಸಪರೆನ್ಸಿ ಸಂಸ್ಥೆ‘ ಪ್ರತಿನಿಧಿಸುತ್ತಿದ್ದ ಚೆನ್ನೈನ ವಕೀಲರಾದ ಆರ್.ಸುಬ್ರಮಣಿಯನ್ ಮತ್ತು ಪಿ.ಸದಾನಂದ ಅವರಿಗೆ ರಾಜ್ಯ ಹೈಕೋರ್ಟ್ ಎರಡು ತಿಂಗಳ ಸಾದಾ ಜೈಲು ಶಿಕ್ಷೆ ಹಾಗೂ ತಲಾ ₹ 2 ಸಾವಿರ ದಂಡ ವಿಧಿಸಿದೆ.

ಈ ಕುರಿತಂತೆ ವಿಪ್ರೊ ಗ್ರೂಪ್ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಸೇರಿದಂತೆ ಮೂವರು ಸಲ್ಲಿಸಿದ್ದ ಕ್ರಿಮಿನಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ತೀರ್ಪು ನೀಡಿದ್ದು, 'ಆರೋಪಿಗಳು ದಂಡ ಪಾವತಿಸದಿದ್ದರೆ ಪುನಃ ಒಂದು ತಿಂಗಳು ಜೈಲು ಶಿಕ್ಷೆ ಅನುಭವಿಸಬೇಕು‘ ಎಂದು ಆದೇಶಿಸಿದೆ.


ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಮಯ ನೀಡಬೇಕೆಂದು ಆರೋಪಿಗಳು ಕೋರಿದ್ದರಿಂದ ನ್ಯಾಯಪೀಠ, ನಾಲ್ಕು ವಾರಗಳ ಕಾಲ ತೀರ್ಪು ಅಮಾನತ್ತಿನಲ್ಲಿರಿಸಿದೆ. ಇಬ್ಬರೂ ವಕೀಲರು ಅಜೀಂ ಪ್ರೇಮ್‌ಜಿ ಮತ್ತು ವಿಪ್ರೊ ಕಂಪನಿ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಬಗೆಯ ಕೇಸ್ ದಾಖಲಿಸದಂತೆಯೂ ನ್ಯಾಯಪೀಠ ನಿರ್ಬಂಧ ವಿಧಿಸಿದೆ.

‘ನಿವೃತ್ತಿ ಯೋಧರ ಪಿಂಚಣಿ ಸಮಸ್ಯೆ: ಪೋರ್ಟಲ್ ನೆರವು’

ನವದೆಹಲಿ(ಪಿಟಿಐ): ನಿವೃತ್ತ ಯೋಧರು (ಇಎಸ್‌ಎಂ) ಮತ್ತು ಅವರ ಅವಲಂಬಿತರ ಪಿಂಚಣಿ ಸಂಬಂಧಿತ ಕುಂದುಕೊರತೆಗಳನ್ನು ಬಗೆಹರಿಸಲು ರಕ್ಷಣಾ ಸಚಿವಾಲಯವು ಆನ್‌ಲೈನ್ ಪೋರ್ಟಲ್ ಸ್ಥಾಪಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಕ್ರವಾರ ಘೋಷಿಸಿದ್ದಾರೆ.

ಸಶಸ್ತ್ರ ಪಡೆಗಳ ನಿವೃತ್ತ ಯೋಧರ ದಿನದ ಸಂದರ್ಭದಲ್ಲಿ ಮಾತನಾಡಿದ ಅವರು, ಮಾಜಿ ಸೈನಿಕರ ಕಲ್ಯಾಣ ಇಲಾಖೆಗೆ (ಡಿಇಎಸ್‌ಡಬ್ಲ್ಯು) ನೇರವಾಗಿ ಕುಂದು ಕೊರತೆಗಳ ಕುರಿತು ಅರ್ಜಿ ಸಲ್ಲಿಸಲು ಪೋರ್ಟಲ್‌ನಲ್ಲಿ ಅವಕಾಶ ವಿದೆ ಎಂದು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು ▼ 12



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,257
ಇಂದಿನ ಅಂತ್ಯ25	18,255
▼	2
ದಿನದ ಕನಿಷ್ಠ	18,119

ವಿನಿಮಯ ದರ

$ ಡಾಲರ್	74.15
£ ಪೌಂಡ್	101.71
€ ಯುರೊ	84.99
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1205 (1205)
ಸೂರ್ಯಕಾಂತಿ (ರಿಫೈನ್ಡ್)	₹1235 (1240)
ಪಾಮೋಲಿನ್	₹1162 (1165)

ನವೋದ್ಯಮಗಳ ಜೊತೆ ಮೋದಿ ಸಂವಾದ ಇಂದು

ನವದೆಹಲಿ (ಪಿಟಿಐ): ಕೃಷಿ ಮತ್ತು ಆರೋಗ್ಯ ಸೇರಿದಂತೆ ವಿವಿಧ ವಲಯಗಳ 150ಕ್ಕೂ ಅಧಿಕ ನವೋದ್ಯಮಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಶನಿವಾರ ಸಂವಾದ ನಡೆಸಲಿದ್ದಾರೆ.

150ಕ್ಕೂ ಹೆಚ್ಚು ನವೋದ್ಯಮಗಳನ್ನು 6 ತಂಡಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರತಿ ತಂಡವೂ ನಿಗದಿತ ವಿಷಯದಲ್ಲಿ ಪ್ರಧಾನಿಯವರ ಮುಂದೆ ವಿಚಾರ ಮಂಡನೆ ಮಾಡಲಿದೆ ಎಂದು ಪ್ರಧಾನಿ ಕಾರ್ಯಾಲಯ (ಪಿಎಂಒ) ತಿಳಿಸಿದೆ.

ದೇಶದ ಅಗತ್ಯಗಳಿಗೆ ನವೋದ್ಯಮಗಳು ಯಾವ ರೀತಿಯ ಕೊಡುಗೆ ನೀಡಬಹುದು ಎನ್ನುವುದನ್ನು ಅರಿತುಕೊಳ್ಳುವುದು ಸಂವಾದದ ಉದ್ದೇಶವಾಗಿದೆ ಎಂದು ಪಿಎಂಒ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯುತ್ ಮತ್ತು ತಯಾರಿಕಾ ವಸ್ತುಗಳ ಬೆಲೆ ಇಳಿಕೆ ಪರಿಣಾಮ

ತುಸು ತಗ್ಗಿದ ಸಗಟು ಹಣದುಬ್ಬರ



ಸಗಟು ಹಣದುಬ್ಬರದ ವಿವರ (%)

ತಿಂಗಳು	%
ಜೂನ್	12.07
ಜುಲೈ	11.57
ಆಗಸ್ಟ್	11.64
ಸೆಪ್ಟೆಂಬರ್	11.8
ಅಕ್ಟೋಬರ್	12.54
ನವೆಂಬರ್	14.23
ಡಿಸೆಂಬರ್	13.56

ನವದೆಹಲಿ (ಪಿಟಿಐ): ಸಗಟು ಹಣದುಬ್ಬರವು 2021ರ ನವೆಂಬರ್‌ಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಶೇ 13.56ಕ್ಕೆ ಇಳಿಕೆ ಆಗಿದೆ. ನವೆಂಬರ್‌ನಲ್ಲಿ ಶೇ 14.23ರಷ್ಟು ಗರಿಷ್ಠ ಮಟ್ಟದಲ್ಲಿ ಇತ್ತು.

ಆಹಾರ ವಸ್ತುಗಳ ದರ ಹೆಚ್ಚಾಗಿದ್ದರು ಸಹ ಇಂಧನ, ವಿದ್ಯುತ್ ಮತ್ತು ತಯಾರಿಕಾ ವಸ್ತುಗಳ ಬೆಲೆಯಲ್ಲಿ ಇಳಿಕೆ ಆಗಿರುವುದರಿಂದ ಸಗಟು ಹಣದುಬ್ಬರದಲ್ಲಿ ತುಸು ಇಳಿಕೆ ಕಂಡುಬಂದಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಶುಕ್ರವಾರ ಹೇಳಿದೆ.

ಸಗಟು ಹಣದುಬ್ಬರವು ಸತತ ಒಂಭತ್ತನೇ ತಿಂಗಳಿನಲ್ಲಿಯೂ ಎರಡಂಕಿ ಮಟ್ಟದಲ್ಲಿಯೇ ಮುಂದುವರಿದಿದೆ. ಲೋಹ, ಕಚ್ಚಾ ಪೆಟ್ರೋಲಿಯಂ ಉತ್ಪನ್ನಗಳು, ನೈಸರ್ಗಿಕ ಅನಿಲ, ರಾಸಾಯನಿಕ ಮತ್ತು ರಾಸಾಯನಿಕ ಉತ್ಪನ್ನಗಳು, ಆಹಾರ ವಸ್ತುಗಳು, ಜವಳಿ, ಪೇಪರ್ ಮತ್ತು ಅದರ ಉತ್ಪನ್ನಗಳ ಬೆಲೆ ಏರಿಕೆ ಆಗಿರುವುದರಿಂದ ಡಿಸೆಂಬರ್‌ನಲ್ಲಿಯೂ ಸಗಟು ಹಣದುಬ್ಬರವು ಗರಿಷ್ಠ ಮಟ್ಟದಲ್ಲಿಯೇ ಇದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ತಯಾರಿಕಾ ವಸ್ತುಗಳ ಹಣದುಬ್ಬರ ನವೆಂಬರ್‌ನಲ್ಲಿ ಶೇ 11.92 ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ ಶೇ 10.62ಕ್ಕೆ ಇಳಿಕೆ ಆಗಿದೆ. ಇಂಧನ ಮತ್ತು ವಿದ್ಯುತ್ ದರವು ಶೇ 39.81 ರಿಂದ ಶೇ 32.30ಕ್ಕೆ ಇಳಿಕೆ ಆಗಿದೆ. ಆದರೆ, ಆಹಾರ ವಸ್ತುಗಳ ಹಣದುಬ್ಬರವು ಶೇ 4.88ರಿಂದ ಶೇ 9.56ಕ್ಕೆ ಏರಿಕೆ ಆಗಿದೆ.

2021ರ ಅಕ್ಟೋಬರ್‌ನಲ್ಲಿ ಶೇ 0.1ರಷ್ಟಿದ್ದ ಆಹಾರ ಹಣದುಬ್ಬರವು ಡಿಸೆಂಬರ್‌ನಲ್ಲಿ 23 ತಿಂಗಳ ಗರಿಷ್ಠ ಮಟ್ಟವಾದ ಶೇ 9.6ಕ್ಕೆ ಏರಿಕೆ ಆಗಿದೆ ಎಂದು ಐಸಿಆರ್‌ಎನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಸಗಟು ಹಣದುಬ್ಬರವು ಎರಡಂಕಿ ಮಟ್ಟದಲ್ಲಿಯೇ ಮುಂದುವರಿದಿದೆ. ಹೀಗಾಗಿ 2022ರ ಫೆಬ್ರುವರಿಯಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತು ಅದನ್ನು ನಿಯಂತ್ರಿಸಲು ಯಾವ ಸ್ವರೂಪದ ನಿರ್ಬಂಧಗಳನ್ನು ಹೇರಲಾಗುತ್ತದೆ ಎನ್ನುವುದರ ಆಧಾರದ ಮೇಲೆ ಏಪ್ರಿಲ್‌ನಲ್ಲಿ ಬಡ್ಡಿದರಗಳಲ್ಲಿ ಬದಲಾವಣೆ ಆಗಬಹುದು ಎಂದು ಅವರು ತಿಳಿಸಿದ್ದಾರೆ.

ಡಿಸೆಂಬರ್‌ನಲ್ಲಿ ಪ್ರಯಾಣಿಕ ವಾಹನ ಸಗಟು ಮಾರಾಟ ಶೇ 13ರಷ್ಟು ಇಳಿಕೆ

ನವದೆಹಲಿ: ಪ್ರಯಾಣಿಕ ವಾಹನ ಸಗಟು ಮಾರಾಟವು 2020ರ ಡಿಸೆಂಬರ್‌ಗೆ ಹೋಲಿಸಿದರೆ 2021ರ ಡಿಸೆಂಬರ್‌ನಲ್ಲಿ ಶೇ 13ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಶುಕ್ರವಾರ ತಿಳಿಸಿದೆ.

2020ರ ಡಿಸೆಂಬರ್‌ನಲ್ಲಿ 2.52 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಅಗಿದ್ದವು. ಆದರೆ, ಸೆಮಿಕಂಡಕ್ಟರ್ ಚಿಪ್ ಕೊರತೆಯಿಂದಾಗಿ 2021ರ ಡಿಸೆಂಬರ್‌ನಲ್ಲಿ ಮಾರಾಟವು 2.19 ಲಕ್ಷಕ್ಕೆ ಇಳಿಕೆ ಆಗಿದೆ ಎಂದು ಹೇಳಿದೆ.

ದ್ವಿಚಕ್ರ ವಾಹನ ಮಾರಾಟವು ಶೇ 11ರಷ್ಟು ಇಳಿಕೆ ಆಗಿದ್ದು 10.06 ಲಕ್ಷಕ್ಕೆ ತಲುಪಿದೆ. 2020ರ ಡಿಸೆಂಬರ್‌ನಲ್ಲಿ 11 ಲಕ್ಷ ಇತ್ತು. ಸ್ಕೂಟರ್ ಮಾರಾಟ ಶೇ 24ರಷ್ಟು ಇಳಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಪ್ರಯಾಣಿಕ ವಾಹನ ಮಾರಾಟವು 8.97 ಲಕ್ಷದಿಂದ 7.61 ಲಕ್ಷಕ್ಕೆ ಶೇ 15ರಷ್ಟು ಇಳಿಕೆ ಆಗಿದೆ. ಎಲ್ಲಾ ವಿಭಾಗಗಳನ್ನು ಒಳಗೊಂಡು ಒಟ್ಟಾರೆ ಮಾರಾಟವು ಶೇ 22ರಷ್ಟು ಇಳಿಕೆ ಕಂಡಿದೆ ಎಂದು ಒಕ್ಕೂಟವು ತಿಳಿಸಿದೆ.

ಅಕ್ಟೋಬರ್–ಡಿಸೆಂಬರ್ ಅವಧಿಯ ಮಾರಾಟವು ಉದ್ಯಮದ ನಿರೀಕ್ಷೆಯಂತೆ ಇಲ್ಲ. ಕಳೆದ ವರ್ಷಗಳಿಗೆ ಹೋಲಿಸಿದರೆ 2021ರ ಹಬ್ಬದ ಋತುವಿನಲ್ಲಿ ವಾಹನ ಮಾರಾಟವು ಇಳಿಕೆ ಕಂಡಿದೆ. ವಾಹನಗಳಿಗೆ ಬೇಡಿಕೆ ಬಂದರೂ ಸೆಮಿಕಂಡಕ್ಟರ್ ಕೊರತೆಯಿಂದಾಗಿ ವಾಹನಗಳ ಪೂರೈಕೆ ಮೇಲೆ ಪರಿಣಾಮ ಉಂಟಾಯಿತು ಎಂದು ಒಕ್ಕೂಟದ ಅಧ್ಯಕ್ಷ ಕೆನೆಚಿ ಅಯುಕವಾ ಹೇಳಿದ್ದಾರೆ.

5 ದಿನಗಳ ಗೂಳಿ ಓಟಕ್ಕೆ ತಡೆ

ಮುಂಬೈ (ಪಿಟಿಐ): ಜಾಗತಿಕ ಷೇರು ಪೇಟೆಗಳ ನಕಾರಾತ್ಮಕ ಬೆಳವಣಿಗೆ ಮತ್ತು ವಿದೇಶಿ ಬಂಡವಾಳ ಹೊರಹರಿವಿನ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಐದು ದಿನಗಳ ಗೂಳಿ ಓಟಕ್ಕೆ ಶುಕ್ರವಾರ ತಡೆ ಬಿದ್ದಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 12 ಅಂಶ ಇಳಿಕೆ ಕಂಡು 61,223 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 2 ಅಂಶ ಇಳಿಕೆ ಕಂಡು 18,255 ಅಂಶಗಳಿಗೆ ತಲುಪಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 25 ಪೈಸೆ ಇಳಿಕೆ ಆಗಿದ್ದು, ಒಂದು ಡಾಲರ್‌ಗೆ ₹ 741.5ರಂತೆ ವಿನಿಮಯಗೊಂಡಿದೆ.

ರಫ್ತು ಶೇ 38.91ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು 2021ರ ಡಿಸೆಂಬರ್‌ನಲ್ಲಿ ₹ 2.79 ಲಕ್ಷ ಕೋಟಿಗಳಷ್ಟಾಗಿದ್ದು, 2020ರ ಡಿಸೆಂಬರ್‌ಗೆ ಹೋಲಿಸಿದರೆ ಶೇ 38.91ರಷ್ಟು ಏರಿಕೆ ಆಗಿದೆ.

ಎಂಜಿನಿಯರಿಂಗ್, ಜವಳಿ ಮತ್ತು ರಾಸಾಯನಿಕ ವಲಯಗಳ ಉತ್ತಮ ಬೆಳವಣಿಗೆಯಿಂದಾಗಿ ರಫ್ತು ವಹಿವಾಟಿನಲ್ಲಿ ಈ ಪ್ರಮಾಣದ ಪ್ರಗತಿ ಸಾಧ್ಯವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ಆಮದು ವಹಿವಾಟು ಶೇ 38.55ರಷ್ಟು ಹೆಚ್ಚಾಗಿದ್ದು, ಮೌಲ್ಯದ ಲೆಕ್ಕದಲ್ಲಿ ₹ 4.40 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ. ಆಮದು ಮತ್ತು ರಫ್ತು ವಹಿವಾಟು ಹೆಚ್ಚಳದಿಂದಾಗಿ ವ್ಯಾಪಾರ ಕೊರತೆ ಅಂತರವು ₹ 1.16 ಲಕ್ಷ ಕೋಟಿಗಳಿಂದ ₹ 1.60 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ಪೆಟ್ರೋಲಿಯಂ ಮತ್ತು ಕಚ್ಚಾ ತೈಲ ಆಮದು ಪ್ರಮಾಣವು ಶೇ 67.89ರಷ್ಟು ಏರಿಕೆ ಕಂಡಿರುವುದೇ ಆಮದು ವಹಿವಾಟು ಹೆಚ್ಚಳಕ್ಕೆ ಕಾರಣವಾಗಿದೆ. ಚಿನ್ನದ ಆಮದು ಶೇ 5.43ರಷ್ಟು ಹೆಚ್ಚಾಗಿದೆ.

‘ಸದ್ಯದ ಬೆಳವಣಿಗೆ ದರವನ್ನು ಗಮನಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ರಫ್ತು ಮೌಲ್ಯವು ₹ 29.60 ಲಕ್ಷ ಕೋಟಿಯ ಗುರಿ ತಲುಪುವ ನಿರೀಕ್ಷೆ ಇದೆ’ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎ. ಶಕ್ತಿವೇಲ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಚಿತ್ರದುರ್ಗ	
ಆಪಿ	44629-45059
ಬೆಟ್ಟೆ	37119-37579
ಕೆಂಪುಗೋಟು	31609-32010
ರಾಶಿ	44139-44569
ಪುತ್ತೂರು	
ಕೋಕ	11000-26000
ಹೊಸತು	27500-45000
ಶಿರಸಿ	
ಬೆಟ್ಟೆ	31569-42989
ಬಿಳಿಗೋಟು	16899-37699
ಚಾಲಿ	32199-41599
ರಾಶಿ	39549-47489
ರಾಮನಗರ ರೇಷ್ಮೆ	
ಮಿಶ್ರತಳಿ	352-552
ದ್ವಿತಳಿ	405-777

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ: ಮುದ್ರೆಮನೆ	ಹಾಸನ: ಪ್ಲಾಂಟರ್ಸ್	ಹಾಸನ: ಅಲ್ಲಾನಾ	ನ್ಯೂಯಾರ್ಕ್
ಎಪಿ	---	15500	15700	237 ಸೆಂಟ್ಸ್
ಎಸಿ	---	7000	7000	
ಆರ್‌ಪಿ	---	6900	7100	ಲಂಡನ್
ಆರ್‌ಸಿ	---	3900	3900	2237 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 14-1-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9000-9050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1150 (1150)
ಪಾಮ್ ವಾರದ ಡೆಲಿವರಿ	1160 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,975 (47,750)
ಬೆಳ್ಳಿ ಕೆ.ಜಿ	61,850 (61,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ನಾಲ್ಕರ ಘಟ್ಟಕ್ಕೆ ಆಕರ್ಷಿ ಕಶ್ಯಪ್

ಸೆಮಿಫೈನಲ್‌ಗೆ ಸಿಂಧು, ಲಕ್ಷ್ಯ

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಭಾರತದ ಪಿ.ವಿ.ಸಿಂಧು ಮತ್ತು ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಸೇನ್ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗಗಳಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸಿಂಧು ಅವರು 21-7, 21-18ರಿಂದ ಸ್ವದೇಶದ ಪ್ರತಿಭೆ ಅಸ್ಮಿತಾ ಚಲಿಹಾ ಅವರನ್ನು ಮಣಿಸಿದರು. ಎಂಟರಘಟ್ಟದ ಜಿದ್ದಾಜಿದ್ದಿನ ಸೆಣಸಾಟದಲ್ಲಿ ಲಕ್ಷ್ಯ 14-21, 21-9, 21-14ರಿಂದ ಭಾರತದ ಎಚ್‌.ಎಸ್‌. ಪ್ರಣಯ್ ಅವರಿಗೆ ಸೋಲುಣಿಸಿದರು.

ಸೆಮಿಫೈನಲ್‌ನಲ್ಲಿ ಸೇನ್ ಅವರು ಮಲೇಷ್ಯಾದ ಎನ್‌ಜಿ ಜೆ ಯಾಂಗ್ ಅವರನ್ನು ಎದುರಿಸುವರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ 21-18, 21-18ರಿಂದ ಸಿಂಗಪುರದ ಹೀ ಯಾಂಗ್ ಕಾಯ್ ಟೆರಿ ಮತ್ತು ಲೋಹ್ ಕೀನ್ ಹೀನ್ ಎದುರು ಗೆದ್ದು ನಾಲ್ಕರ ಘಟ್ಟ ಪ್ರವೇಶಿಸಿದರು. ಮಹಿಳಾ ಡಬಲ್ಸ್‌ನಲ್ಲಿ ಹರಿತಾ ಮನಳಿಯಿಲ್ ಹರಿನಾರಾಯಣ್– ಆಸ್ನಾ ರಾಯ್ ಜೋಡಿಯು 21-16, 21-16ರಿಂದ ರುದ್ರಾಣಿ ಜೈಸ್ವಾಲ್ ಮತ್ತು ಜಮಾಲುದೀನಾ ಅನೀಸ್ ಕೋಸ್ವಾರ್ ಎದುರು ಗೆದ್ದು ಸೆಮಿಫೈನಲ್ ತಲುಪಿತು.

ಅಸ್ಮಿತಾ ಸವಾಲು ಮೀರಿದ ಸಿಂಧು: ಇಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಮಾಜಿ ವಿಶ್ವ ಚಾಂಪಿಯನ್ ಆಟಗಾರ್ತಿ ಸಿಂಧು, ಮಹಿಳಾ ಸಿಂಗಲ್ಸ್ ವಿಭಾಗದ 36 ನಿಮಿಷಗಳ ಪಂದ್ಯದಲ್ಲಿ ಅಸ್ಮಿತಾ ಸವಾಲು ಮೀರಿದರು. ನಾಲ್ಕರ ಘಟ್ಟದ ಸೆಣಸಾಟದಲ್ಲಿ ಅವರಿಗೆ ಆರನೇ ಶ್ರೇಯಾಂಕದ, ಥಾಯ್ಲೆಂಡ್‌ನ ಸುಪನಿದಾ ಕೇಟ್‌ಥೊಂಗ್ ಮುಖಾಮುಖಿಯಾಗಲಿದ್ದಾರೆ.


ಪಿ.ವಿ.ಸಿಂಧು ಆಟದ ವೈಖರಿ– ಪಿಟಿಐ ಚಿತ್ರ

ಸಿಂಗಪುರದ ಯೊ ಜಿಯಾ ಮಿನ್ ಅವರು 'ತೀವ್ರ ಜ್ವರ'ದ ಕಾರಣ ಕ್ವಾರ್ಟರ್‌ಫೈನಲ್ ಪಂದ್ಯದಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ಅವರ ಎದುರಾಳಿಯಾಗಿದ್ದ ಸುಪನಿದಾ ಸೆಮಿಫೈನಲ್ ತಲುಪಿದರು.

2019ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಅಸ್ಮಿತಾ ಎದುರು ಆಡಿದ್ದ ಸಿಂಧು ಅವರು ಗೆಲುವು ಸಾಧಿಸಿದ್ದರು. ಆಗ ಅಸ್ಸಾಂನ 20 ವರ್ಷದ ಆಟಗಾರ್ತಿಯು ತೋರಿದ ಸಾಮರ್ಥ್ಯ ಗಮನಸೆಳೆದಿತ್ತು.

ಆಕರ್ಷಿಗೆ ಬುಸಾನನ್ ಎದುರಾಳಿ: ಮಹಿಳಾ ಸಿಂಗಲ್ಸ್‌ನ ಮತ್ತೊಂದು ಸೆಮಿಫೈನಲ್‌ನಲ್ಲಿ ಭಾರತದ ಆಕರ್ಷಿ ಕಶ್ಯಪ್ ಅವರು ಥಾಯ್ಲೆಂಡ್ ಆಟಗಾರ್ತಿ, ಎರಡನೇ ಶ್ರೇಯಾಂಕದ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಅವರನ್ನು ಎದುರಿಸಲಿದ್ದಾರೆ. ಕ್ವಾರ್ಟರ್‌ಫೈನಲ್‌ನಲ್ಲಿ ಆಕರ್ಷಿ 21-12, 21-15ರಿಂದ ಭಾರತದವರೇ ಆದ ಮಾಳವಿಕಾ ಬಾನ್ಸೋದ್ ಅವರನ್ನು ಸೋಲಿಸಿದರು. ಬುಸಾನನ್ 21-12, 21-8ರಿಂದ ಅಮೆರಿಕದ ಲಾರೆನ್ ಲಾಮ್ ಅವರನ್ನು ಮಣಿಸಿದರು.


ಲಕ್ಷ್ಯ ಸೇನ್

ಪುರುಷರ ಡಬಲ್ಸ್ ಜೋಡಿ ಇಶಾನ್ ಭಟ್ನಾಗರ್ ಮತ್ತು ಸಾಯಿ ಪ್ರತೀಕ್ 7-21, 7-21ರಿಂದ ಮಲೇಷ್ಯಾದ ಒಂಗ್ ಯಿವ್ ಸಿನ್ ಮತ್ತು ಟಿಯೊ ಈ ಯಿ ಎದುರು ನಿರಾಸೆ ಅನುಭವಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ವೆಂಕಟ ಗೌರವ್ ಪ್ರಸಾದ್– ಜೂಹಿ ದೇವಾಂಗನ್ ಕೂಡ 10-21, 13-21ರಿಂದ ಮಲೇಷ್ಯಾದ ಚೆನ್ ತಾಂಗ್ ಜೀ ಮತ್ತು ಪೆಕ್ ಯೆನ್ ವೇ ಎದುರು ಸೋಲನುಭವಿಸಿದರು. ನಿತಿನ್ ಎಚ್‌.ವಿ. ಮತ್ತು ಅಶ್ವಿನಿ ಭಟ್ ಕೆ. 15-21 19-21ರಿಂದ ಸಿಂಗಪುರದ ಹೀ ಯೊಂಗ್ ಕಾಯ್ ಟೆರಿ ಮತ್ತು ತಾನ್ ವೇ ಹಾನ್ ಎದುರು ಎಡವಿದರು.

ಬೆಂಗಳೂರು ಎಫ್‌ಸಿಗೆ ಎಟಿಕೆಎಂಬಿ ಸವಾಲು

ಮಡಗಾಂವ್ (ಪಿಟಿಐ): ಕಳೆದ ಪಂದ್ಯದಲ್ಲಿ ಭರ್ಜರಿ ಗೆಲುವಿನ ಮೂಲಕ ಲಯ ಕಂಡುಕೊಂಡಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಎಟಿಕೆ ಮೋಹನ್ ಬಾಗನ್ ತಂಡವನ್ನು ಎದುರಿಸಲಿದೆ.

ಕಳೆದ ಐದು ಪಂದ್ಯಗಳಲ್ಲಿ ಅಜೇಯವಾಗಿರುವ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ, ಹೋದ ಪಂದ್ಯದಲ್ಲಿ ಬಲಿಷ್ಠ ಮುಂಬೈ ಸಿಟಿ ಎಫ್‌ಸಿಗೆ ಸೋಲುಣಿಸಿತ್ತು. ಬಿಎಫ್‌ಸಿಯ ಪ್ರಿನ್ಸ್ ಇಬಾರ ಗೋಲು ಗಳಿಸುವ ಮೂಲಕ ಕ್ಲೀಟನ್ ಸಿಲ್ವಾ ಮೇಲಿನ ಒತ್ತಡವನ್ನು ಕಡಿಮೆ ಮಾಡಿದ್ದಾರೆ.

ಈ ಪಂದ್ಯದಲ್ಲಿ ಗೆದ್ದು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಛಲದಲ್ಲಿ ಎಟಿಕೆಎಂಬಿ ಇದೆ.

ಗೋವಾ– ನಾರ್ತ್‌ಈಸ್ಟ್ ಸಮಬಲ: ಶುಕ್ರವಾರ ಎಫ್‌ಸಿ ಗೋವಾ ಮತ್ತು ನಾರ್ತ್‌ಈಸ್ಟ್ ತಂಡಗಳ ನಡುವಣ ಪಂದ್ಯವು 1–1ರ ಡ್ರಾನಲ್ಲಿ ಅಂತ್ಯವಾಯಿತು. ನಾರ್ತ್‌ಈಸ್ಟ್‌ನ ಹೆರ್ನಾನ್ ಸಂಟಾನ ಅವರು 2ನೇ ನಿಮಿಷದಲ್ಲೇ ಗೋಲು ದಾಖಲಿಸಿದರು. ಆದರೆ ಗೋವಾ ತಂಡದ 39ನೇ ನಿಮಿಷದಲ್ಲಿ ಸಮಬಲದ ಗೋಲು ಹೊಡೆದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕ್ರಿಕೆಟ್: ಭಾರತ– ದಕ್ಷಿಣ ಆಫ್ರಿಕಾ ಮುಖಾಮುಖಿ

ಜಾರ್ಜ್‌ಟೌನ್, ಗಯಾನ (ಪಿಟಿಐ): ನಾಲ್ಕು ಬಾರಿಯ ಚಾಂಪಿಯನ್ ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಶನಿವಾರ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.


ಭಾರತ ತಂಡಕ್ಕೆ ನಾಯಕ ಯಶ್ ಧುಳ್ ಬ್ಯಾಟಿಂಗ್ ಬಲವಿದ್ದರೆ, ಹರ್ನೂರ್ ಸಿಂಗ್ ಮತ್ತು ರವಿಕುಮಾರ್ ಬೌಲಿಂಗ್‌ನಲ್ಲಿ ಮಿಂಚಬಲ್ಲರು. ಏಷ್ಯಾಕಪ್ ಜಯ ಸೇರಿದಂತೆ ಹಲವು ಟೂರ್ನಿಗಳಲ್ಲಿ ಈಗಾಗಲೇ ಇವರು ತಮ್ಮ ಸಾಮರ್ಥ್ಯ ಸಾಬೀತು ಮಾಡಿದ್ದಾರೆ.

ಭಾರತ 2000, 2008, 2012 ಮತ್ತು 2018ರಲ್ಲಿ ಪ್ರಶಸ್ತಿ ಜಯಿಸಿತ್ತು. 2020ರ ಆವೃತ್ತಿಯಲ್ಲಿ ಬಾಂಗ್ಲಾ ಎದುರು ಸೋತು ರನ್ನರ್ಸ್‌ಅಪ್ ಆಗಿತ್ತು.

ದಕ್ಷಿಣ ಆಫ್ರಿಕಾ ತಂಡವು ಯುವ ಪಡೆಗೆ ಸವಾಲೊಡ್ಡಲು ಸಜ್ಜಾಗಿದೆ. 2014ರಲ್ಲಿ ದುಬೈಯಲ್ಲಿ ನಡೆದ ವಿಶ್ವಕಪ್ ಆವೃತ್ತಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿತ್ತು.

ಎರಡನೇ ಸಲ ನೊವಾಕ್ ವೀಸಾ ರದ್ದು


ಮೆಲ್ಬರ್ನ್(ಎಪಿ): ವಿಶ್ವ ಶ್ರೇಯಾಂಕದಲ್ಲಿ ಅಗ್ರಸ್ಥಾನದಲ್ಲಿರುವ ನೋವಾಕ್ ಜೊಕೊವಿಚ್ ಅವರ ವೀಸಾವನ್ನು ಆಸ್ಟ್ರೇಲಿಯಾ ಸರ್ಕಾರವು ಎರಡನೇ ಬಾರಿ ರದ್ದು ಮಾಡಿದೆ.


ನೋವಾಕ್ ಜೊಕೊವಿಚ್

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ ಆರಂಭಕ್ಕೆ ಇನ್ನೂ ಮೂರು ದಿನಗಳು ಮಾತ್ರ ಬಾಕಿ ಉಳಿದಿರುವಾಗ ಈ ಕ್ರಮ ಕೈಗೊಳ್ಳಲಾಗಿದೆ. ಕೋವಿಡ್ ಲಸಿಕೆಯನ್ನು ಹಾಕಿಸಿಕೊಂಡಿರುವ ಬಗ್ಗೆ ಅಧಿಕೃತ ದಾಖಲೆಗಳನ್ನು ನೀಡದ ಹಿನ್ನೆಲೆಯಲ್ಲಿ ಜೊಕೊವಿಚ್ ಅವರ ವೀಸಾವನ್ನು ಶುಕ್ರವಾರ ರದ್ದುಗೊಳಿಸಲಾಗಿದೆ.

ಲಸಿಕೆ ಪಡೆಯದ ಜೊಕೊವಿಚ್ ಅವರಿಂದ ಬೇರೆಯವರಿಗೂ ಅಪಾಯವಾಗಬಹುದು. ಆದ್ದರಿಂದ ವೀಸಾ ರದ್ದು ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ.

ಜೊಕೊವಿಚ್ ವಿರುದ್ಧ ಕ್ರಮ ಸರಿ: ವಾರ್ನ್


ಶೇನ್ ವಾರ್ನ್

ನೊವಾಕ್ ಜೊಕೊವಿಚ್ ಅಪ್ರತಿಮ ಆಟಗಾರ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ, ಈಗ ಮಾಡಿರುವ ತಪ್ಪಿಗೆ ಅವರನ್ನು ದೇಶದಿಂದ ಹೊರಹಾಕಲು ಆಸ್ಟ್ರೇಲಿಯಾ ಸರ್ಕಾರಕ್ಕೆ ಎಲ್ಲ ಹಕ್ಕುಗಳೂ ಇವೆ ಎಂದು ಮಾಜಿ ಕ್ರಿಕೆಟಿಗ ಶೇನ್ ವಾರ್ನ್ ಹೇಳಿದ್ದಾರೆ.

ಇಡೀ ಪ್ರಕರಣದ ಬಗ್ಗೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಶೇನ್ ವಾರ್ನ್, 'ಜೊಕೊವಿಚ್ ಶ್ರೇಷ್ಠ ಟೆನಿಸ್ ಆಟಗಾರ ಮತ್ತು ಸಾರ್ವಕಾಲಿಕ ಶ್ರೇಷ್ಠರಲ್ಲಿ ಒಬ್ಬರು. ಆದರೆ, ಅವರು ಪ್ರವೇಶ ಪತ್ರಗಳಲ್ಲಿ ಸುಳ್ಳು ಮಾಹಿತಿ ನೀಡಿದ್ದಾರೆ. ಕೋವಿಡ್ ಇರುವುದು ಗೊತ್ತಿದ್ದರೂ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಇದೀಗ ಕಾನೂನು ಪ್ರಕರಣ ಎದುರಿಸುತ್ತಿದ್ದಾರೆ. ಅವರು ಅರ್ಹರಾಗಿದ್ದೂ ಲಸಿಕೆ ಹಾಕಿಸಿಕೊಂಡಿಲ್ಲ. ಅವರನ್ನು ಹೊರಹಾಕಲು ಆಸ್ಟ್ರೇಲಿಯಾ ಅರ್ಹವಾಗಿದೆ. ಇದನ್ನು ಒಪ್ಪುತ್ತೀರಾ' ಎಂದು ಪ್ರಶ್ನಿಸಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಕೋವಿಡ್ ಲಸಿಕೆ ಪಡೆದಿರುವುದು ಕಡ್ಡಾಯ. ಆದರೆ, ಕಳೆದ ವಾರ ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕಿದ್ದ ಜೊಕೊವಿಚ್ ವೈದ್ಯಕೀಯ ವಿನಾಯಿತಿ ಪಡೆದುಕೊಂಡು ಬಂದಿದ್ದರು. ಅವರನ್ನು ವಶಕ್ಕೆ ಪಡೆದುಕೊಂಡಿದ್ದ ಅಧಿಕಾರಿಗಳು ವೀಸಾ ತಡೆ ಹಿಡಿದು ಹೋಟೆಲ್‌ನಲ್ಲಿ ಇರಿಸಿದ್ದರು. ಇದರ ವಿರುದ್ಧ ಜೊಕೊವಿಚ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ಆಸ್ಟ್ರೇಲಿಯಾದಲ್ಲಿ ಉಳಿದುಕೊಳ್ಳಲು ಮತ್ತು ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಅವರಿಗೆ ಅವಕಾಶ ನೀಡುವಂತೆ ನ್ಯಾಯಾಧೀಶರು ಸೂಚಿಸಿದ್ದರು.

ಕಾಮನ್‌ವೆಲ್ತ್ ಬೇಟನ್ ರಿಲೆಗೆ ಅದ್ದೂರಿ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮನ್‌ವೆಲ್ತ್ ಕ್ರೀಡಾಕೂಟದ ಕ್ವೀನ್ಸ್ ಬೇಟನ್ ರಿಲೆಯನ್ನು ವಿಧಾನಸೌಧದಲ್ಲಿ ಶುಕ್ರವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಸ್ವಾಗತಿಸಿದರು.

ಇದೇ 12ರಂದು ನವದೆಹಲಿಗೆ ಬಂದಿದ್ದ ರಿಲೆ ಗುರುವಾರ ಉದ್ಯಾನ ನಗರಿಗೆ ಆಗಮಿಸಿತ್ತು. ವಿಧಾನಸೌಧದಲ್ಲಿ ರಾಜ್ಯಪಾಲರು ಬೇಟನ್ ಅನ್ನು ಅಥ್ಲೀಟ್‌ಗಳಿಗೆ ಹಸ್ತಾಂತರಿಸಿದರು. ಬೇಟನ್ ಅನ್ನು ಸ್ವೀಕರಿಸಿದ ಧ್ಯಾನ್‌ಚಂದ್ ಖೇಲ್‌ರತ್ನ ಪ್ರಶಸ್ತಿ ಪುರಸ್ಕೃತ ಅಥ್ಲೀಟ್‌ಗಳಾದ ಅಂಜು ಬಾಬಿ ಜಾರ್ಜ್, ಉದಯ ಕೆ ಪ್ರಭು, ಒಲಿಂಪಿಯನ್ ಹಾಕಿ ಆಟಗಾರ ಎ.ಬಿ. ಸುಬ್ಬಯ್ಯ, ಈಜುಪಟು ರಿಧಿಮಾ ವೀರೇಂದ್ರಕುಮಾರ್ ಅವರು ರಿಲೆಗೆ ಕೈಜೋಡಿಸಿದರು.

ವಿಧಾನಸೌಧದಿಂದ ಕಬ್ಬನ್ ಉದ್ಯಾನವನದಲ್ಲಿರುವ ಕೇಂದ್ರ ಗ್ರಂಥಾಲಯ, ಕಾರ್ಪೊರೇಷನ್ ವೃತ್ತ, ಕಸ್ತೂರ್ ಬಾ ರಸ್ತೆಯ ಮೂಲಕ ಕಂಠೀರವ ಕ್ರೀಡಾಂಗಣದವರೆಗೆ ಸಂಚರಿಸಿತು. ಈ ಸಂದರ್ಭದಲ್ಲಿ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಇದ್ದರು.

ಬೇಟನ್ಸ್ ರಿಲೆಯು ಬೆಂಗಳೂರಿನಿಂದ ಶುಕ್ರವಾರವೇ ಒಡಿಶಾದ ಭುವನೇಶ್ವರಕ್ಕೆ ತೆರಳಿತು. ಅಲ್ಲಿಂದ ಸಿಂಗಪುರಕ್ಕೆ ತೆರಳಲಿದೆ.

ಜುಲೈ 28ರಿಂದ ಆಗಸ್ಟ್ 8ರವರೆಗೆ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ನಿಗದಿಯಾಗಿವೆ.

ಕ್ರೀಡಾಪಟುಗಳಿಗೆ ವೈಜ್ಞಾನಿಕ ತರಬೇತಿ ಅಗತ್ಯ: ಬೇಟನ್ ರಿಲೆ ಸ್ವಾಗತ ಕಾರ್ಯಕ್ರಮದಲ್ಲಿ ವರ್ಚುವಲ್ ಆಗಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕ್ರೀಡಾಪಟುಗಳಿಗೆ ವೈಜ್ಞಾನಿಕವಾಗಿ ಮಾರ್ಗದರ್ಶನ ನೀಡುವ ಕೆಲಸವನ್ನು ತರಬೇತಿದಾರರು ಮಾಡಬೇಕಾದ ಅಗತ್ಯವಿದೆ ಎಂದು ಹೇಳಿದರು. ಬೇಟನ್ ರಿಲೆ ಸ್ವಾಗತ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಅಧ್ಯಕ್ಷ ಕೆ. ಗೋವಿಂದರಾಜು, ಕೆಒಎ ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು, ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರು ಇದ್ದರು.


ಕಾಮನ್‌ವೆಲ್ತ್ ಕ್ರೀಡಾಕೂಟದ ಬೇಟನ್ ರಿಲೆ ರ‍್ಯಾಲಿಯಲ್ಲಿ ರಾಜ್ಯದ ಈಜುಪಟು ರಿಧಿಮಾ ವೀರೇಂದ್ರಕುಮಾರ್, ಧ್ಯಾನ್‌ಚಂದ್ ಖೇಲ್‌ರತ್ನ ಪ್ರಶಸ್ತಿ ಪುರಸ್ಕೃತ ಅಥ್ಲೀಟ್ ಅಂಜು ಬಾಬಿ ಜಾರ್ಜ್, ಒಲಿಂಪಿಯನ್ ಹಾಕಿ ಪಟು ಎ.ಬಿ. ಸುಬ್ಬಯ್ಯ, ಧ್ಯಾನ್‌ಚಂದ್ ಖೇಲರತ್ನ ಪ್ರಶಸ್ತಿ ಪುರಸ್ಕೃತ ಅಥ್ಲೀಟ್ ಉದಯ ಕೆ. ಪ್ರಭು ಪಾಲ್ಗೊಂಡಿದ್ದರು– ಪ್ರಜಾವಾಣಿ ಚಿತ್ರ

ನ್ಯಾನ್ಸಿ ಹ್ಯಾಟ್ರಿಕ್ ಗೋಲು


ಬೆಂಗಳೂರು: ನ್ಯಾನ್ಸಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಮಾತೃ ಪ್ರತಿಷ್ಠಾನ ಎಫ್‌ಸಿ ತಂಡವು ಭರ್ಜರಿ ಜಯ ಗಳಿಸಿತು. ಕೆಎಸ್‌ಎಫ್‌ಎ ವಿಮೆನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 7–1ರಿಂದ ಸ್ಲ್ಯಾಮ್‌ಜರ್ ಬೆಳಗಾವಿ ತಂಡವನ್ನು ಮಣಿಸಿತು.

ತಂಡದ ಪರ ನ್ಯಾನ್ಸಿ 37, 59 ಮತ್ತು 90ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಕೀರ್ತನಾ (27ನೇ ಮತ್ತು 83ನೇ ನಿ.) ಮಿಂಚಿದರೆ ಸೌಮ್ಯಾ (76ನೇ ನಿ.) ಮತ್ತು ಪ್ರಿಯಾಂಕಾ (86ನೇ ನಿ.) ಅವರು ವಿಜೇತ ತಂಡದ ಪರ ಗೋಲು ದಾಖಲಿಸಿದರು. ಬೆಳಗಾವಿ ತಂಡದ ಕಿಮೊಥ್ 15ನೇ ನಿಮಿಷದಲ್ಲಿ ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ರೆಬೆಲ್ಸ್ ವಿಮೆನ್ಸ್ ಎಫ್‌ಸಿ ತಂಡವು ಬೆಂಗಳೂರು ಸಾಕರ್ ಗೆಲಾಕ್ಸಿ ತಂಡದೊಂದಿಗೆ ಗೋಲುರಹಿತ ಡ್ರಾ ಸಾಧಿಸಿತು.

ಪ್ರೇಮಾ ರೇಸಿಂಗ್‌ಗೆ ಜೆಹಾನ್ ದಾರುವಾಲಾ

ಮುಂಬೈ: ಭಾರತದ ಅಗ್ರ ರೇಸರ್ ಜೆಹಾನ್ ದಾರುವಾಲಾ ಅವರು 2022ರ ಋತುವಿನಲ್ಲಿ ಇಟಲಿಯ ಪ್ರೇಮಾ ರೇಸಿಂಗ್ ಪರ ಕಣಕ್ಕಿಳಿಯಲು ಒಪ್ಪಂದಕ್ಕೆ ಸಹಿಹಾಕಿದ್ದಾರೆ.


ಜೆಹಾನ್

ಮುಂಬೈ ಮೂಲದ 23 ವರ್ಷದ ಜೆಹಾನ್, ಸತತ ಮೂರನೇ ವರ್ಷ ರೆಡ್‌ಬುಲ್ ಕಿರಿಯರ ತಂಡದೊಂದಿಗೂ ಮುಂದುವರಿಯಲಿದ್ದಾರೆ.

'ಪ್ರೇಮಾ ರೇಸಿಂಗ್ ತಂಡದೊಂದಿಗೆ ಮತ್ತೊಮ್ಮೆ ಕೈಜೋಡಿಸುತ್ತಿರುವುದು ಬಹಳ ಖುಷಿ ನೀಡಿದೆ' ಎಂದು ಜೆಹಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.